
"ಮಕ್ಕಳ ಹಕ್ಕುಗಳು ಮತ್ತು ಮಕ್ಕಳ ಸಂರಕ್ಷಣೆ" ಸಂಬಂಧಿಸಿದಂತೆ ವಿವಿಧ ಹಂತಗಳಲ್ಲಿರುವ ವ್ಯವಸ್ಥೆಗಳು ಮತ್ತು ಅವುಗಳ ಕಾರ್ಯಚಟುವಟಿಕೆಗಳು. ಹಾಗೂ

ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿ.(WCPC)ಯ ರಚನೆ ಹಾಗೂ ಕಾರ್ಯಚಟುವಟಿಕೆಗಳ ಬಗ್ಗೆ ತರಬೇತಿ



unicef for every child



ಇಂದಿನ ಮಕ್ಕಳೇ

ಇಂದಿನ ಪ್ರಜೆಗಳು.




**ಭಾಗ - II**

**ನಾಗರಿಕತ್ವ**

**5. ಸಂವಿಧಾನದ ಪ್ರಾರಂಭದಲ್ಲಿ ನಾಗರಿಕತ್ವ:-** ಈ ಸಂವಿಧಾನದ ಪ್ರಾರಂಭದಲ್ಲಿ ಭಾರತದ ರಾಜ್ಯಕ್ಷೇತ್ರದಲ್ಲಿ ಅಧಿವಾಸವುಳ್ಳ ಮತ್ತು-

(ಎ) ಭಾರತದ ರಾಜ್ಯಕ್ಷೇತ್ರದಲ್ಲಿ ಹುಟ್ಟಿರುವ; ಅಥವಾ

(ಬಿ) ತನ್ನ ತಾಯಿಯಾಗಲಿ, ತಂದೆಯಾಗಲಿ ಭಾರತದ ರಾಜ್ಯಕ್ಷೇತ್ರದಲ್ಲಿ ಹುಟ್ಟಿದ್ದ; ಅಥವಾ

(ಸಿ) ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಐದು ವರ್ಷಗಳಿಗೆ ಕಡಿಮೆ ಇಲ್ಲದಷ್ಟು ಕಾಲದಿಂದ ಭಾರತದ ರಾಜ್ಯಕ್ಷೇತ್ರದಲ್ಲಿ ಸಾಮಾನ್ಯವಾಗಿ ನಿವಾಸಿಯಾಗಿರುವ


- ಪ್ರತಿಯೊಬ್ಬ ವ್ಯಕ್ತಿಯೂ ಭಾರತದ ನಾಗರಿಕನಾಗಿರತಕ್ಕದ್ದು.



## ಮಕ್ಕಳ ಹಕ್ಕುಗಳು

### ಭಾರತ ಸಂವಿಧಾನದ ಪ್ರಕಾರ :

**ಪ್ರೀತಿ, ವಾತ್ಸಲ್ಯ, ಬಾಲ್ಯ, ವಿಶ್ವಾಸ, ರಕ್ಷಣೆ, ಪೋಷಣೆ,ಆರೋಗ್ಯ,ಆಟಪಾಠ,ಅವಕಾಶ, ಭಾಗವಹಿಸುವುದು, ಅಭಿಪ್ರಾಯ, ಮೆಚ್ಚುಗೆ, ಪೌಷ್ಠಿಕ ಆಹಾರ, ವಸತಿ, ಶಿಕ್ಷಣ, ಮನರಂಜನೆ, ಸಂತೋಷ, ಸ್ನೇಹ ಇತ್ಯಾದಿ.**



# "ಹಕ್ಕು"

ಅತ್ಯಂತ ಅಗತ್ಯವಾದದ್ದು, ಬೇಕೇ ಬೇಕಾದದ್ದು
ಯಾರೂಕೂಡ ತಡೆಯಬಾರದ್ದು, ಕಸಿಯಬಾರದ್ದು, ದಿನನಿತ್ಯ
ಬೇಕಾದ್ದು, ಕಾನೂನಾತ್ಮಕ, ಸಾಮಾಜಿಕ, ನೈತಿಕ ಸ್ವಾತಂತ್ರ್ಯದ
ತತ್ವದಡಿಯಲ್ಲಿ ರಚಿತವಾದ ಮೂಲಭೂತ ಭಾದ್ಯತೆಗಳಾದ
ಪ್ರತಿಕ್ಷಣ ಅನುಭವಿಸಬೇಕಾದ ಅಂಶಗಳು

**"ಹಕ್ಕು"**



# ಭಾರತದ ಸಂವಿಧಾನ

- **15 (3)– ಸಮಾನತೆ ಮತ್ತು ವಿಶೇಷ ಅವಕಾಶಗಳು.**
- **21– ಜೀವಿಸುವ ಹಕ್ಕು.**
- **21(ಎ)–ಶಿಕ್ಷಣ ಮೂಲಭೂತ ಹಕ್ಕು.** (6–14 ವರ್ಷದೊಳಗಿನ ಮಕ್ಕಳಿಗೆ)
- **23 – ಯಾವುದೇ ವ್ಯಕ್ತಿ ಮಾರಾಟ ವಸ್ತುವಲ್ಲ.**
- **24– 14 ವರ್ಷದೊಳಗಿನ ಮಕ್ಕಳ ಕಾರ್ಮಿಕತೆ ನಿಷೇಧ.**
- **45–6 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪೂರ್ವ ಪ್ರಾಥಮಿಕ ಶಿಕ್ಷಣ.**

## ಭಾರತದ ಸಂವಿಧಾನ

19(I) ಹಕ್ಕು

(*a*) ಮಾತಾಡುವ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು

(*b*) ಯಾವುದೇ ಶಾಂತಿಯುತವಾಗಿ ಗುಂಪು ಸೇರುವ ಅವಕಾಶ

(*c*) ಸಂಘವನ್ನು ರಚಿಸಿಕೊಳ್ಳುವ ಹಕ್ಕು;

(*d*) ದೇಶದಾದ್ಯಂತ ಮುಕ್ತವಾಗಿ ಓಡಾಡುವ ಅವಕಾಶ

(*e*) ಆಸ್ತಿಯ ಮೇಲೆ ಅಧಿಕಾರ ಮತ್ತು ಮಾರುವ ಅವಕಾಶ

(g) ಯಾವುದೇ ವೃತ್ತಿ ಮತ್ತು ಉದ್ಯೋಗವನ್ನು ಆಯ್ದುಕೊಳ್ಳುವ ಅವಕಾಶ


20 ದುರುಪಯೋಗದ ವಿರುದ್ಧ ರಕ್ಷಣೆ

21 ಜೀವನ ಮತ್ತು ಸ್ವಾತಂತ್ರದ ರಕ್ಷಣೆ

## ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ

- 1989 ರ ನವೆಂಬರ್ 20 ರಂದು ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಜಾರಿಗೆ ತಂದಿದೆ.
- ಅದಕ್ಕೆ ಭಾರತ ಸರ್ಕಾರ 1992 ಡಿಸೆಂಬರ್ 11ರಂದು ಸಹಿ ಮಾಡಿದೆ.
- ಈ ಒಡಂಬಡಿಕೆಗೆ 196 ರಾಷ್ಟ್ರಗಳು ಸಹಿ ಮಾಡಿವೆ.
- ಅತ್ಯಂತ ಹೆಚ್ಚಿನ ರಾಷ್ಟ್ರಗಳು ಸಹಿ ಮಾಡಿರುವ ಏಕೈಕ ಒಡಂಬಡಿಕೆ.
- ಮುಖ್ಯವಾಗಿ 54 ವಿಧಿಗಳು.
- 4 ಮುಖ್ಯ ಹಕ್ಕುಗಳು.

## ಮಕ್ಕಳ ಪ್ರಮುಖ ನಾಲ್ಕು ಹಕ್ಕುಗಳ ಗುಂಪುಗಳು ಮತ್ತು ನಾಲ್ಕು ಪ್ರಮುಖ ತತ್ವಗಳು




ವಿವಿಧ ಕಾಯಿದೆಗಳಲ್ಲಿ ವಿವಿಧ ವಯಸ್ಸಿನ ಗೊಂದಲ :

8 ರಿಂದ ಹಿಡಿದು 21ರವರೆಗೆ.



# ಬದುಕುವ ಹಕ್ಕು. ಪರಿಚ್ಛೇಧ: 1, 2, 3, 4, 5, 6, 7, 8, 9, 10, 18

# ರಕ್ಷಣೆಯ ಹಕ್ಕು. ಪರಿಚ್ಛೇಧ: 11, 19, 20, 21, 22, 32, 33, 34, 35, 36, 37, 38, 39, 40, 41

# ಅವಕಾಶ, ವಿಕಾಸ ಮತ್ತು ಅಭಿವೃದ್ಧಿ ಹೊಂದುವ ಹಕ್ಕು

ಪರಿಚ್ಛೇಧ : 19, 22, 23, 24, 25, 26, 27, 28, 29, 30, 31

# ಭಾಗವಹಿಸುವ ಹಕ್ಕು.

ಪರಿಚ್ಛೇಧ : 12, 13, 14, 15, 16, 17, 42

ಪರಿಚ್ಛೇಧ ೧ : ೧೮ ವರ್ಷದೊಳಗಿನ ಎಲ್ಲಾ ಮನುಷ್ಯ ಜೀವಿಗಳು ಮಕ್ಕಳು.

ಪರಿಚ್ಛೇಧ ೨ : ಮಕ್ಕಳಲ್ಲಿ ಯಾವುದೇ ತಾರತಮ್ಯ ತರಬಾರದು.

ಪರಿಚ್ಛೇಧ ೧೨: ಅಭಿಪ್ರಾಯ ವ್ಯಕ್ತ ಪಡಿಸುವ ಹಕ್ಕು.

ಪರಿಚ್ಛೇಧ ೨೮ : ಶಿಕ್ಷಣದ ಹಕ್ಕು.

ಪರಿಚ್ಛೇಧ ೩೧ : ಭಾಗವಹಿಸುವ ಹಕ್ಕು .

ಪರಿಚ್ಛೇಧ ೩೨ :ಬಾಲಕಾರ್ಮಿಕ ಪದ್ದತಿಯಿಂದ ರಕ್ಷಣೆಯ ಹಕ್ಕು. (ಬಾಲಕಾರ್ಮಿಕತೆ ನಿಷೇಧ).

ಪರಿಚ್ಛೇಧ ೩೪ : ಲೈಂಗಿಕ ಶೋಷಣೆಯಿಂದ ರಕ್ಷಣೆಯ ಹಕ್ಕು.

ಪರಿಚ್ಛೇಧ ೩೫ :ಮಕ್ಕಳ ಮಾರಾಟ ಮಾಡುವ ಮತ್ತು ಅಕ್ರಮ ಬಂಧನದಲ್ಲಿಡುವುದರ ವಿರುದ್ದ ರಕ್ಷಣೆಯ ಹಕ್ಕು.

## ಮಕ್ಕಳ ಸಂರಕ್ಷಣೆಗೆ ಸಂಬಂಧಿಸಿದ ಕೆಲವು ಪ್ರಮುಖ ಕಾಯ್ದೆಗಳು.

1. ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015.
2. ಬಾಲ್ಯವಿವಾಹ ನಿಷೇಧ ಕಾಯ್ದೆ–2006.
3. ಬಾಲ್ಯವಿವಾಹ ನಿಷೇಧ(ಕರ್ನಾಟಕ) ತಿದ್ದುಪಡಿ ಕಾಯ್ದೆ–2016.
4. ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ–2012.
5. ಮಕ್ಕಳು ಮತ್ತು ಕಿಶೋರ ಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ)ಕಾಯ್ದೆ–1986 (2016ರ ತಿದ್ದುಪಡಿ)
6. ಅನೈತಿಕ ಮಾನವ ಕಳ್ಳಸಾಗಾಣಿಕೆ ತಡೆ ಕಾಯ್ದೆ–1956
7. ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕಾಯ್ದೆ–2005.
8. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯ್ದೆ–2009.

"ಮಕ್ಕಳ ಹಕ್ಕುಗಳು ಅನುಷ್ಠಾನ ಮತ್ತು ಮಕ್ಕಳ ಸಂರಕ್ಷಣೆ" ಗಾಗಿ

## ಗ್ರಾಮ ಪಂಚಾಯತಿ ಮಟ್ಟದಲ್ಲಿ

ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿ. **(WCPC)** ಯ

ಸರಕಾರದ ಆದೇಶ ಸಂಖ್ಯೆ: ಮಮಇ 48 ಮಮಅ 2018, ದಿನಾಂಕ: 06.08.2019

ರಚನೆ ಹಾಗೂ ಕಾರ್ಯಚಟುವಟಿಕೆಗಳ ಬಗ್ಗೆ ತರಭೇತಿ ಹಾಗೂ

ಮಕ್ಕಳ ಸಂರಕ್ಷಣೆಗೆ ಸಂಬಂಧಿಸಿದಂತೆ ವಿವಿಧ ಹಂತಗಳಲ್ಲಿರುವ ವ್ಯವಸ್ಥೆಗಳು ಮತ್ತು ಅವುಗಳ ಕಾರ್ಯಚಟುವಟಿಕೆಗಳು.



# ಮಕ್ಕಳ ಹಕ್ಕು, ಸಂರಕ್ಷಣೆಯ ಅನುಷ್ಠಾನಕ್ಕಾಗಿ ವಿವಿದ ಹಂತದ ವ್ಯವಸ್ಥೆಗಳು.

ಗ್ರಾಮ ಮಟ್ಟ

- ಗ್ರಾಮ ಮಟ್ಟದ ಮಕ್ಕಳ ಕಾವಲು ಸಮಿತಿ-**CPC- Child Protection Committee.** ಗ್ರಾಮ ಮಟ್ಟ – ಗ್ರಾಮ ನೈರ್ಮಲ್ಯ ಸಮಿತಿ.

ಪ್ರತಿ ಶಾಲಾ ಮಟ್ಟದಲ್ಲಿ

- ಮಕ್ಕಳ ಪಾರ್ಲಿಮೆಂಟ್
- ಶಾಲಾ ಸುರಕ್ಷತಾ ಸಮಿತಿ
- ಮಕ್ಕಳ ಹಕ್ಕುಗಳ ಕ್ಲಬ್

**(All the other committees should be under this club Govt Order 7-9-2015)**

- ಎಸ್.ಡಿ.ಎಮ್.ಸಿ.

ಅಂಗನವಾಡಿ ಮಟ್ಟದಲ್ಲಿ :

- ಸಮನ್ವಯ ಸಮಿತಿ(ಬಾಲ ವಿಕಾಸ ಸಮಿತಿ)
- ಬಾಲಿಕಾ ಸಂಘ(ಕಿಶೋರಿ ಸಂಘ)



# ಎಲ್ಲಾ ಇಲಾಖೆಗಳ ಶಿಕ್ಷಣ ಸಹಿತ/ರಹಿತ ವಸತಿ ನಿಲಯಗಳಲ್ಲಿ:

## In All Education and other HOSTELS

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಡಿ ಶೈಕ್ಷಣಿಕ ಸಂಸ್ಥೆಗಳಿಗಾಗಿ ರೂಪಿಸಲಾಗಿರುವ (**Hostel Guideline by NCPCR)**

- ಮಕ್ಕಳ ರಕ್ಷಣಾ ನೀತಿ
- ಮಕ್ಕಳ ರಕ್ಷಣಾ ಸಮಿತಿ (**CPC)**
- ಮಕ್ಕಳ ಹಕ್ಕುಗಳ ಕ್ಲಬ್
- ಸಿಬ್ಬಂದಿಗಳಿಂದ ಮಕ್ಕಳ ಸುರಕ್ಷತಾ ನೀತಿಗೆ ಒಪ್ಪಿರುವ ಬದ್ಧತಾ ಪತ್ರಕ್ಕೆ ಸಹಿ ಪಡೆದಿರಬೇಕು.

# ಗ್ರಾಮ ಪಂಚಾಯತಿ ಮಟ್ಟದಲ್ಲಿ

- ಪ್ರತೀ ವರ್ಷ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ಕಾಯ್ದೆ-1993 (2015ರ ತಿದ್ದುಪಡಿಯಂತೆ) ಪರಿಚ್ಛೇಧ 3(ಎಚ್) ಪ್ರಕಾರ ಪ್ರತೀ ವರ್ಷ "ಮಕ್ಕಳ ಹಕ್ಕುಗಳ ಗ್ರಾಮಸಭೆ" ನಡೆಸಬೇಕು.
- ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿ.(WCPC)

  Women and Child Protection Committee
- ಗ್ರಾಮ ಪಂಚಾಯತ್ ಮಟ್ಟದ ಗ್ರಾಮೀಣ ಅಂಗವಿಕಲರ ಪುನರ್ವಸತಿ ಕಾರ್ಯಕ್ರಮ ಅನುಷ್ಠಾನದ ಪರಿಶೀಲನಾ ಸಮಿತಿ.
- ಗ್ರಾಮ ಶಿಕ್ಷಣ ಪಡೆ.
- ಕೆ.ಡಿ.ಪಿ ಯಲ್ಲಿ ಮಕ್ಕಳ ಅಭಿವೃದ್ಧಿ ಕುರಿತು ಕ್ರಮ.

# ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ;

"ತೆರದ ಮನೆ" ಕಾರ್ಯಕ್ರಮ

- ವಾರಕ್ಕೊಂದು "ತೆರದ ಮನೆ" ಕಾರ್ಯಕ್ರಮ, ಮಕ್ಕಳ ಜಾಗೃತಿ ಮತ್ತು ಅರಿವು ಕಾರ್ಯಕ್ರಮ ಪ್ರತೀ ಗುರುವಾರ ಬೆಳಗ್ಗಿನ ಅವಧಿ ಅಥವಾ ಶಾಲೆ ಮತ್ತು ಠಾಣೆಯವರು ನಿರ್ಧರಿಸಿದ ಯಾವುದೇ ವಾರ.

## ತಾಲ್ಲೂಕು ಮಟ್ಟ

- ತಾಲ್ಲೂಕು ಮಟ್ಟದ ಮಕ್ಕಳ ರಕ್ಷಣಾ ಸಮಿತಿಗಳ ಸಮನ್ವಯತೆ ಮತ್ತು ಪರಿಶೀಲನಾ ಸಮಿತಿ.
- ತಾಲ್ಲೂಕು ಮಟ್ಟದ ಬಾಲ್ಯ ವಿವಾಹ ತಡೆ ಸಮನ್ವಯತೆ ಮತ್ತು ಪರಿಶೀಲನಾ ಸಮಿತಿ.
- ತಾಲ್ಲೂಕು ಮಟ್ಟದ ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಹಾಗೂ ಮಾರಾಟ ತಡೆ ಸಮಿತಿ.
- ತಾಲ್ಲೂಕು ಮಟ್ಟದ ಜೀತ ಪದ್ಧತಿ ನಿರ್ಮೂಲನಾ ಸಮಿತಿ.
- ತಾಲ್ಲೂಕು ಮಟ್ಟದ ಮಕ್ಕಳು ಮತ್ತು ಹದಿಹರೆಯದವರ ಕಾರ್ಮಿಕ ಪದ್ಧತಿ ನಿರ್ಮೂಲನಾ ಸಮಿತಿ.

## ಜಿಲ್ಲಾ ಮಟ್ಟ

- ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮತ್ತು ಜಿಲ್ಲಾ ಮಟ್ಟದ ಮಕ್ಕಳ ರಕ್ಷಣಾ ಕಾವಲು ಸಮಿತಿ.
- ಜಿಲ್ಲಾ ಮಟ್ಟದ ಬಾಲ್ಯವಿವಾಹ ತಡೆಯುವ ಸಮನ್ವಯ ಮತ್ತು ಪರಿಶೀಲನಾ ಸಮಿತಿ;
- ಜಿಲ್ಲಾ ಮಟ್ಟದ ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಹಾಗೂ ಮಾರಾಟ ತಡೆ ಸಮಿತಿ.
- ಜಿಲ್ಲಾ ಮಟ್ಟದ ಜೀತ ಪದ್ಧತಿ ನಿರ್ಮೂಲನಾ ಸಮಿತಿ.
- ಜಿಲ್ಲಾ ಮಟ್ಟದ ಮಕ್ಕಳು ಮತ್ತು ಹದಿಹರೆಯದವರ ಕಾರ್ಮಿಕ ಪದ್ಧತಿ ನಿರ್ಮೂಲನಾ ಸಮಿತಿ.

ಕರ್ನಾಟಕ ಸರ್ಕಾರ

ಸಂಖ್ಯೆ:ಆರ್‌ಡಿ 54 ಡಿಎಸ್‌ಪಿ 2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:20-09-2017.

ಸುತ್ತೋಲೆ

ವಿಷಯ: ಬಾಲ್ಯ ವಿವಾಹ ತಡೆಗಟ್ಟುವಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸುವ ಕುರಿತು.

ಉಲ್ಲೇಖ:
1) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 54 ಡಿಎಸ್‌ಪಿ 2011, ದಿನಾಂಕ:18.08.2011
2) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಬ್ಲ್ಯೂಸಿಡಿ 100 ಎಸ್‌ಡಬ್ಲ್ಯೂಡಬ್ಲ್ಯೂ 2006, ದಿನಾಂಕ:07.11.2007.
3) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 54 ಡಿಎಸ್‌ಪಿ 2011, ದಿನಾಂಕ:27.07.2011

*****

ಸರಳ ವಿವಾಹವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಾಮೂಹಿಕ ವಿವಾಹಗಳನ್ನು ಸಮರ್ಪಕವಾಗಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಆಯೋಜಿಸುವ ಹಾಗೂ ಸಾಮೂಹಿಕ ವಿವಾಹಗಳಲ್ಲಿ ಬಾಲ್ಯ ವಿವಾಹದಂತ ಅನಿಷ್ಟ ಪದ್ಧತಿಗಳನ್ನು ತಡೆಗಟ್ಟುವ ದೃಷ್ಟಿಯಿಂದ, ಸಾಮೂಹಿಕ ವಿವಾಹ ಕಾರ್ಯಕ್ರಮಗಳನ್ನು ಆಯೋಜಿಸುವಾಗ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಉಲ್ಲೇಖ(1)ರ ಸುತ್ತೋಲೆಯಲ್ಲಿ ಹೊರಡಿಸಲಾಗಿರುತ್ತದೆ.

ಉಲ್ಲೇಖ(2)ರ ಅಧಿಸೂಚನೆಯಲ್ಲಿ ಕಂದಾಯ ಇಲಾಖೆಯ ಗ್ರಾಮ ಲೆಕ್ಕಾಧಿಕಾರಿಗಳನ್ನು ಅವರ ಕಾರ್ಯವ್ಯಾಪ್ತಿಗೆ ವಿವಾಹ ನೋಂದಣಿ ಪ್ರಾಧಿಕಾರವೆಂದು ನೇಮಿಸಲಾಗಿದೆ.

ಉಲ್ಲೇಖ(3)ರ ಸುತ್ತೋಲೆಯಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು ಅವರ ಕಾರ್ಯವ್ಯಾಪ್ತಿಯ ಗ್ರಾಮಗಳಲ್ಲಿ/ವಾರ್ಡ್‌ಗಳಲ್ಲಿ ವಿವಾಹ ಜರುಗಿದ ಸಂದರ್ಭದಲ್ಲಿ ಅಂತಹ ವಿವಾಹಗಳನ್ನು ಕಡ್ಡಾಯವಾಗಿ ನೋಂದಣಿ ಮಾಡತಕ್ಕದ್ದು. ವಿವಾಹ ನೋಂದಣಿ ದೃಢೀಕರಣ ಪತ್ರವನ್ನು ನಿಗದಿತ ನಮೂನೆಯಂತೆ ಕಡ್ಡಾಯವಾಗಿ ನೀಡತಕ್ಕದ್ದು. ವಿವಾಹ ನೋಂದಣಿಗಳನ್ನು ಮಾಡಲು ನೋಂದಣಿ ರಿಜಿಸ್ಟರ್‌ಗಳ ಕಾರ್ಯವ್ಯಾಪ್ತಿಯ ಗ್ರಾಮವಾರು/ವಾರ್ಡ್‌ವಾರು ನಿಗದಿತ ನಮೂನೆಯಂತೆ ನಿರ್ವಹಿಸತಕ್ಕದ್ದು. ದಸ್ತಾವೇಜುಗಳನ್ನು ಪ್ರತಿ ತಿಂಗಳು ಸಂಬಂಧಪಟ್ಟ ರಾಜಸ್ವ ನಿರೀಕ್ಷಕರು ಮತ್ತು ಸಾಮಾಜಿಕ ಭದ್ರತಾ ಶಿರಸ್ತೇದಾರರು ಕಡ್ಡಾಯವಾಗಿ ಪರಿಶೀಲಿಸತಕ್ಕದೆಂದು ಸೂಚಿಸಲಾಗಿರುತ್ತದೆ.

ಸಾಮೂಹಿಕ ವಿವಾಹ ಆಯೋಜಕರು, ಕಲ್ಯಾಣ ಮಂಟಪಗಳ ವ್ಯವಸ್ಥಾಪಕರು, ವಿವಾಹಗಳನ್ನು ಆಯೋಜಿಸುವ ದೇವಸ್ಥಾನಗಳ ಮತ್ತು ಇತರೆ ಧಾರ್ಮಿಕ ಮುಖ್ಯಸ್ಥರು, ವಿವಾಹಗಳನ್ನು ಆಯೋಜಿಸುವ ಸಂದರ್ಭದಲ್ಲಿ ತಹಶೀಲ್ದಾರ್‌ರವರು ಸರ್ಕಾರದ ದಿನಾಂಕ:18.08.2011ರ ಸುತ್ತೋಲೆಯಲ್ಲಿನ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಆಯೋಜಕರ ಗಮನಕ್ಕೆ ತಂದು, ಸದರಿ ಮಾರ್ಗಸೂಚಿಗಳ ಪ್ರಕಾರ ತಪ್ಪದೇ ಕ್ರಮಕೈಗೊಳ್ಳುವಂತೆ ತಿಳಿಸಲು ಎಲ್ಲಾ ತಹಶೀಲ್ದಾರ್‌ರವರಿಗೆ ಸೂಚಿಸಲಾಗಿದೆ.

-2-

ಗ್ರಾಮ ಲೆಕ್ಕಾಧಿಕಾರಿಗಳು, ಅವರ ಕಾರ್ಯವ್ಯಾಪ್ತಿಯ ವಿವಾಹ ನೋಂದಣಿ ಪ್ರಾಧಿಕಾರವಾಗಿರುವುದರಿಂದ, ಬಾಲ್ಯವಿವಾಹ ನಿಷೇಧ (ಕರ್ನಾಟಕ) ನಿಯಮಾವಳಿಗಳು, 2014ರ ನಿಯಮ 4(11)ರ ಅನುಸೂಚಿ(1)ರಲ್ಲಿ ತಿಳಿಸಿರುವಂತೆ ಕ್ರಮವಹಿಸುವುದು. ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ಬಾಲ್ಯ ವಿವಾಹಗಳು ನಡೆದಲ್ಲಿ ಅದಕ್ಕೆ ಸಂಪೂರ್ಣ ಗ್ರಾಮ ಲೆಕ್ಕಾಧಿಕಾರಿಗಳನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

(ಕೆ. ಉಮಾಪತಿ)
ಸರ್ಕಾರದ ಉಪ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿ.ನಿ ಹಾಗೂ ನೋಂ&ಮು)

ಇವರಿಗೆ:-

ಸಂಕಲನಕಾರರು, ಕರ್ನಾಟಕ ವಿಶೇಷ ರಾಜ್ಯಪತ್ರ, ಬೆಂಗಳೂರು, ಇವರಿಗೆ - ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 100 ಪ್ರತಿಗಳನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಕಂದಾಯ ಭವನ, 5ನೇ ಮಹಡಿ, ಕೆ.ಜಿ ರಸ್ತೆ, ಬೆಂಗಳೂರು ಇಲ್ಲಿಗೆ ಕಳುಹಿಸಬೇಕೆಂದು ಕೋರಿದೆ.

ಪ್ರತಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಆಯುಕ್ತರು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಕಂದಾಯ ಭವನ, ಬೆಂಗಳೂರು.
4. ಎಲ್ಲಾ ಪ್ರಾದೇಶಿಕ ಆಯುಕ್ತರು,
5. ಎಲ್ಲಾ ಜಿಲ್ಲಾಧಿಕಾರಿಗಳು,
6. ಎಲ್ಲಾ ಉಪ ವಿಭಾಗಾಧಿಕಾರಿಗಳು/ತಹಸೀಲ್ದಾರರು.
7. ಹೆಚ್ಚುವರಿ ಪ್ರತಿ ಮತ್ತು ರಕ್ಷಾ ಕಡತ.

ಕರ್ನಾಟಕ ಸರ್ಕಾರ

ಸಂಖ್ಯೆ:ಸಕಇ/ಇಡಿ 4/ಸಿಆರ್ಎ/2017-18

ಸಮಾಜ ಕಲ್ಯಾಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ:04-10-2017

ಸುತ್ತೋಲೆ

ವಿಷಯ : ಬಾಲ್ಯ ವಿವಾಹಗಳನ್ನು ಸಮರ್ಪಕವಾಗಿ ತಡೆಗಟ್ಟುವ ಬಗ್ಗೆ.
ಉಲ್ಲೇಖ : (1) ಬಾಲ್ಯ ವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಅಧಿನಿಯಮ-2016 ದಿನಾಂಕ:26-04-2017.
(2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ:21-09-2017ರಂದು ಮಧ್ಯಾಹ್ನ 3:30 ಘಂಟೆಗೆ ನಡೆದ ಸಭೆ.

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ.

1. ಜಂಟಿ/ಉಪ ನಿರ್ದೇಶಕರು, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಎಲ್ಲಾ ಜಿಲ್ಲೆಗಳು.
2. ಸಹಾಯಕ ನಿರ್ದೇಶಕರು (ಗ್ರೇಡ್ 1/2), ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ, ಎಲ್ಲಾ ತಾಲ್ಲೂಕುಗಳವರಿಗೆ ಸಂಬಂಧಪಟ್ಟ ಜಂಟಿ/ಉಪ ನಿರ್ದೇಶಕರು, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ರವರ ಮುಖಾಂತರ.
3. ಕಛೇರಿ ಪ್ರತಿ

ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಲಾಗಿದೆ:-

(1) ಆಯುಕ್ತರು, ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
(2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು, ರವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಲಾಗಿದೆ.
(3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಬೆಂಗಳೂರು, ರವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಲಾಗಿದೆ.

**NFHS 2019-2020 CHILD MARRIAGES DATA**

| District | NFHS-4 2015-16 | NFHS-5- 2019-2020 | Difference |
|---|---|---|---|
| Bellary | 26.9% | 22.2% | 4.7% - |
| Koppal | 35.9% | 27.1% | 8.8% - |
| Raichur | 26.3% | 21.9% | 4.4% - |
| Yadagiri | 29.6% | 33.2% | 3.6% + |
| Kalburgi | 27.0% | 29.8% | 2.8% + |
| Bidar | 22.3% | 19.2% | 3.1% - |
| U K | 15.2% | 11.6% | 3.6% |
| Chikamagaluru | 19.3% | 19.5% | 0.2%+ |
| Karnataka | 21.4% | 21.3% | 0-1%- |

## Child Marriage Prohibition Officers- CMPOs Sec: 16 (1)

## ಬಾಲ್ಯವಿವಾಹ ನಿಷೇದಾಧಿಕಾರಿಗಳು.

### ಗ್ರಾಮ ಮಟ್ಟ

- ಎಲ್ಲಾ ಸರಕಾರಿ ಕಿರಿಯ/ಹಿರಿಯ/ಪ್ರೌಢ ಶಾಲಾ ಮುಖ್ಯೋಪಾಧ್ಯಾಯರುಗಳು.
- ಎಲ್ಲಾ ಗ್ರಾಮ ಲೆಕ್ಕಾಧಿಕಾರಿಗಳು.
- ಕಂದಾಯ ನಿರೀಕ್ಷಕರು.



### ಗ್ರಾಮ ಪಂಚಾಯತಿ ಮಟ್ಟ

- ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು
- ಎಲ್ಲಾ ಹೋಬಳಿ ಮತ್ತು ಇತರ ಕಂದಾಯ ನಿರೀಕ್ಷಕರುಗಳು.
- ಪೊಲೀಸ್ ಸಬ್ ಇನ್ಸ್‌ಪೆಕ್ಟರ್
- ಮೇಲ್ವಿಚಾರಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.



## ವಯಸ್ಸಿನ ಧೃಡೀಕರಣ ಪತ್ರ

## (Karnataka Rule- 2014 Sec 6(2) Schedule- III)

- ಮೂಲ ಜನನ ಪ್ರಮಾಣ ಪತ್ರ.
- ಶಾಲಾ ಧೃಡೀಕರಣ ಪತ್ರ
- ಮೇಲಿನ ಎರಡೂ ಇಲ್ಲದಿದ್ದಲ್ಲಿ ಮಾತ್ರ –ಜಿಲ್ಲಾ ಶಸ್ತ್ರ ಚಿಕಿತ್ಸಾ ತಜ್ಞರು ರೇಡಿಯಾಲಜಿ ಪರೀಕ್ಷಿಸಿದ ವಯಸ್ಸಿನ ಧೃಡೀಕರಣ ಪತ್ರ ಮಾತ್ರ ಮದುವೆಗೆ ಅರ್ಹ.
- ಬೇರೆ ಯಾವ ಪ್ರಮಾಣ ಪತ್ರ ಮದುವೆಗೆ ಅರ್ಹವಲ್ಲ.
  **(Anganawadi/Ration Card/Voter Id Card/Aadhaar Card etc are not valid age proof for marriage)**

## ಮಕ್ಕಳು ಮತ್ತು ಕಿಶೋರಾವಸ್ಥೆ ಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ) ಕಾಯಿದೆ 1986. (as amended in 2016) ಕಾಯ್ದೆಯ ಕಲಂ 17ರ ಪ್ರಕಾರ ಬಾಲಕಾರ್ಮಿಕ ನಿಷೇಧ 11 ಇಲಾಖೆ.

**Other than Labour and Police Department- Sec-16**

1. ಕಂದಾಯ ಇಲಾಖೆ
2. ಪಂಚಾಯತ್‌ರಾಜ್ ಇಲಾಖೆ
3. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
4. ಶಿಕ್ಷಣ ಇಲಾಖೆ
5. ಕಾರ್ಖಾನೆ ಮತ್ತು ಬಾಯ್ಲರ್‌ಗಳ ಇಲಾಖೆ
6. ನಗರಾಭಿವೃದ್ಧಿ ಇಲಾಖೆ
7. ರೇಷ್ಮೇ ಇಲಾಖೆ
8. ಸಮಾಜ ಕಲ್ಯಾಣ ಇಲಾಖೆ
9. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
10. ಕೃಷಿ ಇಲಾಖೆ
11. ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ



## ಕಾಯ್ದೆಯ ಕಲಂ 17ರ ಪ್ರಕಾರ ಬಾಲಕಾರ್ಮಿಕ/ ಕಿಶೋರಾವಸ್ಥೆ ಕಾರ್ಮಿಕ ನಿಷೇಧ ಅಧಿಕಾರಿಗಳ ಪಟ್ಟಿ. (ಗ್ರಾಮ ಪಂಚಾಯತಿ ಮಟ್ಟ)



- ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು
- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
- ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
- ತಹಶೀಲ್ದಾರ್‌ಗಳು
- ನಾಡ ಕಛೇರಿ ಉಪ ತಹಶೀಲ್ದಾರ್‌ಗಳು
- ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು
- ಕಾರ್ಯನಿವಾಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್
- ಕ್ಷೇತ್ರ ಶಿಕ್ಷಣಾಧಿಕಾರಿಗಳು.
- ಕಾರ್ಮಿಕ ನಿರೀಕ್ಷಕರು ಮತ್ತು ಪೊಲೀಸ್ ಇಲಾಖೆ



## ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ/ಗ್ರಾಮ ಆರೋಗ್ಯ ಯೋಜನೆ ಮತ್ತು ಮಾನಿಟರಿಂಗ್ ಸಮಿತಿ ಹಾಗೂ ಗ್ರಾಮ ಮಟ್ಟದ ಮಕ್ಕಳ ರಕ್ಷಣಾ ಸಮಿತಿ– ಸದಸ್ಯರ ವಿವರ.

- **ಆರೋಗ್ಯ ಇಲಾಖೆ ನಡಾವಳಿಯಂತೆ**
- **ಆದೇಶ ಸಂಖ್ಯೆ : ಆಕುಕ 17 ಎಫ್ ಆರ್ 2009 ಬೆಂಗಳೂರು, ದಿನಾಂಕ: 26.02.2009**
- ಈ ಸಮಿತಿಯನ್ನೇ **ಗ್ರಾಮ ಮಟ್ಟದ ಮಕ್ಕಳ ರಕ್ಷಣಾ ಸಮಿತಿಯನ್ನಾಗಿ ಕಾರ್ಯನಿರ್ವಹಿಸಲು,** ಮಾನ್ಯ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ, ಸರಕಾರದ ಆಧೀನ ಕಾರ್ಯದರ್ಶಿ–1 (ಪ್ರ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ
- **ಆದೇಶ ಸಂಖ್ಯೆ : ಮಮಇ 274 ಮಭಾಬ 2013 ಬೆಂಗಳೂರು, ದಿನಾಂಕ: 28.07.2014ರಂತೆ**

| ಗ್ರಾಮ ಮಟ್ಟದ ಮಕ್ಕಳ ರಕ್ಷಣಾ ಸಮಿತಿ | | |
|---|---|---|
| ಕ್ರ.ಸಂ | ಪದನಾಮ | ಹುದ್ದೆ |
| 1 | ಸ್ಥಳೀಯ ಗ್ರಾಮ ಪಂಚಾಯತಿ ಸದಸ್ಯರು ಮಾತ್ರ ಗ್ರಾಮ ಆರೋಗ್ಯ ನೈರ್ಮಲ್ಯ/ ಗ್ರಾಮ ಆರೋಗ್ಯ ಯೋಜನೆ ಮತ್ತು ಮಾನಿಟರಿಂಗ್ ಸಮಿತಿ | ಅಧ್ಯಕ್ಷರು |
| 2 | ಕಿರಿಯ ಮಹಿಳಾ ಆರೋಗ್ಯ ಸಹಾಯಕಿ, | ಪದನಿಮಿತ್ಯ ಸದಸ್ಯರು |
| 3 | ಕಿರಿಯ ಪುರುಷ ಆರೋಗ್ಯ ಸಹಾಯಕ, | ಪದನಿಮಿತ್ಯ ಸದಸ್ಯರು |
| 4 | ಪ್ರಾಥಮಿಕ ಶಾಲಾ ಶಿಕ್ಷಕರು (ಮಹಿಳೆಯರಿಗೆ ಆದ್ಯತೆ), | ಪದನಿಮಿತ್ಯ ಸದಸ್ಯರು |
| 5 | ಗ್ರಾಮದಲ್ಲಿರುವ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು | ಪದನಿಮಿತ್ಯ ಸದಸ್ಯರು |
| 6 | ಗ್ರಾಮದಲ್ಲಿರುವ ಎಲ್ಲಾ ಆಶಾ ಕಾರ್ಯಕರ್ತೆಯರು | ಪದನಿಮಿತ್ಯ ಸದಸ್ಯರು |
| 7 | ಸ್ಥಳೀಯ ಆಶಾ ಕಾರ್ಯಕರ್ತೆ<br>(ಸ್ಥಳೀಯ ಗ್ರಾಮದ ಆಶಾ ಕಾರ್ಯಕರ್ತೆಯು ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ / ಗ್ರಾಮ ಆರೋಗ್ಯ ಯೋಜನೆ ಮತ್ತು ಮಾನಿಟರಿಂಗ್ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಆಶಾ ಕಾರ್ಯಕರ್ತೆ ಇಲ್ಲದ ಸ್ಥಳದಲ್ಲಿ ಅಂಗನವಾಡಿ ಕಾರ್ಯಕರ್ತೆ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಒಬ್ಬರಿಗಿಂತ ಹೆಚ್ಚ ಆಶಾ ಅಥವಾ ಅಂಗನವಾಡಿ ಕಾರ್ಯಕರ್ತೆಯರಿದ್ದರೆ, ಹಿರಿತನ ಮತ್ತು ಅರ್ಹತೆಯ ಮೇಲೆ ಒಬ್ಬರನ್ನು ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡುವ ಅಧಿಕಾರವನ್ನು ಸ್ಥಳೀಯ ಆರೋಗ್ಯ ಮತ್ತು ನೈರ್ಮಲ್ಯ / ಗ್ರಾಮ ಆರೋಗ್ಯ ಯೋಜನೆ ಮತ್ತು ಮಾನಿಟರಿಂಗ್ ಸಮಿತಿಗೆ ನೀಡಲಾಗಿದೆ.) | ಸದಸ್ಯ ಕಾರ್ಯದರ್ಶಿ |

# ಸದಸ್ಯತ್ವ ಅವಧಿ:

ಗ್ರಾಮಸಭೆಯಿಂದ ಆಯ್ಕೆಯಾದ 15 ಸದಸ್ಯರ ಪೈಕಿ 1/3 ಭಾಗ ಲಾಟರಿ ಎತ್ತುವುದರ ಮೂಲಕ ಮೊದಲನೇ ವರ್ಷದ ಅಂತ್ಯದಲ್ಲಿ ನಿವೃತ್ತರಾಗತಕ್ಕದ್ದು. ಅವರ ಸ್ಥಾನಕ್ಕೆ ಗ್ರಾಮಸಭೆಯಿಂದ 5 ಜನ ಹೊಸ ಸದಸ್ಯರ ಆಯ್ಕೆಯಾಗತಕ್ಕದ್ದು. ಹೀಗೆಯೇ 2 ಮತ್ತು 3 ನೇ ವರ್ಷಾಂತ್ಯಕ್ಕೆ ಉಳಿದ 5 ಮತ್ತು 5 ಸದಸ್ಯರು ಲಾಟರಿ ಮೂಲಕ ನಿರ್ಣಯಿಸಿ ನಿವೃತ್ತರಾಗತಕ್ಕದ್ದು ಮತ್ತವರ ಸ್ಥಾನಕ್ಕೆ ಹೊಸ ಸದಸ್ಯರ ಆಯ್ಕೆ ಗ್ರಾಮ ಸಭೆ ಮುಖಾಂತರ ಆಗತಕ್ಕದ್ದು. ಯಾವ ಮೀಸಲಾತಿ ಸದಸ್ಯರು ನಿವೃತ್ತರಾಗಿರುತ್ತಾರೋ ಅದೇ ಮೀಸಲಾತಿ ಸದಸ್ಯರು ಗ್ರಾಮ ಸಭೆಯಿಂದ ಆಯ್ಕೆಯಾಗತ್ಕದ್ದು. ಆದರೇ ಗ್ರಾಮದಲ್ಲಿರುವ ಉಳಿದ ಎಲ್ಲಾ ಅರ್ಹ ವ್ಯಕ್ತಿಗಳಿಗೂ ಸಮಿತಿಯಲ್ಲಿ ಪಾಲ್ಗೊಳ್ಳುವ ಅವಕಾಶ ಕಲ್ಪಿಸುವ ಉದ್ದೇಶವನ್ನು ಗ್ರಾಮಸಭೆಯು ಗಮನದಲ್ಲಿಡಬೇಕು. ಪ್ರತಿ ವರ್ಷ 1/3 ಮೇಲ್ಮಟದ ಸಮಿತಿಗಳಿಗೆ ಪ್ರಾತಿನಿಧಿತ್ವದ ನೇಮಕಾತಿಯಾಗಿದ್ದರೆ ಆ ಸ್ಥಾನಕ್ಕೆ ಹೊಸದಾಗಿ ಆಯ್ಕೆಯಾದ ಸದಸ್ಯರ ಬದಲಿ ನೇಮಕವಾಗತಕ್ಕದ್ದು. ಪ್ರತಿ ವರ್ಷ ಸದಸ್ಯರ ನಿವೃತ್ತಿ ಮತ್ತು ಆಯ್ಕೆ ಪ್ರಕ್ರಿಯೆಯ ಮೇಲ್ವಿಚಾರಣೆಯನ್ನು ಸ್ಥಳೀಯ ಗ್ರಾಮ ಪಂಚಾಯತಿ ಕಾರ್ಯದರ್ಶಿ/ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಜಂಟಿಯಾಗಿ ಮಾಡತಕ್ಕದ್ದು.

# ಸಮಿತಿಯ ಸಭೆ:

- ಪ್ರತಿ ತಿಂಗಳಿಗೊಮ್ಮೆ ಕಡ್ಡಾಯವಾಗಿ ಮೊದಲನೇ ಸೋಮವಾರದಂದು ಅಪರಾಹ್ನ ಸಮಿತಿಯು ಗ್ರಾಮ ಪಂಚಾಯತಿ ಕಟ್ಟಡ/ ಉಪಕೇಂದ್ರ/ ಅಂಗನವಾಡಿ ಕೇಂದ್ರ/ಶಾಲಾ ಕೊಠಡಿ/ಸಮುದಾಯ ಭವನ ಇವುಗಳಲ್ಲಿ ಅನುಕೂಲವಿರುವ ಯಾವುದಾದರೂ ಒಂದು ಸ್ಥಳದಲ್ಲಿ ನಿಯಮಿತವಾಗಿ ಸಭೆ ಸೇರಬೇಕು. ತುರ್ತು ಸಂದರ್ಭದಲ್ಲಿ ವಿಶೇಷ ಸಭೆ ಕರೆಯಬಹುದಾಗಿದೆ.
- ಸಾಮಾನ್ಯ ಸಭೆಯ ಬಗ್ಗೆ 3 ಪೂರ್ಣ ದಿವಸಗಳ ಮುಂಚೆ ಕಾರ್ಯಸೂಚಿಯೊಡನೆ ನೋಟೀಸ್‌ನ್ನು ಸಮಿತಿ ಕಾರ್ಯದರ್ಶಿ ನೀಡತಕ್ಕದ್ದು. ವಿಶೇಷ ಸಭೆಯನ್ನು ನೋಟೀಸ್ ನೀಡಿ 24 ಘಂಟೆಯೊಳಗಾಗಿ ಕರೆಯಬಹುದಾಗಿದೆ.
- ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ–1993 ರ ಪ್ರಕರಣ 61–ರ ಪ್ರಕಾರ ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ/ ಗ್ರಾಮ ಆರೋಗ್ಯ ಯೋಜನೆ ಮತ್ತು ಮಾನಿಟರಿಂಗ್ ಸಮಿತಿಯು, ಗ್ರಾಮ ಪಂಚಾಯತಿ "ಸೌಕರ್ಯ ಸಮಿತಿ"ಯ "ಉಪಸಮಿತಿ" ಸ್ಥಾನಮಾನ ಹೊಂದಿರುತ್ತದೆ.

# ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿ WCPC

**ಸರಕಾರದ ಆದೇಶ ಸಂಖ್ಯೆ: ಮಮಇ 48 ಮಮಅ 2018, ದಿನಾಂಕ: 06.08.2019.**

ಹಿನ್ನಲೆ:–

ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಕ್ಕಳ ಮತ್ತು ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ, ಸಾಗಾಣಿಕೆಗೊಳಗಾದವರ ಪುನರವಸತಿಗಾಗಿ ಮತ್ತು ಸಾಗಾಣಿಕೆಯನ್ನು ತಡೆಗಟ್ಟುವುದಕ್ಕಾಗಿ "ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ತಡೆ ಸಮಿತಿ", ಬಾಲ್ಯವಿವಾಹಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು "ಬಾಲ್ಯವಿವಾಹ ತಡೆ ಮತ್ತು ಸಮನ್ವಯ ಸಮಿತಿ" ಹಾಗೂ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿಯಲ್ಲಿ ರಚನೆಯಾದ "ಮಕ್ಕಳ ರಕ್ಷಣಾ ಸಮಿತಿ" ಈ ಮೂರು ಕಾರ್ಯನಿರ್ವಹಿಸುತ್ತಿದ್ದು, ದಿನಾಂಕ: 23.01.2018ರಂದು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ಜರುಗಿದ "ಕ್ಷೇತ್ರ ಮಟ್ಟದ ಸಮಿತಿಗಳ ಕಾರ್ಯನಿರ್ವಹಣೆ ಸಮಿತಿ ಪರಿಶೀಲನೆ ಬಗ್ಗೆ ನಡೆದ ಸಭೆ"ಯಲ್ಲಿ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿರವರು, ಈ ಮೂರು ಸಮಿತಿಗಳನ್ನು ವಿಲೀನಗೊಳಿಸಿ ಒಂದೇ ಸಮಿತಿಯನ್ನು ರಚಿಸಲು ಸೂಚಿಸಿದ್ದರಿಂದಾಗಿ,

ಮೇಲ್ಕಾಣಿಸಿದ ಮೂರು ಸಮಿತಿಗಳನ್ನು ವಿಲೀನಗೊಳಿಸಿ ಗ್ರಾಮ ಪಂಚಾಯತ್ ಮಟ್ಟದಲ್ಲಿ "ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿ" ಯನ್ನು ರಚಿಸಲಾಗಿರುತ್ತದೆ.

# ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿ

**ಸರಕಾರದ ಆದೇಶ ಸಂಖ್ಯೆ: ಮಮಇ 48 ಮಮಅ 2018, ದಿನಾಂಕ: 06.08.2019.**


| ಕ್ರ.ಸಂ | ಸದಸ್ಯರು | ಪದನಾಮ |
|---|---|---|
| 1 | ಗ್ರಾಮ ಪಂಚಾಯತ್ ಅಧ್ಯಕ್ಷರು. | ಅಧ್ಯಕ್ಷರು |
| 2 | ಗ್ರಾಮ ಪಂಚಾಯತ್ ಉಪಾಧ್ಯಕ್ಷರು (ಮಹಿಳೆಯರು)<br>ಮಹಿಳಾ ಉಪಾಧ್ಯಕ್ಷರಿದ್ದಲ್ಲಿ ಅವರನ್ನೆ ಸಮಿತಿಯ ಉಪಾಧ್ಯಕ್ಷರನ್ನಾಗಿ ನೇಮಿಸುವುದು, ಮಹಿಳಾ ಉಪಾಧ್ಯಕ್ಷರಿಲದಿದ್ದಲ್ಲಿ ಮಹಿಳಾ ಸದಸ್ಯರನ್ನೇ ಉಪಾಧ್ಯಕ್ಷರನ್ನಾಗಿ ನೇಮಿಸುವುದು | ಉಪಾಧ್ಯಕ್ಷರು |
| 3 | ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಎರಡು (ಇಬ್ಬರು ) ಗ್ರಾಮ ಪಂಚಾಯತ್ ಸದಸ್ಯರು (ಕಡ್ಡಾಯವಾಗಿ ಒಬ್ಬರು ಮಹಿಳಾ ಸದಸ್ಯರು) | ಸದಸ್ಯರು |
| 4 | ಗ್ರಾಮ ಪಂಚಾಯತ್ ವ್ಯಾಪ್ತಿಯ ಸ್ಥಳೀಯ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರು (ತಾಲ್ಲೂಕು ಶಿಕ್ಷಣಾಧಿಕಾರಿಗಳು ಆಯ್ಕೆ ಮಾಡುವುದು) ಮುಖ್ಯೋಪಾಧ್ಯಾಯರು ಪುರುಷರಾಗಿದ್ದಲ್ಲಿ, ಮಹಿಳಾ ಶಿಕ್ಷಕರನ್ನು ಆಯ್ಕೆ ಮಾಡುವುದು. | ಸದಸ್ಯರು |
| 5 | ಗ್ರಾಮ ಲೆಕ್ಕಿಗರು (ಒಬ್ಬರನ್ನು ತಹಶೀಲ್ದಾರರು ನೇಮಿಸುವುದು) | ಸದಸ್ಯರು |
| 6 | ಎಲ್.ಎಚ್.ವಿ/ ಎ.ಎನ್.ಎಮ್ ಮತ್ತು ಆಶಾ ಕಾರ್ಯಕರ್ತೆ<br>(ಎಲ್.ಎಚ್.ವಿಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಎ.ಎನ್.ಎಮ್ ಮತ್ತು ಆಶಾ ಕಾರ್ಯಕರ್ತೆಯರನ್ನು ತಾಲ್ಲೂಕು | ಸದಸ್ಯರು |

| ಕ್ರ.ಸಂ | ಸದಸ್ಯರು | ಪದನಾಮ |
|---|---|---|
| 7 | ಬೀಟ್ ಪೊಲೀಸ್ ಅಧಿಕಾರಿ (ವೃತ್ತ ನಿರೀಕ್ಷಕರು ನಿಯೋಜಿಸುವುದು) | ಸದಸ್ಯರು |
| 8 | ಗ್ರಾಮ ಪಂಚಾಯತಿ ವ್ಯಾಪ್ತಿಯ ಐಸಿಡಿಎಸ್ ಮೇಲಿಚಾರಕಿ (ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ನೇಮಿಸುವುದು) | ಸದಸ್ಯರು |
| 9 | ಆ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಯ ಮಹಿಳಾ ಪ್ರತಿನಿಧಿ | ಸದಸ್ಯರು |
| 10 | ಅಂಗನವಾಡಿ ಕಾರ್ಯಕರ್ತೆ (ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಒಬ್ಬ ಅಂಗನವಾಡಿ ಕಾರ್ಯಕರ್ತೆಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ನೇಮಿಸುವುದು) | ಸದಸ್ಯರು |
| 11 | ಸ್ತ್ರೀ ಶಕ್ತಿ ಸಂಘದ ಒಬ್ಬರು ಪ್ರತಿನಿಧಿ | ಸದಸ್ಯರು |
| 12 | ಗ್ರಾಮ ಪಂಚಾಯತ್ ವ್ಯಾಪ್ತಿಯ ಪ್ರೌಢಶಾಲೆಯಲ್ಲಿ ಓದುತ್ತಿರುವ ಒಬ್ಬ ವಿಧ್ಯಾರ್ಥಿ ಮತ್ತು ವಿದ್ಯಾರ್ಥಿನಿ | ಸದಸ್ಯರು |

- ಗ್ರಾಮಸಭೆಯಲ್ಲಿ ಇಬ್ಬರು ಗ್ರಾಮ ಪಂಚಾಯತ್ ಸದಸ್ಯರು, ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ, **ಸ್ತ್ರೀ ಶಕ್ತಿ ಸಂಘದ ಇಬ್ಬರು ಪ್ರತಿನಿಧಿ, ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ಆಯ್ಕೆ ಮಾಡುವುದು ಹಾಗೂ ಸಮಿತಿಯಲ್ಲಿ ಶೇಕಡಾ 50% ರಷ್ಟು ಮಹಿಳಾ ಸದಸ್ಯರಿರುವಂತೆ** ಕ್ರಮವಹಿಸುವುದು.
- ಪ್ರತಿ **ಮೂರು ತಿಂಗಳಿಗೊಮ್ಮೆ** ಸಭೆಯನ್ನು ಏರ್ಪಡಿಸುವುದು.
- ಸಮಿತಿ ಸಭೆಗಳಲ್ಲಿ ತೀರ್ಮಾನಿಸುವ ಎಲ್ಲಾ ಕಾರ್ಯಕ್ರಮಗಳು, ತೀರ್ಮಾನಗಳನ್ನು **ಅನುಷ್ಠಾನಗೊಳಿಸುವ ಜವಾಬ್ದಾರಿ ಸದಸ್ಯ ಕಾರ್ಯದರ್ಶಿಯದ್ದಾಗಿರುತ್ತದೆ.**

[2][61–ಎ. ಇತರ ಸಮಿತಿಗಳು.–(1) ಗ್ರಾಮ ಪಂಚಾಯಿತಿಯು, 61ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಉದ್ದೇಶಗಳನ್ನು ಹೊರತುಪಡಿಸಿ ಇತರ ಯಾವುದೇ ಉದ್ದೇಶಕ್ಕಾಗಿ, ಅದು ನಿರ್ಧರಿಸಬಹುದಾದಂಥ ಸದಸ್ಯರುಗಳನ್ನು ಒಳಗೊಂಡಿರುವ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಸಮಿತಿಗಳನ್ನು ನೇಮಕಮಾಡಬಹುದು ಮತ್ತು ಹಾಗೆ ನೇಮಕಮಾಡಲಾದ ಸಮಿತಿಗಳಲ್ಲಿ ಯಾವ ಉದ್ದೇಶಕ್ಕಾಗಿ ಅದನ್ನು ನೇಮಕಮಾಡಲಾಗಿದೆಯೋ ಅದನ್ನು ಈಡೇರಿಸುವುದಕ್ಕೆ ಅವಶ್ಯಕ ಅಥವಾ ಯುಕ್ತವಾಗಬಹುದಾದಂಥ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ನಿಹಿತಗೊಳಿಸಬಹುದು.

(2) (1)ನೇ ಉಪ–ಪ್ರಕರಣದಡಿ ನೇಮಕಮಾಡಲಾದ ಸಮಿತಿಯು, ನಿಯಮಿಸಬಹುದಾದಂಥ ವಿಧಾನದಲ್ಲಿ, ಪಂಚಾಯಿತಿ ಪ್ರದೇಶದ ಅಂಥ ನಿವಾಸಿಗಳನ್ನು ಸಹ ಆಯ್ಕೆ ಮಾಡಿಕೊಳ್ಳಲು ಸಕ್ಷಮವಾಗಿರತಕ್ಕದ್ದು.






**ಸರ್ಕಾರದ ಆದೇಶ ಸಂಖ್ಯೆ : ಮಮಇ 48 ಮಮಅ 2018, ದಿನಾಂಕ :06.08.2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಗಟ್ಟುವಿಕೆ, ಬಾಲ್ಯ ವಿವಾಹ ನಿಷೇದ ಹಾಗೂ ಸಮಗ್ರ ಮಕ್ಕಳ ರಕ್ಷಣೆಗಾಗಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ರಚಿಸಲಾಗಿರುವ ಮಕ್ಕಳ ರಕ್ಷಣಾ ಸಮಿತಿಯನ್ನು ವಿಲೀನಗೊಳಿಸಿ ಈ ಕೆಳಕಂಡ ಸದಸ್ಯರನ್ನೊಳಗೊಂಡ ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ.

| ಕ್ರ ಸಂ | ಸದಸ್ಯರು | ಪದನಾಮ |
|---|---|---|
| 1) | ಗ್ರಾಮ ಪಂಚಾಯತ್ ಅಧ್ಯಕ್ಷರು (ಮಹಿಳೆಯರು) | ಅಧ್ಯಕ್ಷರು |
| 2) | ಗ್ರಾಮ ಪಂಚಾಯತ್ ಉಪಾಧ್ಯಕ್ಷರು (ಮಹಿಳೆಯರು) ಮಹಿಳಾ ಉಪಾಧ್ಯಕ್ಷರಿದ್ದಲ್ಲಿ ಅವರನ್ನೇ ಸಮಿತಿಯ ಉಪಾಧ್ಯಕ್ಷರನ್ನಾಗಿ ನೇಮಿಸುವುದು, ಮಹಿಳಾ ಉಪಾಧ್ಯಕ್ಷರಿಲ್ಲದಿದ್ದಲ್ಲಿ ಮಹಿಳಾ ಸದಸ್ಯರನ್ನೇ ಉಪಾಧ್ಯಕ್ಷರನ್ನಾಗಿ ನೇಮಿಸುವುದು. | ಉಪಾಧ್ಯಕ್ಷರು |
| 3) | ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಎರಡು ಗ್ರಾಮ ಪಂಚಾಯತ್ ಸದಸ್ಯರು (ಕಡ್ಡಾಯವಾಗಿ ಒಬ್ಬರು ಮಹಿಳಾ ಸದಸ್ಯರು) | ಸದಸ್ಯರು |
| 4) | ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ಥಳೀಯ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು (ತಾಲ್ಲೂಕು ಶಿಕ್ಷಣಾಧಿಕಾರಿಗಳು ಆಯ್ಕೆ ಮಾಡುವುದು) ಮುಖ್ಯೋಪಾಧ್ಯಾಯರು ಪುರುಷರಾಗಿದ್ದಲ್ಲಿ, ಮಹಿಳಾ ಶಿಕ್ಷಕರನ್ನು ಆಯ್ಕೆ ಮಾಡುವುದು. | ಸದಸ್ಯರು |
| 5) | ಗ್ರಾಮ ಲೆಕ್ಕಿಗರು (ಒಬ್ಬರನ್ನು ತಹಶೀಲ್ದಾರರು ನೇಮಿಸುವುದು) | ಸದಸ್ಯರು |
| 6) | ಎಲ್.ಎಚ್.ವಿ/ ಎ.ಎನ್.ಎಂ ಮತ್ತು ಆಶಾ ಕಾರ್ಯಕರ್ತೆ (ಎಲ್.ಎಚ್.ವಿ.ಗಳು ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಎ.ಎನ್.ಎಂ.ಗಳನ್ನು ಹಾಗೂ ಆಶಾ ಕಾರ್ಯಕರ್ತೆಯನ್ನು ತಾಲ್ಲೂಕು ವೈದ್ಯಾಧಿಕಾರಿಗಳು ನಾಮ ನಿರ್ದೇಶನ ಮಾಡುವುದು) | ಸದಸ್ಯರು |
| 7) | ಬೀಟ್ ಪೊಲೀಸ್ ಅಧಿಕಾರಿ (ವೃತ್ತ ನಿರೀಕ್ಷಕರು ನಿಯೋಜಿಸುವುದು) | ಸದಸ್ಯರು |
| 8) | ಗ್ರಾಮ ಪಂಚಾಯಿತಿ ವ್ಯಾಪ್ತಿಯ ಐಸಿಡಿಎಸ್ ಮೇಲ್ವಿಚಾರಕಿ | ಸದಸ್ಯರು |

| | | |
|---|---|---|
| | (ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ನೇಮಿಸುವುದು) | |
| 9) | ಆ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಯ ಮಹಿಳಾ ಪ್ರತಿನಿಧಿ | ಸದಸ್ಯರು |
| 10) | ಅಂಗನವಾಡಿ ಕಾರ್ಯಕರ್ತೆ (ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಒಬ್ಬ ಅಂಗನವಾಡಿ ಕಾರ್ಯಕರ್ತೆಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ನೇಮಿಸುವುದು) | ಸದಸ್ಯರು |
| 11) | ಸ್ತ್ರೀಶಕ್ತಿ ಸಂಘದ ಒಬ್ಬರು ಪ್ರತಿನಿಧಿ | ಸದಸ್ಯರು |
| 12) | ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರೌಢಶಾಲೆಯಲ್ಲಿ ಓದುತ್ತಿರುವ ಒಬ್ಬ ವಿದ್ಯಾರ್ಥಿ ಮತ್ತು ಒಬ್ಬ ವಿದ್ಯಾರ್ಥಿನಿ | ಸದಸ್ಯರು |
| 13) | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಗ್ರಾಮ ಪಂಚಾಯಿತಿ ಕಾರ್ಯದರ್ಶಿ | ಸದಸ್ಯ ಕಾರ್ಯದರ್ಶಿ |

ಗ್ರಾಮ ಸಭೆಯಲ್ಲಿ ಇಬ್ಬರು ಗ್ರಾಮ ಪಂಚಾಯತ್ ಸದಸ್ಯರು. ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ. ಸ್ತ್ರೀಶಕ್ತಿ ಸಂಘದ ಇಬ್ಬರು ಪ್ರತಿನಿಧಿ ವಿದ್ಯಾರ್ಥಿ. ವಿದ್ಯಾರ್ಥಿನಿಯರನ್ನು ಆಯ್ಕೆ ಮಾಡುವುದು ಹಾಗೂ ಸಮಿತಿಯಲ್ಲಿ ಶೇಕಡಾ50ರಷ್ಟು ಮಹಿಳಾ ಸದಸ್ಯರಿರುವಂತೆ ಕ್ರಮ ವಹಿಸುವುದು. ಸಮಿತಿ ಸಭೆಗಳಲ್ಲಿ ತೀರ್ಮಾನಿಸುವ ಎಲ್ಲಾ ಕಾರ್ಯಕ್ರಮಗಳು. ತೀರ್ಮಾನಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಸದಸ್ಯ ಕಾರ್ಯದರ್ಶಿಯದ್ದಾಗಿರುತ್ತದೆ. ಪ್ರತಿ ಮೂರು ತಿಂಗಳಿಗೊಮ್ಮೆ ಸಭೆಯನ್ನು ಏರ್ಪಡಿಸಿ ಚರ್ಚಿಸುವುದು.

ಸದರಿ ಸಮಿತಿ /ಸದಸ್ಯರ ಕಾರ್ಯ ಮತ್ತು ಜವಾಬ್ದಾರಿಗಳ ಬಗ್ಗೆ ಅನುಬಂಧ 1 ಮತ್ತು 2ರಲ್ಲಿ ವಿವರಿಸಲಾಗಿದ್ದು, ಅದರಂತೆ ಕಡ್ಡಾಯವಾಗಿ ಕಾರ್ಯ ನಿರ್ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಸಂಧ್ಯಾ ಎಲ್ ನಾಯಕ್)
ಸರ್ಕಾರದ ಉಪ ಕಾರ್ಯದರ್ಶಿ–2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

# ಗ್ರಾಮ ಪಂಚಾಯತಿ ಮಟ್ಟದಲ್ಲಿ

**ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿಯ (WCPC) ರಚನೆ ವಿಧಾನ**

- ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿಯನ್ನು ರಚಿಸುವುದು.
- ಗ್ರಾಮ ಪಂಚಾಯತಿ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಜಂಟಿ ಸಹಿ ಇರುವ ಸಭೆಯ ಆಹ್ವಾನ ಪತ್ರವನ್ನು ಕಳುಹಿಸಬೇಕು.
- ಆಯಾ ಇಲಾಖೆಗಳಿಂದ ನಿಯಮಾನುಸಾರ ಆಯ್ಕೆ ಮಾಡಿದ ಅಧಿಕಾರಿಗಳಿಗೆ ಪತ್ರ ನೀಡಬೇಕು.
- ನಿಮ್ಮ ತಾಲ್ಲೂಕಿನ ತಾಲ್ಲೂಕು ಮಕ್ಕಳ ರಕ್ಷಣಾಧಿಕಾರಿಗಳು (ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ) ಸಭೆಗೆ ಆಹ್ವಾನಿಸಬೇಕು ಸಂಪನ್ಮೂಲ ವ್ಯಕ್ತಿ ಕಳುಹಿಸಲು ಕೋರಬೇಕು.
- ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಒಬ್ಬರು ಸಭೆಗೆ ಆಹ್ವಾನಿಸಬೇಕು.
- ಸಭೆಗೆ ಸೂಕ್ತ ಜಾಗ, ನೆರಳು, ನೀರು, ಆಸನದ ವ್ಯವಸ್ಥೆಲ್ಲವನ್ನು ಮಾಡಿರಬೇಕು.

- ಲಘು ಉಪಹಾರ ವ್ಯವಸ್ಥೆಯನ್ನು ಮಾಡಬಹುದು.
- 200 ಪುಟದ ಉದ್ದದ (ರಟ್ಟಿನ) ಉತ್ತಮ ಗುಣಮಟ್ಟದ ನಡವಳಿ ಪುಸ್ತಕ ಇಡಬೇಕು.
- ಭಾಗವಹಿಸಿದ ಎಲ್ಲರ ಸಹಿ ಪಡೆಯಬೇಕು.
- ಕೆಲವು ಸಮಯಗಳ ಕಾಲ ಸಂಪನ್ಮೂಲ ವ್ಯಕ್ತಿಗಳಿಂದ ಮಕ್ಕಳ ಹಕ್ಕು, ಸಂರಕ್ಷಣೆ, ಮಕ್ಕಳ ಕಾನೂನುಗಳ ಪರಿಚಯ ನೀಡಬೇಕು.
- 1098 ಕಾರ್ಯಕರ್ತರು ಭಾಗವಹಿಸಬೇಕು.
- ವಿವಿಧ ಇಲಾಖೆಯ (1098, ಡಿ.ಸಿ.ಪಿ.ಯು, ಟಿ.ಸಿ.ಪಿ.ಸಿ) ರವರಿಗೆ ಕೆಲವು ನಿಮಿಷ ಮಾತನಾಡಲು ಅವಕಾಶ ನೀಡಬೇಕು.
- ನಂತರ ಸಭೆಗೆ ಸಾಮಾನ್ಯ ಸಭೆಯಲ್ಲಿ ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿಯ ಗುರಿ ಉದ್ದೇಶ, ಕಾರ್ಯಚಟುವಟಿಕೆ, ಬಗ್ಗೆ ಪಿ.ಡಿ.ಒ ತಿಳಿಸಬೇಕು.

- ನಂತರ ಸಮಿತಿ ರಚನೆ ಅಧಿಕೃತ ಶಾಸನಬದ್ದ ಸಮಿತಿಯಾಗಿ ಅಸ್ತಿತ್ವಕ್ಕೆ ಬರುತ್ತದೆ.
- ನಂತರ 3 ತಿಂಗಳಿಗೊಮ್ಮೆ ಅಂದರೆ ವರ್ಷಕ್ಕೆ 4 ಸಲ (ಏಪ್ರಿಲ್, ಜುಲೈ, ಅಕ್ಟೋಬರ್, ಡಿಸೆಂಬರ್) ಕಡ್ಡಾಯವಾಗಿ ಸಮಿತಿಯ ಸಭೆ ನಡೆಸಿ 30 ಅಂಶಗಳ ಬಗ್ಗೆ ಚರ್ಚಿಸಿ ಸೂಕ್ತ ಪರಿಹಾರ, ನ್ಯಾಯ ಮಾಹಿತಿ ನೀಡಬೇಕು.
- "ಮಕ್ಕಳ ಸ್ನೇಹಿ" ಗ್ರಾಮ ಪಂಚಾಯತಿನಲ್ಲಿ, 0% ಬಾಲಕಾರ್ಮಿಕತೆ, 0% ಬಾಲ್ಯವಿವಾಹ, 0% ಮಾನವ ಕಳ್ಳ ಸಾಗಾಣಿಕೆ ಪಂಚಾಯತಿಯಾಗಿ ಮಾಡಬೇಕು.
- ಮಕ್ಕಳಿಗೆ ಸಂರಕ್ಷಿತ ಗ್ರಾಮ, ಹಳ್ಳಿ ಪಂಚಾಯತಿಯಾಗಿ ಪರಿವರ್ತನೆಗೊಳ್ಳಬೇಕು.

## ಗ್ರಾಮ ಪಂಚಾಯತ ಮಟ್ಟದ ಮಹಿಳೆಯರ ಮತ್ತು ಮಕ್ಕಳ ಕಾವಲು ಸಮಿತಿಯ ಜವಾಬ್ದಾರಿಗಳು. ಅನುಬಂಧ–1

- ಗ್ರಾಮ ಪಂಚಾಯತಿಯಲ್ಲಿ 0–18, ಮತ್ತು 19 ರಿಂದ 21 ವರ್ಷದೊಳಗಿನ ಮಕ್ಕಳ ಮಾಹಿತಿಯನ್ನು ಸಂಗ್ರಹಿಸಿ ಇಡಬೇಕು.
- ಪಂಚಾಯತಿ ಕಛೇರಿ, ಶಾಲೆ, ಪೊಲೀಸ್, ಅಂಗನವಾಡಿ ಮಹಿಳಾ ಸ್ವ–ಸಹಾಯ ಸಂಘಗಳು, ಯುವ ಸಂಘಟನೆಗಳು ಮಕ್ಕಳ ಬಗ್ಗೆ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಬೇಕು.
- ಅನೈತಿಕ ಸಾಗಾಣಿಕೆಗೆ ಒಳಗಾದ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಅಗತ್ಯ ರಕ್ಷಣೆ ನೀಡುವದು. ಅವರಿಗೆ ಮತ್ತು ಅವರ ಕುಟುಂಬಕ್ಕೆ ಅಗತ್ಯವಾದ ಆರ್ಥಿಕ, ನೈತಿಕ, ಸಾಮಾಜಿಕ, ವೈದ್ಯಕೀಯ ಹಾಗೂ ಶೈಕ್ಷಣಿಕ ಸಹಾಯವನ್ನು ಒದಗಿಸುವುದು.
- ಸಮುದಾಯದಲ್ಲಿ ಎಲ್ಲರ ಭಾಗವಹಿಸುವಿಕೆಯೊಂದಿಗೆ ಸಾಗಾಣಿಕೆಯನ್ನು ನಿಷೇಧಿಸುವಲ್ಲಿ ಉಸ್ತುವಾರಿ ಮಾಡುವುದು.
- ಸಾಗಾಣಿಕೆಯನ್ನು ತಡೆಗಟ್ಟಲು ಗ್ರಾಮ ಮಟ್ಟದಲ್ಲಿ ಅರಿವು ಮೂಡಿಸಲು ಕಾರ್ಯಕ್ರಮ ಹಮ್ಮಿಕೊಳ್ಳುವುದು.
- ಮಕ್ಕಳ ಸಾಗಾಣಿಕೆ ವಿರುದ್ಧ ಶಾಲೆಗಳಲ್ಲಿ ಮಕ್ಕಳಿಗೆ ಅರಿವು ಮೂಡಿಸುವುದು.
- ಹೊಸ ವ್ಯಕ್ತಿಗಳು ಪಂಚಾಯತ್ ವ್ಯಾಪ್ತಿಯಲ್ಲಿ ಆಗಮಿಸಿದ ಬಗ್ಗೆ ದಾಖಲೆ ಇಡಬೇಕು.
- ಗ್ರಾಮದಿಂದ ಕಾಣೆಯಾದ ಮಹಿಳೆಯರು ಮತ್ತು ಮಕ್ಕಳ ಮಾಹಿತಿಯಿಡಬೇಕು.
- ವಲಸೆ ಹೋದ ಕುಟುಂಬಗಳ ಮಾಹಿತಿಯನ್ನು ಇಡುವುದು ಮತ್ತು ಮೇಲ್ವಿಚಾರಣೆ ನಡೆಸುವುದು.
- ಬಾಲ್ಯವಿವಾಹ ನಿಷೇಧ, ದುಷ್ಪರಿಣಾಮಗಳು ಮತ್ತು ಬಾಲ್ಯವಿವಾಹ ನಿಷೇಧ ಕಾನೂನಿನ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳಬೇಕು.

---

- ಗ್ರಾಮದಲ್ಲಿ ಯಾವುದೇ ಬಾಲ್ಯವಿವಾಹಗಳು ನಡೆಯುತ್ತಿರುವುದು, ನಡೆದಿರುವುದು ಕಂಡುಬಂದಲ್ಲಿ, ಸಂಬಂಧಪಟ್ಟ ಬಾಲ್ಯವಿವಾಹ ನಿಷೇದಾಧಿಕಾರಿಗಳ ಗಮನಕ್ಕೆ ತಂದು **ಎಫ್.ಐ.ಆರ್ ದಾಖಲಿಸುವುದು** ಒಳಗೊಂಡಂತೆ ಅಗತ್ಯ ಕ್ರಮ ಕೈಗೊಳ್ಳುವುದು.
- ಬೇಸಿಗೆ ರಜೆ ಅವಧಿ ಮುಕ್ತಾಯದ ತರುವಾಯ **ಶಾಲೆಗೆ ದಾಖಲಾದ/ದಾಖಲಾಗಬೇಕಾದ ಮಕ್ಕಳ ಸಮೀಕ್ಷೆ** ನಡೆಸುವುದು.
- ಶಿಕ್ಷಣ ಇಲಾಖೆಯೊಂದಿಗೆ ಕೈಜೋಡಿಸಿ, **ಶಾಲೆಯಿಂದ ಹೊರಗುಳಿದ ಮಕ್ಕಳ** ಪೋಷಕರ ಮನವೊಲಿಸಿ, **ಶಾಲೆಗೆ ಮರಳಿ ದಾಖಲಾಗುವ** ಬಗ್ಗೆ ಕ್ರಮವಹಿಸುವುದು.
- ಗ್ರಾಮ ಸಭೆಯಲ್ಲಿ ಮಕ್ಕಳ **ವಿದ್ಯಾಭ್ಯಾಸದ ಮಹತ್ವ,** ವಿವಿಧ ಇಲಾಖೆಗಳಿಂದ ಸಿಗುವ **ಸೌಲಭ್ಯ ಮುಂತಾದವುಗಳನ್ನು** ಸಾರ್ವಜನಿಕರ ಗಮನಕ್ಕೆ ತರುವುದು.
- ಶಾಲೆಯಿಂದ ಹೊರಗುಳಿದ ಪ್ರಾಯ ಪೂರ್ವ ಮಕ್ಕಳಿಗೆ ವಿವಿಧ ರೀತಿಯ **ಕೌಶಲ್ಯ ತರಭೇತಿಯನ್ನು** ನೀಡಲು ಕ್ರಮವಹಿಸುವುದು.
- ಉತ್ತಮ ಅಂಕಗಳನ್ನು ಪಡೆದ ಮಕ್ಕಳನ್ನು **ಪ್ರೋತ್ಸಾಹಿಸುವುದು.**

- **ಹೆಣ್ಣುಮಕ್ಕಳ ದಾಖಲಾತಿ ಹೆಚ್ಚಿರುವ ಶಾಲೆಗಳನ್ನು ಗುರುತಿಸಿ, ಗ್ರಾಮಸಭೆಯಲ್ಲಿ ಸನ್ಮಾನಿಸುವುದು.**
- ಗ್ರಾಮಸಭೆಗಳ ಮೂಲಕ **ಶಿಕ್ಷಣ ತಜ್ಞರಿಂದ ವಿಧ್ಯಾಭ್ಯಾಸದ ಮಹತ್ವ** ಕುರಿತು ಮಕ್ಕಳಿಗೆ ಮತ್ತು ಪೋಷಕರಿಗೆ ಅರಿವು ಮೂಡಿಸುವುದು.
- **7 ನೇ ತರಗತಿಯಿಂದ 8 ನೇ ತರಗತಿಗೆ ಹಾಗೂ 10 ನೇ ತರಗತಿಯಿಂದ ಪಿಯುಸಿ** ತರಗತಿಗಳಿಗೆ ಮಕ್ಕಳು ದಾಖಲಾಗುವಂತೆ ಸಮಿತಿಯ ಸದಸ್ಯರು **ಖಚಿತಪಡಿಸಿಕೊಳ್ಳುವುದು.**
- ಪಂಚಾಯತ್ ವ್ಯಾಪ್ತಿಯಲ್ಲಿ ಸರಕಾರಿ ಸೌಲಭ್ಯಗಳನ್ನು ನೀಡುವಾಗ ಫಲಾನುಭವಿಗಳಿಂದ ಅವರ ಕುಟುಂಬಗಳಲ್ಲಿ ಬಾಲಕಾರ್ಮಿಕತೆ, ಬಾಲ್ಯವಿವಾಹಕ್ಕೆ ಅವಕಾಶವಿಲ್ಲದಂತೆ **ಕರಾರು ಪತ್ರ ಬರೆಯಿಸಿಕೊಳ್ಳುವುದು.**
- ಮಕ್ಕಳನ್ನು ದುಡಿಸುವ ಮಾಲೀಕರುಗಳಿಗೆ ಮತ್ತು ಸಹಕರಿಸುವವರಿಗೂ ಕ್ರಮ ಜರುಗಿಸುವಂತೆ **ಸಂಬಂಧಪಟ್ಟ ಇಲಾಖೆಗೆ ಮಾಹಿತಿಯನ್ನು** ನೀಡುವುದು.

- **ಗ್ರಾಮ ಪಂಚಾಯತ್ ವ್ಯಾಪ್ತಿಯ 18 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣಕ್ಕಾಗಿ, ಸಮುದಾಯದ, ಇಲಾಖೆಗಳ, ಸಂಘ ಸಂಸ್ಥೆಗಳ ಪಾಲುದಾರಿಕೆ, ಸಹಭಾಗಿತ್ವ, ಸಮನ್ವಯತೆ, ಸಹಕಾರ ಮತ್ತು ಹೊಣೆಗಾರಿಕೆ ಕುರಿತು ಕ್ರಮ ಕೈಗೊಳ್ಳುವುದು**
- **ಗ್ರಾಮ ಪಂಚಾಯತ್ ಮಟ್ಟದಲ್ಲಿ ರೈತರು, ಕಾರ್ಮಿಕರು, ಮಾಲೀಕರುಗಳು ಮಕ್ಕಳನ್ನು ಹೋಲ, ಗದ್ದೆ, ತೋಟ ಮತ್ತು ಜೀತ ಸಂಬಳಕ್ಕೆ 18 ವರ್ಷದೊಳಗಿನ ಮಕ್ಕಳನ್ನು ದುಡಿಸದಂತೆ ಹಾಗೂ ದನ, ಕುರಿ, ಎಮ್ಮೆ ಮೇಯಿಸಲು ಮಕ್ಕಳನ್ನು ಬಳಸದಂತೆ ನಿರಂತರ ನಿಗಾವಹಿಸಿ 18 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ನಿರಂತರ ಶಿಕ್ಷಣ ಒದಗಿಸಲು ಕ್ರಮ ಕೈಗೊಳ್ಳುವುದು.**
- **ವಿಕೃತ ಮೂಡನಂಬಿಕೆಗಳಿಗೆ ಮತ್ತು ಅವಘಡಗಳಿಗೆ 18 ವರ್ಷದೊಳಗಿನ ಮಕ್ಕಳು ಬಲಿಯಾಗದಂತೆ ರಕ್ಷಣೆ ನೀಡುವುದು ಹಾಗೂ ಈ ಕುರಿತು ಕ್ರಮ ಕೈಗೊಳ್ಳವುದು.**
- **ಅನಾಥ/ಪೋಷಕರಿಗೆ ಬೇಡವಾದ ಮಕ್ಕಳು ಕಂಡುಬಂದಲ್ಲಿ ಮಕ್ಕಳ ಕಲ್ಯಾಣ ಸಮಿತಿಗೆ ಮಾಹಿತಿ ನೀಡುವುದು, ಅಲ್ಲದೇ ಇತಂಹ ಪ್ರಕರಣಗಳನ್ನು ಮುಂಚಿತವಾಗಿ ಗುರುತಿಸಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ತಿಳಿಸುವುದು. ಸಂಕಷ್ಟದಲ್ಲಿರುವ ಮಹಿಳೆ ಹೆಣ್ಣು ಮಕ್ಕಳು ಗರ್ಭಿಣಿಯಾದಾಗ ಇವರನ್ನು ನಿರಂತರವಾಗಿ ಅನುಸರಣೆ ಮಾಡುವುದು.**

- ಮಕ್ಕಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಕೈಗೆತ್ತಿಕೊಂಡು ಸಮಸ್ಯೆಗಳನ್ನು ಬಗೆಹರಿಸುವುದು.
- ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಕ್ಕಳು ಕಂಡುಬಂದಲ್ಲಿ ಮಗುವಿಗೆ ರಕ್ಷಣೆ ನೀಡಿ ತಕ್ಷಣ ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರಪಡಿಸುವುದು.
- ಕಡ್ಡಾಯವಾಗಿ ಮಕ್ಕಳ ಗ್ರಾಮ ಸಭೆಗಳನ್ನು ನಡೆಸುವಂತೆ ಕ್ರಮವಹಿಸಿ, ಈ ಸಮಿತಿಯಲ್ಲಿ ಚರ್ಚಿಸಿದ ಅಂಶಗಳಿಗೆ ಕ್ರಮವಹಿಸುವುದು.

- ಮಕ್ಕಳಿಗೆ ಸಂಬಂಧಿಸಿದ ಸೂಕ ಯೋಜನೆಗಳಲ್ಲಿ ಅವಶ್ಯಕವಾದ ಸೌಲಭ್ಯ ಪರಿಹಾರ, ಪುನರ್ವಸತಿ ಮತ್ತು ಪರ್ಯಾಯ ವ್ಯವಸ್ಥೆಗಳನ್ನು ಆಯಾ ಇಲಾಖೆಗಳ ಅನುಸಾರವಾಗಿ ಮಕ್ಕಳಿಗೆ/ಕುಟುಂಬಗಳಿಗೆ ಒದಗಿಸುವುದು.

- ಗ್ರಾಮ ಪಂಚಾಯತಿಯ ಪ್ರತಿ ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಕ್ಲಬ್/ ಮೀನಾ ತಂಡ/ ಮಕ್ಕಳ ಸುರಕ್ಷತಾ ಸಮಿತಿಗಳ ಕಾರ್ಯ ವೈಖರಿಯ ಬಗ್ಗೆ ಮೇಲ್ವಿಚಾರಣೆ ಮಾಡುವುದು ಹಾಗೂ ಎಲ್ಲಾ ಮೂಲಭೂತ ಸೌಕರ್ಯಗಳು ಇರುವಂತೆ ನೋಡಿಕೊಳ್ಳುವುದು.

## ಗ್ರಾಮ ಪಂಚಾಯತ ಮಟ್ಟದ ಮಹಿಳೆಯರ ಮತ್ತು ಮಕ್ಕಳ ಕಾವಲು ಸಮಿತಿ ಸದಸ್ಯರ ಜವಾಬ್ದಾರಿಗಳು.ಅನುಬಂಧ–2

**ಸರಕಾರದ ಆದೇಶ ಸಂಖ್ಯೆ: ಮಮಇ 48 ಮಮಅ 2018, ದಿನಾಂಕ: 06.08.2019**

- 0 ಯಿಂದ 06 ವರ್ಷದೊಳಗಿನ ಎಲ್ಲಾ ಮಕ್ಕಳ ಮಾಹಿತಿನ್ನು ನಿರ್ವಹಿಸುವುದು.
- ಆರೋಗ್ಯ ಇಲಾಖೆಯ ಶುಶ್ರೂಷಕರು/ದಾದಿಯರು/ಆಶಾ ಕಾರ್ಯಕರ್ತೆಯರೊಂದಿಗೆ ಗ್ರಾಮದಲ್ಲಿ ಆಗುವ ಪ್ರತಿಯೊಂದು ಜನನದ ಬಗ್ಗೆ ಗ್ರಾಮ ಲೆಕ್ಕಾಧಿಕಾರಿಗಳೊಂದಿಗೆ ಪರಿಶೀಲಿಸಿ, ಹೊಂದಾಣಿಕೆ ಮಾಡಿಕೊಳ್ಳುವುದು.
- ಬಾಲ್ಯ ವಿವಾಹ ನಿಷೇಧಾಧಿಕಾರಿಗಳಿಗೆ ಬಾಲ್ಯವಿವಾಹ ತಡೆಯಲು ಸಹಕರಿಸುವುದು ಮತ್ತು ಪಂಚಾಯತ್ ಕಾರ್ಯ ಕ್ಷೇತ್ರದಲ್ಲಿ ಯಾವುದೇ ಬಾಲ್ಯವಿವಾಹಗಳು ನಡೆಯದಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
- ಬಾಲ್ಯವಿವಾಹ ನಡೆಯುತ್ತಿರುವುದು ಕಂಡುಬಂದಲ್ಲಿ ತಕ್ಷಣ ಮೇಲಾಧಿಕಾರಿಗಳ ಗಮನಕ್ಕೆ ತರುವುದು ಮತ್ತು ಮಾಹಿತಿದಾರರ ಹೆಸರನ್ನು ಗೌಪ್ಯವಾಗಿಡುವುದು.
- ವೃತ್ತ ಮೇಲ್ವಿಚಾರಕಿಯರಿಗೆ ಬಾಲ್ಯವಿವಾಹಗಳನ್ನು ಒಳಗೊಂಡಂತೆ ಮಾಹಿತಿಯನ್ನು ಪ್ರತಿ ತಿಂಗಳು ವರದಿ ಮಾಡತಕ್ಕದ್ದು. ಬಾಲ್ಯ ವಿವಾಹ ನಡೆಯುವ ಸಂದರ್ಭದಲ್ಲಿ ಗ್ರಾಮ ಲೆಕ್ಕಿಗರಿಗೆ ದೂರು ನೀಡುವುದು.

# ಎ.ಎನ್.ಎಮ್ / ಆಶಾ ಕಾರ್ಯಕರ್ತೆಯರು

- ಗ್ರಾಮದಲ್ಲಿ ಜನಿಸಿದ ಮಕ್ಕಳ ನೊಂದಣಿಯನ್ನು ಗ್ರಾಮ ಲೆಕ್ಕಿಗರು ಮಾಡಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳುವುದು.
- ಮಹಿಳೆಯರಿಗೆ ಮತ್ತು ಹದಿಹರೆಯದ ಹೆಣ್ಣು ಮಕ್ಕಳಿಗೆ ಬಾಲ್ಯವಿವಾಹದಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳು, ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮದಲ್ಲಿ ಅರಿವು ಮೂಡಿಸುವುದು.
- ಬಾಲ್ಯವಿವಾಹಗಳು ನಡೆಯುವುದು ಕಂಡುಬಂದ ಸಂದರ್ಭದಲ್ಲಿ ಪೋಷಕರು/ಮಕ್ಕಳು/ಹಿರಿಯರೊಂದಿಗೆ ಸಮಾಲೋಚನೆ ನಡೆಸುವುದು, ಬಾಲ್ಯವಿವಾಹ ನಿಷೇದಾಧಿಕಾರಿಗಳಿಗೆ ಬಾಲ್ಯವಿವಾಹ ತಡೆಯಲು ಸಹಕರಿಸುವುದು.
- ತನ್ನ ಕಾರ್ಯಕ್ಷೇತ್ರದಲ್ಲಿ ಯಾವುದೇ ಬಾಲ್ಯವಿವಾಹ ನಡೆಯದಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
- ಬಾಲ್ಯವಿವಾಹ ನಡೆಯುತ್ತಿರುವುದು ಕಂಡುಬಂದಲ್ಲಿ ತಕ್ಷಣ ಮೇಲಾಧಿಕಾರಿಗಳ ಗಮನಕ್ಕೆ ತರುವುದು ಮತ್ತು ಮಾಹಿತಿದಾರರ ಹೆಸರನ್ನು ಗೌಪ್ಯವಾಗಿಡುವುದು.
- ಪ್ರತಿ 3 ತಿಂಗಳಿಗೊಮ್ಮೆ ಸಭೆಗಳಿಗೆ ಹಾಜರಾಗುವುದು ಮತ್ತು ತಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನೆ ಮಾಡುವುದು.
- ಪ್ರತಿ ತಿಂಗಳು ಮಾಹಿತಿಯನ್ನು ಮಹಿಳಾ ಆರೋಗ್ಯ ಸಂದರ್ಶಕರಿಗೆ ನೀಡುವುದು.
- ಬಾಲಕಾರ್ಮಿಕ ಪ್ರಕರಣಗಳು ಕಂಡುಬಂದಲ್ಲಿ ತಕ್ಷಣ ಸಮಿತಿಯ ಗಮನಕ್ಕೆ ತರುವುದು.

- **ಭಿಕ್ಷಾಟನೆ/ ಬೀದಿ–ಚಿಂದಿ ಆಯುವ ಮಕ್ಕಳಿಗೆ** ರಕ್ಷಣೆ ಒದಗಿಸಿ ಶಿಕ್ಷಣ ನೀಡುವಂತೆ ಕ್ರಮವಹಿಸುವುದು.
- ತನ್ನ ಕಾರ್ಯಕ್ಷೇತ್ರದಲ್ಲಿ ಮಕ್ಕಳ ಮೇಲಿನ **ಲೈಂಗಿಕ ದೌರ್ಜನ್ಯ ಪ್ರಕರಣಗಳು** ಕಂಡುಬಂದಲ್ಲಿ ತಕ್ಷಣ ಪೊಲೀಸ್ ಮತ್ತು ಸಮಿತಿ ಗಮನಕ್ಕೆ ತರುವುದು.
- **ವಿಕೃತ ಮೂಡನಂಬಿಕೆಗಳಿಗೆ ಹಾಗೂ ಅವಘಡಗಳಿಗೆ 18 ವರ್ಷದೊಳಗಿನ ಮಕ್ಕಳು ಬಲಿಯಾಗದಂತೆ** ರಕ್ಷಣೆ ಮಾಡಲು ಸಮಿತಿ ಗಮನಕ್ಕೆ ತರುವುದು.
- ಪಂಚಾಯತಿ ಮಟ್ಟದಲ್ಲಿ ಯಾವುದೇ **ರೈತರು, ಕಾರ್ಮಿಕರು ಮಕ್ಕಳನ್ನು ದುಡಿಸದಂತೆ** ಹಾಗೂ ದನ, ಕುರಿ ಮತ್ತು ಎಮ್ಮೆ ಮೇಯಿಸಲು ಬಳಸದಂತೆ ನಿರಂತರ ನಿಗಾವಹಿಸುವುದು.
- ಅನಾಥ/ಪೋಷಕರಿಗೆ ಬೇಡವಾದ ಮಕ್ಕಳು ಬೀದಿಯಲ್ಲಿ ಬೀಸಾಡಿದ ಮಕ್ಕಳು ಕಂಡುಬಂದಲ್ಲಿ **ಮಕ್ಕಳ ಕಲ್ಯಾಣ ಸಮಿತಿಗೆ ಮಾಹಿತಿ ನೀಡುವುದು,** ಅಲ್ಲದೇ ಇತಂಹ ಪ್ರಕರಣಗಳನ್ನು ಮುಂಚಿತವಾಗಿ ಗುರುತಿಸಿ ಮಕ್ಕಳ **ಸಹಾಯವಾಣಿ–1098** ಹಾಗೂ **ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಮಾಹಿತಿಯನ್ನು ತಿಳಿಸುವುದು.**

## ಪೊಲೀಸ್ ಅಧಿಕಾರಿ:

- ಮಕ್ಕಳ ದೌರ್ಜನ್ಯ ಪ್ರಕರಣಗಳು ಕಂಡುಬಂದಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವುದು ಮತ್ತು ಬಾಲ ಕಾರ್ಮಿಕ ಪ್ರಕರಣಗಳು ಕಂಡುಬಂದಲ್ಲಿ ತಕ್ಷಣ ಸಮಿತಿಯವರೊಂದಿಗೆ ಚರ್ಚಿಸಿ ಕ್ರಮವಹಿಸುವುದು.





## ಮುಖ್ಯೋಪಾಧ್ಯಾಯರುಗಳು/ ಶಿಕ್ಷಕರು

- ಮಗುವನ್ನು **ಶಾಲೆಯಲ್ಲಿ ಉಳಿಸಿಕೊಳ್ಳಲು** ಪ್ರಯತ್ನಿಸುವುದು.
- ಶಾಲೆ ಬಿಟ್ಟ ಮಕ್ಕಳ ಅದರಲ್ಲೂ ಮುಖ್ಯವಾಗಿ ಋತುಮಾನದ ವಲಸೆಯಿಂದಾಗಿ **ಶಾಲೆ ಬಿಡುವ ಮಕ್ಕಳ** ಬಗ್ಗೆ ಅಂಗನಾವಡಿ ಕಾರ್ಯಕರ್ತೆಯರ ಸಹಾಯದಿಂದ  ಅನುಪಾಲನೆ ಮಾಡುವುದು.
- ಮಕ್ಕಳ ಗೈರು ಹಾಜರಿ ಬಗ್ಗೆ ನಿಗಾವಹಿಸುವುದು. ಮಗು **3 ದಿನಕ್ಕಿಂತ ಹೆಚ್ಚಿನ ದಿನ ಶಾಲೆಗೆ ಗೈರು ಹಾಜರಾದಲ್ಲಿ** ಅಂಗನಾವಡಿ ಕಾರ್ಯಕರ್ತೆಯರ ಸಹಾಯದಿಂದ ಅತಂಹ ಮಕ್ಕಳ **ಪೋಷಕರನ್ನು ಭೇಟಿ** ಮಾಡಿ ಮಗುವನ್ನು ವಾಪಾಸ್ ಶಾಲೆಗೆ ಕರೆಯಿಸುವ ಬಗ್ಗೆ ಕ್ರಮವಹಿಸುವುದು.
- ಸುತ್ತೋಲೆಯಲ್ಲಿರುವಂತೆ ಶಾಲೆಗಳಲ್ಲಿ **ಮಕ್ಕಳ ಹಕ್ಕುಗಳ ಕ್ಲಬ್‌ಗಳನ್ನು ರಚಿಸುವುದು**. ಮಕ್ಕಳನ್ನು ಬಾಲ್ಯವಿವಾಹದಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ತಿಳಿಯಲು ಮತ್ತು ಬಾಲ್ಯವಿವಾಹ ನಡೆಸಿದಲ್ಲಿ ದೂರೆಯುವ ಶಿಕ್ಷೆಯ ಬಗ್ಗೆ ಅರಿವು ಮೂಡಿಸಲು **ಸಕ್ರೀಯವಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು.**
- ಶಾಲೆಗಳಲ್ಲಿ **“ಮಕ್ಕಳ ಸುರಕ್ಷತಾ ನೀತಿ” ಯನ್ನು** ಪ್ರತಿ ಶಾಲೆಯಲ್ಲಿ ಅನುಷ್ಠಾನ, **ಮಕ್ಕಳ ಹಕ್ಕುಗಳ ಕ್ಲಬ್, ಮಕ್ಕಳ ಸಂಸತ್ತು** ಅನುಷ್ಠಾನದ ಬಗ್ಗೆ ಮತ್ತು **ಹಾಸ್ಟೇಲ್‌ಗಳಲ್ಲಿ ಮಕ್ಕಳ ಸುರಕ್ಷತಾ ನೀತಿಯ** ಮತ್ತು ಮಕ್ಕಳ ಸುರಕ್ಷತಾ ಘಟಕಗಳ  ಅನುಷ್ಠಾನದ ಬಗ್ಗೆ ಚರ್ಚೆ.

- ಶಾಲೆಯಲ್ಲಿ ಪ್ರತಿ ತಿಂಗಳು **ಮೌಲ್ಯಾಧಾರಿತ ಶಿಕ್ಷಣದ ತರಗತಿಯನ್ನು** ನಡೆಸುವ ಮೂಲಕ ಸಾಮಾಜಿಕ ಜವಾಬ್ದಾರಿಗಳನ್ನು ಉತ್ತೇಜಿಸುವುದು ಮತ್ತು ಮಕ್ಕಳ ಹಕ್ಕುಗಳ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವುದು.
- ಬಾಲ್ಯ ವಿವಾಹ ನಡೆಯುವುದು ಕಂಡುಬಂದ ಸಂದರ್ಭದಲ್ಲಿ ಪೋಷಕರು/ ಮಕ್ಕಳು/ ಹಿರಿಯರೊಂದಿಗೆ **ಸಮಾಲೋಚನೆ ನಡೆಸುವುದು,** ಬಾಲ್ಯವಿವಾಹ ನಿಷೇದಾಧಿಕಾರಿಗಳಿಗೆ **ಬಾಲ್ಯವಿವಾಹ ತಡೆಯಲು ಸಹಕರಿಸುವುದು.**
- ತನ್ನ ಕಾರ್ಯಕ್ಷೇತ್ರದಲ್ಲಿ ಯಾವುದೇ **ಬಾಲ್ಯವಿವಾಹ ನಡೆಯದಿರುವ** ಬಗ್ಗೆ ಖಾತ್ರಿಪಡಿಸಿಕೊಳ್ಳವುದು.
- ಸಮುದಾಯದಿಂದ ಬಾಲ್ಯವಿವಾಹ ನಡೆಯುತ್ತಿರುವ ಬಗ್ಗೆ ಮಾಹಿತಿಯು ಲಭಿಸಿದ ತಕ್ಷಣ ಗ್ರಾಮ ಲೆಕ್ಕಿಗರಿಗೆ ಅಥವಾ ಬಾಲ್ಯವಿವಾಹ ನಿಷೇದಾಧಿಕಾರಿಗಳಿಗೆ **ಮಾಹಿತಿ ನೀಡುವುದು ಮತ್ತು ಮಾಹಿತಿದಾರರ ಹೆಸರನ್ನು ಗೌಪ್ಯವಾಗಿಡುವುದು.**
- ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ **ಮೇಲಿನ ವಿಷಯಗಳನ್ವಯ ಪ್ರತಿ ತಿಂಗಳು ವರದಿ** ಮಾಡುವುದು ಮತ್ತು ಸಭೆಗಳೀಗೆ ತಪ್ಪದೇ ಹಾಜರಾಗುವುದು.

# ಗ್ರಾಮ ಲೆಕ್ಕಿಗರು.

- **ಅಂಗನವಾಡಿ ಕಾರ್ಯಕರ್ತೆಯರು/ಎ.ಎನ್.ಎಮ್/ ಆಶಾ ಕಾರ್ಯಕರ್ತೆಯರುಗಳ ಸಹಕಾರದೊಂದಿಗೆ ಪ್ರತಿ ಗ್ರಾಮದಲ್ಲಿ ಜನಿಸುವ ಮಕ್ಕಳ ನೋಂದಣಿ ಮತ್ತು ಜನನ ಪ್ರಮಾಣ ಪತ್ರ ವಿತರಿಸುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.**
- **ಸಾಮೂಹಿಕ ವಿವಾಹ/ವೈಯಕ್ತಿಕ ವಿವಾಹಗಳಲ್ಲಿ ಬಾಲ್ಯವಿವಾಹ ನಡೆಯುವ ಬಗ್ಗೆ ದೂರು ಬಂದಲ್ಲಿ ತಕ್ಷಣ ಸೂಕ್ತ ಕ್ರಮ ಕೈಗೊಂಡು, ಬಾಲ್ಯ ವಿವಾಹ ನಿಷೇಧ ಕಾಯ್ದೆಯನ್ವಯ ಬಾಲ್ಯವಿವಾಹ ತಡೆಯುವ ಬಗ್ಗೆ ಕ್ರಮವಹಿಸುವುದು.**
- **ಸಾಮೂಹಿಕ ವಿವಾಹಗಳು ನಡೆಯುವ ಸ್ಥಳದಲ್ಲಿ ಖುದ್ದು ಹಾಜರಿದ್ದು, ಯಾವುದೇ ಬಾಲ್ಯವಿವಾಹಗಳು ನಡೆಯದಂತೆ ಖಚಿತಪಡಿಸಿಕೊಳ್ಳುವುದು.**
- **ಬಾಲ್ಯವಿವಾಹ ಶಿಕ್ಷಾರ್ಹ ಅಪರಾಧ ಎಂದು ಸಾರ್ವಜನಿಕರಿಗೆ ಮಾಹಿತಿಯನ್ನು ನೀಡುವ ಫಲಕಗಳನ್ನು, ಸಾಮೂಹಿಕ ವಿವಾಹ ನಡೆಯುವ ಸ್ಥಳಗಳಲ್ಲಿ ಪ್ರದರ್ಶಿಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು. ಫಲಕದಲ್ಲಿರುವ ಮಾಹಿತಿಯು ನಿಗದಿತ ಮಾರ್ಗಸೂಚಿಯಂತೆ ಇರುವ ಬಗ್ಗೆ ಖಾತರಿಪಡಿಸಿಕೊಳ್ಳಬೇಕು.**
- **ಬಾಲ್ಯವಿವಾಹಕ್ಕೆ ಸಂಬಂಧಿಸಿದ ಮಾಸಿಕ ಸಭೆಗಳಿಗೆ ತಪ್ಪದೇ ಹಾಜರಾಗುವುದು.**
- **ರಾಜಸ್ವ ನಿರೀಕ್ಷಕರು/ತಹಶೀಲ್ದಾರರಿಗೆ ಬಾಲ್ಯವಿವಾಹದ ಮಾಹಿತಿಯನ್ನು ಒಳಗೊಂಡಂತೆ ಪ್ರತಿ ತಿಂಗಳು ಮಾಹಿತಿ ನೀಡುವುದು ಹಾಗೂ ಸಭೆಗಳಿಗೆ ತಪ್ಪದೇ ಹಾಜರಾಗುವುದು.**

# ಸಮಿತಿ ಸಭೆಗಳನ್ನು ಕರೆಯುವುದು.

- ಸದರಿ ಸಮಿತಿಯು ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು.
- ಸಮಿತಿ ಸಭೆಯನ್ನು, ಸದಸ್ಯ ಕಾರ್ಯದರ್ಶಿಯು, ಸಮಿತಿಯ ಅಧ್ಯಕ್ಷರೊಂದಿಗೆ ಸಮಾಲೋಚಿಸಿ, ನಿಗದಿಪಡಿಸಬಹುದಾದಂತಹ ದಿನಗಳಂದು ಮತ್ತು ಸಮಯದಲ್ಲಿ ನಡೆಸತಕ್ಕದ್ದು.
- ಸದಸ್ಯ ಕಾರ್ಯದರ್ಶಿಯು ಪ್ರತಿಯೊಂದು ಸಭೆಯ ಬಗ್ಗೆ ಸದಸ್ಯರಿಗೆ ಕನಿಷ್ಠ 3 ದಿನಗಳ ಮೊದಲು ಸಭಾ ಸೂಚನೆಯನ್ನು ಉದ್ದೇಶಿತ ಕಾರ್ಯಸೂಚಿಯೊಂದಿಗೆ ನೀಡತಕ್ಕದ್ದು.
- ಸದಸ್ಯ ಕಾರ್ಯದರ್ಶಿಯು ಒಂದು ದಿನ ಮೊದಲು ನೋಟೀಸ್‌ನ್ನು ನೀಡುವ ಮೂಲಕ ತುರ್ತು ಸಭೆಯನ್ನು ಕರೆಯಬಹುದು.
- ಸಭೆಯ ಕೋರಂ ಅಧ್ಯಕ್ಷರು ಸೇರಿದಂತೆ ಹೆಚ್ಚಿನ ಸದಸ್ಯರು ಸಭೆಯಲ್ಲಿ ಹಾಜರಿರತಕ್ಕದ್ದು. ಒಟ್ಟು ಸದಸ್ಯರಲ್ಲಿ ಶೇ 50%ಕ್ಕಿಂತ ಹೆಚ್ಚಿನ ಸದಸ್ಯರು ಸಭೆಯಲ್ಲಿ ಹಾಜರಿರತಕ್ಕದ್ದು.
- ಕೋರಂ ಕೊರತೆಯಿಂದಾಗಿ ಸಭೆಯನ್ನು ನಡೆಸಲಾಗದಿದ್ದಲ್ಲಿ, ಸದರಿ ದಿನಾಂಕದಿಂದ 4 ದಿನಗಳ ಒಳಗೆ ಮತ್ತೊಂದು ದಿನಕ್ಕೆ ಸದಸ್ಯ ಕಾರ್ಯದರ್ಶಿಯು ಸಭೆಯನ್ನು ನಿಗದಿಪಡಿಸತಕ್ಕದ್ದು. ನಿಗದಿಪಡಿಸಲ್ಪಟ್ಟ ಸಭೆಯೂ ಸಹ ಅಗತ್ಯ ಕೋರಂ ಹೊಂದಿರದಿದ್ದಲ್ಲಿ, ಆಗ ವಾಸ್ತವವಾಗಿ ಹಾಜರಿರುವ ಸದಸ್ಯರ ಕೋರಂ ಸಾಕಾಗುತ್ತದೆ.
- ಅಧ್ಯಕ್ಷರು ಗೈರು ಹಾಜರಿದ್ದಲ್ಲಿ ತುರ್ತು ಸಭೆಯನ್ನು ಕರೆಯಬೇಕಾದ ಸಂದರ್ಭವಿದ್ದಲ್ಲಿ, ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆಯನ್ನು ಏರ್ಪಡಿಸುವುದು.

## ಮಕ್ಕಳ ಸಂರಕ್ಷಣೆಯ ಚಟುವಟಿಕೆ ನಡೆಸುತ್ತಿರುವ ಇಲಾಖೆ/ ಸ್ವಯಂಸೇವಾ ಸಂಸ್ಥೆಗಳ ಸಹಭಾಗಿತ್ವ, ಸಹಕಾರ, ಸಮನ್ವಯತೆ ಹಾಗೂ ಭಾಗವಹಿಸುವಿಕೆಯನ್ನು ಸಬಲೀಕರಣಗೊಳಿಸುವುದು.

- ಮಕ್ಕಳ ಸಹಾಯವಾಣಿ
- ಜಿಲ್ಲಾ ಮಕ್ಕಳ ರಕ್ಷಣಾ ಘಟಕ
- ಜಿಲ್ಲಾ ಬಾಲಕಾರ್ಮಿಕ ಕ್ರಿಯಾ  ಯೋಜನೆ,
- ಮಹಿಳಾ ಸಾಂತ್ವನ ಕೇಂದ್ರ,
- ಜಿಲ್ಲಾ ಆಸ್ಪತ್ರೆಯ ನಿರ್ಭಯ ಕೇಂದ್ರ,
- ಅರ್ಹ ಸಂಸ್ಥೆಗಳು,
- ಅಲ್ಪಾವದಿ ವಸತಿ ಕೇಂದ್ರ
- ದತ್ತು ಕೇಂದ್ರ,
- ಮಕ್ಕಳ ವಿಶೇಷ  ಪೊಲೀಸ್ ಘಟಕ,
- ಬಾಲಕರ/ಬಾಲಕಿಯರ ಬಾಲ ಮಂದಿರ,
- ಬಿಕ್ಷುಕರ ಪುರ್ನವಸತಿ ಕೇಂದ್ರ,
- ದೇವದಾಸಿ ಮಹಿಳೆಯ ಪುರ್ನವಸತಿ ಕೇದ್ರ,
- ಶಿಶು ಗ್ರಹ,
- ಮಹಿಳಾ ವಸತಿ ಕೇಂದ್ರ



90 ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಪ್ರ. 58(1–ಎ)(x)

ಅಧ್ಯಾಯ IV

ಗ್ರಾಮ ಪಂಚಾಯಿತಿಗಳ ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ಅಧಿಕಾರಗಳು

**58. ಗ್ರಾಮ ಪಂಚಾಯಿತಿಯ ಪ್ರಕಾರ್ಯಗಳು.**–[1][(1) ಗ್ರಾಮ ಪಂಚಾಯಿತಿಯು ಅನುಸೂಚಿ Iರಲ್ಲಿ ನಿರ್ದಿಷ್ಟಪಡಿಸಿದ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು:

ಪರಂತು, ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು ಅನುಸೂಚಿ Iರಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಪ್ರಕಾರ್ಯದ ನಿರ್ವಹಣೆಗಾಗಿ ನಿಧಿಯನ್ನು ಒದಗಿಸಿರುವಲ್ಲಿ ಗ್ರಾಮ ಪಂಚಾಯಿತಿಯು ಅಂಥ ಪ್ರಕಾರ್ಯವನ್ನು ನಿರ್ವಹಿಸಲು ನಿರೂಪಿಸಲಾಗಿರುವ ಮಾರ್ಗದರ್ಶನಗಳಿಗೆ ಅಥವಾ ಸೂತ್ರಗಳಿಗನುಸಾರವಾಗಿ ಅಂಥ ಪ್ರಕಾರ್ಯವನ್ನು ನಿರ್ವಹಿಸತಕ್ಕದ್ದು.

(1–ಎ) (1)ನೇ ಉಪ–ಪ್ರಕರಣದಲ್ಲಿ ಮತ್ತು ಅನುಸೂಚಿ Iರಲ್ಲಿ ಏನೇ ಇದ್ದರೂ, ಗ್ರಾಮ ಪಂಚಾಯಿತಿಯ ವಶದಲ್ಲಿರುವ ಗ್ರಾಮ ಪಂಚಾಯಿತಿ ನಿಧಿಯು ಅನುಮತಿಸುವಷ್ಟರಮಟ್ಟಿಗೆ ಗ್ರಾಮ ಪಂಚಾಯಿತಿಯು ಈ ಕೆಳಗಿನ ವಿಷಯಗಳ ಬಗ್ಗೆ ಪಂಚಾಯಿತಿ ಪ್ರದೇಶದೊಳಗೆ ಸೂಕ್ತವಾಗಿ ಅವಕಾಶ ಕಲ್ಪಿಸುವುದು ಕಡ್ಡಾಯವಾಗತಕ್ಕದ್ದು, ಎಂದರೆ.–

(i) ಪ್ರತಿವರ್ಷ ಶೇಕಡಾ ಹತ್ತರಷ್ಟು ಮನೆಗಳಿಗೆ ಕಡಿಮೆ ಇಲ್ಲದಂತೆ ಶೌಚಗೃಹಗಳನ್ನು ಒದಗಿಸುವುದು ಮತ್ತು ಸಾಧ್ಯವಾದಷ್ಟು ಬೇಗನೇ ಎಲ್ಲಾ ಮನೆಗಳಿಗೂ ಈ ಸೌಲಭ್ಯವನ್ನು ಒದಗಿಸುವ ಗುರಿ ಸಾಧಿಸುವುದು;

(ii) ಪುರುಷರು ಮತ್ತು ಮಹಿಳೆಯರಿಗಾಗಿ ಸಾಕಷ್ಟು ಸಮುದಾಯ ಶೌಚಗೃಹಗಳನ್ನು ನಿರ್ಮಿಸುವುದು ಮತ್ತು ಅವುಗಳನ್ನು ನಿರ್ವಹಿಸುವುದು;

(iii) ಸಾಕಷ್ಟು ಸಂಪನ್ಮೂಲಗಳನ್ನು ಸೃಜಿಸಿ ತಾನೇ ಅಥವಾ ವಾರ್ಷಿಕ ಕರಾರಿನ ಮೂಲಕವಾಗಲಿ ನೀರು ಪೂರೈಕೆ ಕಾಮಗಾರಿಗಳನ್ನು ನಿರ್ವಹಿಸುವುದು;

(iv) ಈ ಅಧಿನಿಯಮದಡಿ ವಿಧಿಸಬಹುದಾದ ತೆರಿಗೆಗಳು, ದರಗಳು ಮತ್ತು ಶುಲ್ಕಗಳನ್ನು ನಿಯತಕಾಲಿಕವಾಗಿ ಪರಿಶೀಲಿಸುವುದು ಮತ್ತು ವಸೂಲು ಮಾಡುವುದು;

(v) ಪ್ರಾಥಮಿಕ ಶಾಲೆಗೆ ಮಕ್ಕಳ ಸಾರ್ವತ್ರಿಕ ದಾಖಲಾತಿಯನ್ನು ಖಚಿತಪಡಿಸಿ ಕೊಳ್ಳುವುದು;

(vi) ಮಕ್ಕಳಿಗೆ ಸಾರ್ವತ್ರಿಕವಾಗಿ ರೋಗನಿರೋಧಕ ಚುಚ್ಚುಮದ್ದು ನೀಡುವ ಕಾರ್ಯಕ್ರಮಗಳನ್ನು ಸಾಧಿಸುವುದು;

(vii) ಜನನ ಮತ್ತು ಮರಣಗಳ ತ್ವರಿತ ನೋಂದಣಿ ಮತ್ತು ಅದನ್ನು ವರದಿ ಮಾಡುವುದನ್ನು ಖಚಿತಪಡಿಸಿಕೊಳ್ಳುವುದು;

(viii) ನೈರ್ಮಲ್ಯ ವ್ಯವಸ್ಥೆ ಮತ್ತು ಸರಿಯಾದ ಚರಂಡಿ ವ್ಯವಸ್ಥೆಯನ್ನು ಒದಗಿಸುವುದು;

(ix) ಸಾರ್ವಜನಿಕ ರಸ್ತೆಗಳ ನಿರ್ಮಾಣ, ದುರಸ್ತಿ ಮತ್ತು ನಿರ್ವಹಣೆ;

(x) ಸಾರ್ವಜನಿಕ ರಸ್ತೆ ಅಥವಾ ಸಾರ್ವಜನಿಕ ಸ್ಥಳಗಳ ಮೇಲಿನ ಒತ್ತುವರಿಗಳನ್ನು ತೆಗೆದುಹಾಕುವುದು;

1. 1997ರ ಅಧಿನಿಯಮ ಸಂಖ್ಯೆ 29ರ ಅನ್ವಯ ಉಪ–ಪ್ರಕರಣ (1)ರ ಬದಲಾಗಿ ಉಪ–ಪ್ರಕರಣ (1) ಮತ್ತು (1–ಎ) ಪ್ರತಿಯೋಜಿಸಲಾಗಿದೆ ಮತ್ತು ಇದು ದಿನಾಂಕ 20–10–1997ರಿಂದ ಜಾರಿಗೆ ಬಂದಿದೆ



**100% ಮಕ್ಕಳ ಶಾಲೆ ಹಾಜರಾತಿ ಮತ್ತು ದಾಖಲಾತಿ ಆಗುವಂತೆ ಮಾಡುವುದು ಗ್ರಾಮ ಪಂಚಾಯಿತಿಯ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಕರ್ತವ್ಯ ಮತ್ತು ಕರ್ತವ್ಯಗಳು. ಕಲಂ: 58(V) RDPR ACT**

ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 1061 ಗ್ರಾಪಂಅ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:20–02–2020.

ಸುತ್ತೋಲೆ

ವಿಷಯ: 2020–21ನೇ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಗುರುತಿಸಿ, ಹಾಜರಾಗುವಂತೆ ಮಾಡಲು ಸ್ಥಳೀಯ ಸಂಸ್ಥೆಗಳು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ

ಉಲ್ಲೇಖ:
1) ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 1061 ಗ್ರಾಪಂಅ 2019, ದಿನಾಂಕ: 11.12.2019.
2) ಸರ್ಕಾರದ ಇದೇ ಸಮ ಸಂಖ್ಯೆಯ ಪತ್ರ ದಿನಾಂಕ: 16.12.2019.
3) ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:15768/2013 ರ ವಿಚಾರಣೆ ಸಂದರ್ಭದಲ್ಲಿ ನೀಡಿದ ಆದೇಶ ದಿನಾಂಕ18.12.2019.

**********

ಭಾರತ ಸಂವಿಧಾನದ ಕಲಂ 21(ಎ) ಪ್ರಕಾರ 6 ರಿಂದ 14 ವರ್ಷದ ಪ್ರತಿ ಮಗು 8 ವರ್ಷಗಳ ಶಾಲಾ ಶಿಕ್ಷಣವನ್ನು ಪಡೆಯುವುದು ಮೂಲಭೂತ ಹಕ್ಕಾಗಿರುತ್ತದೆ. ಉಲ್ಲೇಖ (1) ರ ಸುತ್ತೋಲೆ ಮತ್ತು ಉಲ್ಲೇಖ (2) ರ ಸರ್ಕಾರದ ಪತ್ರದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ತರಲು ಸ್ಥಳೀಯ ಸರ್ಕಾರಗಳು ಕೈಗೊಳ್ಳಬೇಕಾದ ಕಾರ್ಯಕ್ರಮದ ಮಾರ್ಗಸೂಚಿಗಳ ಬಗ್ಗೆ ಸವಿವರವಾಗಿ ತಿಳಿಸಲಾಗಿದೆ. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ತರಲು The Karnataka Right of Children to Free and Compulsory Education Rules, 2012 ರನ್ವಯ ಗ್ರಾಮ ಪಂಚಾಯಿತಿಗಳು ಗ್ರಾಮ ಶಿಕ್ಷಣ ರಿಜಿಸ್ಟರ್‌ನ್ನು ನಿರ್ವಹಿಸಬೇಕಾಗಿರುತ್ತದೆ. ಈ ಬಗ್ಗೆ ಉಲ್ಲೇಖ (1) ರ ಸುತ್ತೋಲೆಯಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳು ಗ್ರಾಮ ಶಿಕ್ಷಣ ರಿಜಿಸ್ಟರ್ ನಿರ್ವಹಿಸಲು ತಿಳಿಸಲಾಗಿದೆ. The Karnataka Right of Children to Free and Compulsory Education (Amendment) Rules, 2014 ರನ್ವಯ ಮಕ್ಕಳ ಹಾಜರಾತಿಗೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಗಳು ನಿರ್ವಹಿಸಬೇಕಾದ ಜವಾಬ್ದಾರಿಗಳ ಬಗ್ಗೆ ತಿಳಿಸಲಾಗಿದೆ.

www.ksge.in

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 58 ರಲ್ಲಿ ಗ್ರಾಮ ಪಂಚಾಯಿತಿಯ ಪ್ರಕಾರ್ಯಗಳ ಬಗ್ಗೆ ವಿವರಿಸಲಾಗಿದ್ದು, ಅದರಲ್ಲಿ ಗ್ರಾಮ ಪಂಚಾಯಿತಿಯು ಪ್ರಾಥಮಿಕ ಶಾಲೆಗೆ ಮಕ್ಕಳ ಸಾರ್ವತ್ರಿಕ ದಾಖಲಾತಿಯನ್ನು ಖಚಿತಪಡಿಸಿಕೊಳ್ಳುವುದು ಪ್ರಮುಖವಾದ ಕಡ್ಡಾಯ ಕಾರ್ಯವಾಗಿರುತ್ತದೆ.

ಉಲ್ಲೇಖ (3) ರ ರಿಟ್ ಪಿಟಿಷನ್ ವಿಚಾರಣೆ ಸಂದರ್ಭದಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸಿರುತ್ತದೆ.

**"We make it clear the responsibility of carrying out a door-to-door survey shall be of the local authorities and the task cannot be delegated to the teachers in the schools. While carrying out the survey, in case of students who have permanently abandoned the school, the registration number of the students can be of a great help. This aspect shall be borne in mind by the local authorities."**

ಪ್ರಕರಣವು ಉಚ್ಚ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದ್ದು, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ತರಲು ನಿಖರವಾದ ಕ್ರಮಗಳನ್ನು ಸರ್ಕಾರದ ವತಿಯಿಂದ ಕೈಗೊಂಡು ಮಾನ್ಯ ನ್ಯಾಯಾಲಯಕ್ಕೆ ಅನುಪಾಲನಾ ವರದಿ ಸಲ್ಲಿಸಬೇಕಾಗಿರುತ್ತದೆ.

ಮೇಲ್ಕಂಡ ಆದೇಶದ ಹಿನ್ನೆಲೆಯಲ್ಲಿ, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಸೇರಿಸಲು ಕಟ್ಟುನಿಟ್ಟಿನ ಕ್ರಮಕೈಗೊಳ್ಳುವುದು ಅವಶ್ಯವಾಗಿದೆ. ಈ ಕಾರ್ಯದಲ್ಲಿ ಮಾನ್ಯ ನ್ಯಾಯಾಲಯವು ಆದೇಶಿಸಿರುವಂತೆ ಸ್ಥಳೀಯ ಗ್ರಾಮ ಪಂಚಾಯಿತಿಗಳು ಪ್ರಮುಖ ಪಾತ್ರ ವಹಿಸಬೇಕಾಗಿರುತ್ತದೆ. ಈ ದಿಶೆಯಲ್ಲಿ ಮುಂದಿನ ಒಂದು ವರ್ಷದವರೆಗೆ ಕೈಗೊಳ್ಳಬೇಕಾದ ಕಾರ್ಯ ಯೋಜನೆಯನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

- ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಸ್ಥಳೀಯ ಶಾಲೆಗಳ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಅಧ್ಯಕ್ಷರು, ಶಾಲಾ ಮುಖ್ಯೋಪಾಧ್ಯಾಯರು, ಅಂಗನವಾಡಿ ಮೇಲ್ವಿಚಾರಕರು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಹಾಗೂ ಮಹಿಳಾ ಸ್ವ–ಸಹಾಯ ಸಂಘದ ಪ್ರತಿನಿಧಿಗಳನ್ನು ಒಳಗೊಂಡಂತೆ ಸಭೆ ನಡೆಸಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಶಾಲೆಗೆ ಮರಳಿ ಸೇರಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಬೇಕು.
- ಗ್ರಾಮ ಪಂಚಾಯಿತಿಯ ಎಲ್ಲಾ ಶಾಲೆಗಳ ವ್ಯಾಪ್ತಿಯಲ್ಲಿ ಶಾಲೆಗೆ ಸೇರದ, ಸೇರಿ ಗೈರು ಹಾಜರಾಗುತ್ತಿರುವ ಮಕ್ಕಳ ಸಮೀಕ್ಷೆಯನ್ನು ನಡೆಸಿ ಗುರುತಿಸಬೇಕು.
- ಶಾಲೆಗೆ ಸೇರದ ಹಾಗೂ ಸೇರಿಯೂ ಹಾಜರಾಗದ ಮಗುವಿನ ಹಿನ್ನೆಲೆಯನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕು. ಕಾರಣಗಳು ಪ್ರಮುಖವಾಗಿ ಈ ಕೆಳಕಂಡಂತೆ ಇರಬಹುದು.
  1) ಪೋಷಕರು ಕೆಲಸದ ನಿಮಿತ್ತ ಮಗು ಸಮೇತ ಹೊರ ಗ್ರಾಮಗಳಿಗೆ ಹೋಗಿರಬಹುದು.
  2) ಮನೆ ಕೆಲಸದಲ್ಲಿ ನೆರವಾಗಲು ಮಗುವನ್ನು ಶಾಲೆಗೆ ಕಳುಹಿಸದಿರಬಹುದು.
  3) ಮಕ್ಕಳನ್ನು ಬಾಲ ಕಾರ್ಮಿಕರನ್ನಾಗಿ ದುಡಿಸುತ್ತಿರಬಹುದು.
  4) ಬಾಲ್ಯ ವಿವಾಹ ಹಾಗೂ ಇನ್ನಿತರ ಮೂಢನಂಬಿಕೆಗಳಿಂದ ಮಗುವನ್ನು ಶಾಲೆಗೆ ಕಳುಹಿಸದಿರಬಹುದು.
- ಗೈರು ಹಾಜರಿ ಹಾಗೂ ದಾಖಲಾಗದ ಮಕ್ಕಳ ಹಿನ್ನೆಲೆಯನ್ನು ತಿಳಿದು ಪೋಷಕರಿಗೆ ಶಾಲಾ ಶಿಕ್ಷಣದ ಮಹತ್ವವನ್ನು ಮನವರಿಕೆ ಮಾಡಿ ಮಗು ಶಾಲೆಗೆ ದಾಖಲಾಗುವಂತೆ, ದಾಖಲಾಗಿದ್ದಲ್ಲಿ ಹಾಜರಾಗುವಂತೆ ಮಾಡಲು ವಿಶೇಷ ಮನವೊಲಿಕೆ ಕಾರ್ಯಕ್ರಮ ಹಮ್ಮಿಕೊಳ್ಳಬೇಕು.
- ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹೀಗೆ ಗುರುತಿಸಲಾದ ಎಲ್ಲಾ ಮಕ್ಕಳ ವಿವರವನ್ನು ನಿಗದಿತ ನಮೂನೆಯಲ್ಲಿ ನಿರ್ವಹಿಸಬೇಕು ಹಾಗೂ ಗ್ರಾಮ ಶಿಕ್ಷಣ ವಹಿಯಲ್ಲಿಯೂ ನಮೂದಿಸಬೇಕು.
- ಈ ಪ್ರಕ್ರಿಯೆಯಲ್ಲಿ ದಾಖಲಾದ, ಹಾಜರಾದ ಮಕ್ಕಳು ನಿರಂತರವಾಗಿ ಶಾಲೆಗೆ ಹಾಜರಾಗುತ್ತಿರುವುದನ್ನು ಖಾತರಿಪಡಿಸಿಕೊಳ್ಳಲು ಸತತವಾಗಿ ನಿಗಾವಹಿಸಬೇಕು.
- ಈ ಪ್ರಕ್ರಿಯೆ ವರ್ಷದಾದ್ಯಂತ ಮುಂದುವರೆಯಬೇಕು. ಮಾಸಿಕವಾಗಿ ಕಾರ್ಯ ಚಟುವಟಿಕೆಗಳನ್ನು ಈ ಕೆಳಕಂಡಂತೆ ವಿಂಗಡಿಸಬಹುದು.

**ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ತರುವುದು ಸ್ಥಳೀಯ ಸಂಸ್ಥೆಗಳ ಜವಾಬ್ದಾರಿ, ಉಚ್ಚ ನ್ಯಾಯಲಯದ ತೀರ್ಪಿನಂತೆ RDPR ನಿಂದ ಆದೇಶ.**

1) ಏಪ್ರಿಲ್–2020 – ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಸ್ಥಳೀಯ ಶಾಲೆಗಳ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಅಧ್ಯಕ್ಷರು, ಶಾಲಾ ಮುಖ್ಯೋಪಾಧ್ಯಾಯರು, ಅಂಗನವಾಡಿ ಮೇಲ್ವಿಚಾರಕರು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಮತ್ತು ಮಹಿಳಾ ಸ್ವ-ಸಹಾಯ ಸಂಘದ ಪ್ರತಿನಿಧಿಗಳನ್ನು ಒಳಗೊಂಡಂತೆ ಸಭೆ ನಡೆಸಿ ಕಾರ್ಯಕ್ರಮದ ಮಹತ್ವವನ್ನು ಮನವರಿಕೆ ಮಾಡುವುದು.
2) ಮೇ–2020 – ಮೇಲ್ಕಂಡವರು ತಮ್ಮ ಶಾಲಾ ವ್ಯಾಪ್ತಿಯಲ್ಲಿ ಮಹಿಳಾ ಸ್ವ-ಸಹಾಯ ಸಂಘಗಳ ಪ್ರತಿನಿಧಿಗಳ ಮೂಲಕ ಸಮೀಕ್ಷೆ ನಡೆಸಿ ಶಾಲೆಗೆ ದಾಖಲಾಗದ, ದಾಖಲಾದರೂ ಹಾಜರಾಗದ ಮಕ್ಕಳನ್ನು ಗುರುತಿಸುವುದು. ವಿಶೇಷ ಮನವೊಲಿಕೆ ಕಾರ್ಯಕ್ರಮ ಅವಶ್ಯವಿದ್ದಲ್ಲಿ ಸಂಬಂಧಿಸಿದ ಶಾಲೆಯ ಮುಖ್ಯ ಶಿಕ್ಷಕರಿಂದ ಹಮ್ಮಿಕೊಳ್ಳುವುದು.
3) ಜೂನ್–2020 – ಮೇಲ್ಕಂಡಂತೆ ಸಮೀಕ್ಷೆಯಲ್ಲಿ ಗುರುತಿಸಲಾದ ಮಕ್ಕಳನ್ನು ಶಾಲೆಗೆ ದಾಖಲಿಸಲು ಹಾಗೂ ಹಾಜರಾಗುವಂತೆ ಮಾಡಲು ಕ್ರಮ ವಹಿಸುವುದು.
4) ಜುಲೈ–ಆಗಸ್ಟ್ 2020 – ಮೇಲ್ಕಂಡಂತೆ ದಾಖಲಿಸಲಾದ ಮಕ್ಕಳು ಹಾಜರಾಗುತ್ತಿರುವುದನ್ನು ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡವರು ಶಾಲೆಗೆ ಭೇಟಿ ನೀಡಿ ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು.
5) ಸೆಪ್ಟೆಂಬರ್– 2020 – ಗ್ರಾಮ ಪಂಚಾಯಿತಿ ವತಿಯಿಂದ ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡವರೊಡನೆ ಸಭೆ ನಡೆಸಿ ಶಾಲೆಗೆ ದಾಖಲಾದ ಮಕ್ಕಳ ಹಾಜರಾತಿ ಹಾಗೂ ಶೈಕ್ಷಣಿಕ ಪ್ರಗತಿ ಬಗ್ಗೆ ಪರಿಶೀಲನೆ.
6) ಅಕ್ಟೋಬರ್–ನವೆಂಬರ್ – 2020 – ಮೇಲ್ಕಂಡಂತೆ ದಾಖಲಿಸಲಾದ ಮಕ್ಕಳು ಹಾಜರಾಗುತ್ತಿರುವುದನ್ನು ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡವರು ಶಾಲೆಗೆ ಭೇಟಿ ನೀಡಿ ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು.
7) ಡಿಸೆಂಬರ್–2020 – ಗ್ರಾಮ ಪಂಚಾಯಿತಿ ವತಿಯಿಂದ ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡವರೊಡನೆ ಸಭೆ ನಡೆಸಿ ಶಾಲೆಗೆ ದಾಖಲಾದ ಮಕ್ಕಳ ಹಾಜರಾತಿ ಹಾಗೂ ಶೈಕ್ಷಣಿಕ ಪ್ರಗತಿ ಬಗ್ಗೆ ಪರಿಶೀಲನೆ ನಡೆಸುವುದು.
8) ಜನವರಿ–ಫೆಬ್ರವರಿ–2021 – ಮೇಲ್ಕಂಡಂತೆ ದಾಖಲಿಸಲಾದ ಮಕ್ಕಳು ಹಾಜರಾಗುತ್ತಿರುವುದನ್ನು ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡವರು ಶಾಲೆಗೆ ಭೇಟಿ ನೀಡಿ ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು.
9) ಮಾರ್ಚ್– 2021 – ಗ್ರಾಮ ಪಂಚಾಯಿತಿ ವತಿಯಿಂದ ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡವರೊಡನೆ ಸಭೆ ನಡೆಸಿ ಶಾಲೆಗೆ ದಾಖಲಾದ ಮಕ್ಕಳ ಹಾಜರಾತಿ ಹಾಗೂ ಶೈಕ್ಷಣಿಕ ಪ್ರಗತಿ ಬಗ್ಗೆ ಪರಿಶೀಲನೆ ನಡೆಸುವುದು.
10) ಏಪ್ರಿಲ್–2021 ರಲ್ಲಿ ಇಡೀ ವರ್ಷದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ದಾಖಲಾತಿ–ಹಾಜರಾತಿ ಪ್ರಕ್ರಿಯೆಯಲ್ಲಿ ಆದ ಪ್ರಗತಿ ಪರಾಮರ್ಶೆ ಮಾಡಿ ಮುಂದಿನ ವರ್ಷ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಕಾರ್ಯಯೋಜನೆ ಸಿದ್ಧಪಡಿಸುವುದು.
11) ಗ್ರಾಮ ಪಂಚಾಯಿತಿಗಳು ಈ ಪ್ರಕ್ರಿಯೆಗೆ ತಗಲುವ ಸಾಂದರ್ಭಿಕ ವೆಚ್ಚಗಳನ್ನು ಗ್ರಾಮ ಪಂಚಾಯಿತಿ ಸ್ವಂತ ಸಂಪನ್ಮೂಲದಿಂದ ಭರಿಸುವುದು.
12) ಶಿಕ್ಷಣ ಇಲಾಖೆ ವತಿಯಿಂದ ಪ್ರತಿ ಗ್ರಾಮ ಪಂಚಾಯಿತಿಗೆ ನೀಡುವ ರೂ. 1,000/– ಗಳನ್ನು ಮಹಿಳಾ ಗ್ರಾಮ ಪಂಚಾಯತಿಗಳು ಆಯ್ಕೆ ಮಾಡಿದ ಮಹಿಳಾ ಸ್ವ-ಸಹಾಯ ಗುಂಪುಗಳ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಕ್ಕೆ ಈ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಬಿಡುಗಡೆ ಮಾಡವುದು.
13) ಶಾಲೆಯಿಂದ ಹೊರಗುಳಿದ ಮಕ್ಕಳ ದಾಖಲಾತಿ–ಹಾಜರಾತಿ ಪ್ರಕ್ರಿಯೆಯನ್ನು ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೇಲುಸ್ತುವಾರಿ ಮಾಡಿ ನೆರವು, ಮಾರ್ಗದರ್ಶನ ನೀಡುವುದು.
14) ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಮೇಲುಸ್ತುವಾರಿ ಮಾಡಿ ನೆರವು, ಮಾರ್ಗದರ್ಶನ ನೀಡುವುದು. ಜಿಲ್ಲೆಯ ವ್ಯಾಪ್ತಿಯಲ್ಲಿ ಸಾಧಿಸಿದ ಪ್ರಗತಿಯನ್ನು ಒಗ್ಗೂಡಿಸಿ ಸರ್ಕಾರಕ್ಕೆ ವರದಿ ಮಾಡುವುದು.

ಮೇಲೆ ವಿವರಿಸಿರುವಂತೆ, ಕ್ರಮಕೈಗೊಂಡು, ಭಾರತ ಸಂವಿಧಾನ, The Karnataka Right of Children to Free and Compulsory Education Rules, 2012 ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಆಶಯವನ್ನು, ಹಾಗೂ ಮಾನ್ಯ ಉಚ್ಛ ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡುವ ಮೂಲಕ ಮಕ್ಕಳ ಶಿಕ್ಷಣದ ಹಕ್ಕನ್ನು ಜಾರಿಗೊಳಿಸಲು ಎಲ್ಲಾ ಗ್ರಾಮ ಪಂಚಾಯಿತಿಗಳು ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು ತಿಳಿಸಿದೆ.

(ಎಸ್.ಆರ್. ಉಮಾಶಂಕರ್, ಭಾ.ಆ.ಸೇ.)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

(ಉಮಾ ಮಹದೇವನ್, ಭಾ.ಆ.ಸೇ.)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ:

1) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು,
2) ಎಲ್ಲಾ ಉಪ ನಿರ್ದೇಶಕರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ.
3) ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು.
4) ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ.
5) ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.

ಪ್ರತಿ:

1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4) ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು–1.
5) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ.
6) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ.
7) ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿರವರು.
8) ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
9) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

**ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ತರುವುದು ಸ್ಥಳೀಯ ಸಂಸ್ಥೆಗಳ ಜವಾಬ್ದಾರಿ, ಉಚ್ಚ ನ್ಯಾಯಲಯದ ತೀರ್ಪಿನಂತೆ RDPR ನಿಂದ ಆದೇಶ.**

ಕರ್ನಾಟಕ ಸರ್ಕಾರ

ಸಂ: ಗ್ರಾಅಪ 1061 ಗ್ರಾಪಂಅ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 11.12.2019

ಸುತ್ತೋಲೆ

ವಿಷಯ: ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಮುಖ್ಯ ವಾಹಿನಿ ತರಲು ಸ್ಥಳೀಯ ಸರ್ಕಾರಗಳು ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಮಾರ್ಗಸೂಚಿಗಳ ಬಗ್ಗೆ.

ಉಲ್ಲೇಖ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಇವರ ಅ.ಸ. ಪತ್ರ ಸಂ. ಇಡಿ 05 ಮಾಹಿತಿ 2019, ದಿನಾಂಕ 10.12.2019.

ಸಂವಿಧಾನದ ಕಲಂ 23(ಎ) ಪ್ರಕಾರ 6 ರಿಂದ 14 ವರ್ಷದ ಪ್ರತಿ ಮಗು 8 ವರ್ಷಗಳ ಶಾಲಾ ಶಿಕ್ಷಣವನ್ನು ಪಡೆಯುವುದು ಮೂಲಭೂತ ಹಕ್ಕು. ಸಂವಿಧಾನದ ಈ ಆಶಯವನ್ನು ಈಡೇರಿಸುವ ನಿಟ್ಟಿನಲ್ಲಿ 8 ವರ್ಷಗಳ ಶಿಕ್ಷಣದ ಸಾರ್ವತ್ರೀಕರಣವು ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸರ್ಕಾರಗಳ ಸಾಮೂಹಿಕ ಜವಾಬ್ದಾರಿಯಾಗಿದೆ. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಿಕ್ಷಣದ ಮುಖ್ಯ ವಾಹಿನಿಗೆ ತರುವುದು ಅತಿ ದೊಡ್ಡ ಸವಾಲಾಗಿರುತ್ತದೆ. ಪೋಷಕರ ಬಡತನ, ಅನಕ್ಷರತೆ, ಶಿಕ್ಷಣದ ಬಗ್ಗೆ ಅರಿವಿನ ಕೊರತೆ, ಸಾಮಾಜಿಕ, ಆಡಳಿತಾತ್ಮಕ ಹಾಗೂ ಆರ್ಥಿಕ ಪರಿಸ್ಥಿತಿಗಳು ಶಿಕ್ಷಣ ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿ ತೊಡಕಾಗಿರುತ್ತದೆ.

ಈ ಎಲ್ಲಾ ಅಂಶಗಳನ್ನು ಮೀರಿ ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸರ್ಕಾರಗಳು ಶಿಕ್ಷಣದ ಬಗ್ಗೆ ಸಂವಿಧಾನದ ಆಶಯವನ್ನು ಈಡೇರಿಸುವ ನಿಟ್ಟಿನಲ್ಲಿ ಹಲವು ಉಪಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಇಂತಹ ಕ್ರಮಗಳಲ್ಲಿ ಒಂದು ವಿಭಿನ್ನ ಕಾರಣಗಳಿಗಾಗಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಮುಖ್ಯ ವಾಹಿನಿಗೆ ಕರೆ ತಂದು ಅವರೆಲ್ಲರಿಗೆ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ಲಭ್ಯವಾಗುವಂತೆ ನೋಡಿಕೊಳ್ಳುವುದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೊಂದಿಗೆ ಸ್ಥಳೀಯ ಸರ್ಕಾರಗಳ ಜವಾಬ್ದಾರಿಯಾಗಿದೆ.

ಶಿಕ್ಷಣ ಹಕ್ಕು ಕಾಯ್ದೆ ಕಲಂ 32ರಲ್ಲಿನ ಉಪಬಂಧದಂತೆ ಸ್ಥಳೀಯ ಸರ್ಕಾರಗಳು ಶಾಲೆಯ ಮೂಲಭೂತ ಸೌಕರ್ಯ, ಮಕ್ಕಳ ದಾಖಲಾತಿ, ಹಾಜರಾತಿ ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಶಿಕ್ಷಣ ಮುಖ್ಯ ವಾಹಿನಿಗೆ ತರುವ ಕಾರ್ಯಜವಾಬ್ದಾರಿಯನ್ನು ನಿರ್ವಹಿಸಬೇಕಾಗಿರುತ್ತದೆ. ಮುಂದುವರೆದು, ಇದೇ ಕಾಯ್ದೆಯ ನಿಯಮ 9(ಡಿ)ಯಲ್ಲಿ ಸ್ಥಳೀಯ ಸರ್ಕಾರಗಳು ಅಂದರೆ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಮುನಿಸಿಪಲ್ ಸಂಸ್ಥೆಗಳು Village Education Register ಹಾಗೂ Ward Education Register ಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಈ ಜವಾಬ್ದಾರಿಗಳನ್ನು ನಿರ್ವಹಿಸದಿರುವ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ರಿಟ್ ಅರ್ಜಿ ಸಂ. 15768/2013

2

ರಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ನೀಡಿರುವ ನಿರ್ದೇಶನದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಅವುಗಳ ಜವಾಬ್ದಾರಿಗಳನ್ನು ನಿರ್ವಹಿಸಲು ನಿರ್ದೇಶನ ನೀಡುವಂತೆ ಸೂಚಿಸಿರುತ್ತದೆ.

ಈ ಎಲ್ಲಾ ಪ್ರಮುಖ ಅಂಶಗಳನ್ನಾಧರಿಸಿ ದಿನಾಂಕ 07.11.2019 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಗಿದ್ದು, ಗ್ರಾಮೀಣ ಪ್ರದೇಶದಲ್ಲಿ ಕಾರ್ಮಿಕರೊಡನೆ ವಲಸೆ ಬಂದ ಮಕ್ಕಳ ಗಣತಿಯನ್ನು ನಡೆಸಿ ಅವರನ್ನು ಶಾಲೆಗೆ ದಾಖಲಾಗುವಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಸಹ ಪಂಚಾಯತ್ ರಾಜ್ ಸಂಸ್ಥೆಗಳಿಗೆ ವಹಿಸಲಾಗಿದೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿಯ ಅಧಿಕಾರಿಗಳು ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳೊಡನೆ ಹಾಗೂ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳೊಡನೆ ಚರ್ಚಿಸಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕ್ರಿಯಾತ್ಮಕವಾಗಿ ಕಾರ್ಯಕ್ರಮಗಳನ್ನು ರೂಪಿಸುವಂತೆ ಮತ್ತು ಅನುಷ್ಠಾನಗೊಳಿಸುವಂತೆ ಈ ಮೂಲಕ ಸೂಚಿಸಲಾಗಿದೆ.

(ಎಸ್.ಎ.ಅತ್ರಫುಲ್ [illegible])
ನಿರ್ದೇಶಕರು (ಪಂಚಾಯತ್ ರಾಜ್–1) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:
1. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
3. ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.
4. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ/ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
5. ಶಾರಕ/ಹೆಪ್ರ.

ಪ್ರತಿ:
1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ಇವರ ಮಾಹಿತಿಗಾಗಿ.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಇವರ ಆಪ್ತ ಕಾರ್ಯದರ್ಶಿ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ, ಗ್ರಾ.ಅ&ಪಂ.ರಾಜ್ ಇಲಾಖೆ.

**ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ತರುವುದು ಸ್ಥಳೀಯ ಸಂಸ್ಥೆಗಳ (ಗ್ರಾಮ ಪಂಚಾಯಿತಿ) ಜವಾಬ್ದಾರಿ, RDPR ನಿಂದ ಆದೇಶ.**

ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿಆಯುಕ್ತಾಲಯ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

2ನೇ ಮಹಡಿ, 3ನೇ ಹಂತ, ಕೊಠಡಿ ಸಂಖ್ಯೆ: 219, ಬಹುಮಹಡಿಗಳ ಕಟ್ಟಡ, ಬೆಂಗಳೂರು- 560 001.

ದೂರವಾಣಿ ಸಂಖ್ಯೆ: 080-22372738 ಈ-ಮೇಲ್ : nrega@karnataka.gov.in

No: RDC-EGS/149/2021(E-540905) ದಿನಾಂಕ:15-09-2021

ರವರಿಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

ಮಾನ್ಯರೇ,

ವಿಷಯ: ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ರಾಜ್ಯದ ಗ್ರಾಮೀಣ ಪ್ರದೇಶದ ಎಲ್ಲಾ ಅಂಗನವಾಡಿಗಳು, ಸರ್ಕಾರಿ ಶಾಲೆಗಳು ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಶೌಚಾಲಯಗಳನ್ನು ನಿರ್ಮಿಸುವ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿರುವ ಎಲ್ಲಾ ಅಂಗನವಾಡಿಗಳು, ಸರ್ಕಾರಿ ಶಾಲೆಗಳು ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಶೌಚಾಲಯ ನಿರ್ಮಿಸಲು ಅವಕಾಶ ಇರುತ್ತದೆ. ಈಗಾಗಲೇ ಶೌಚಾಲಯ ನಿರ್ಮಾಣದ ಮಾದರಿ ಅಂದಾಜು ಪಟ್ಟಿಗಳನ್ನು ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಒದಗಿಸಲಾಗಿದೆ.

ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿ ಶೌಚಾಲಯ ಇಲ್ಲದೆ ಇರುವ ಅಂಗನವಾಡಿಗಳು, ಸರ್ಕಾರಿ ಶಾಲೆಗಳು ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಗುರುತಿಸಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಶೌಚಾಲಯಗಳನ್ನು ನಿರ್ಮಿಸಲು ಅಗತ್ಯ ಕ್ರಮವಹಿಸುವುದು. ಶೌಚಾಲಯ ನಿರ್ಮಾಣ ಕಾರ್ಯವನ್ನು ತಕ್ಷಣವೇ ಪ್ರಾರಂಭಿಸಿ 2022ರ ಜನವರಿ 26ರೊಳಗೆ ಪೂರ್ಣಗೊಳಿಸಿ, **ತಮ್ಮ ಜಿಲ್ಲೆಯನ್ನು "ಸಂಪೂರ್ಣ ಅಂಗನವಾಡಿ, ಸರ್ಕಾರಿ ಶಾಲೆ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಶೌಚಾಲಯ ಹೊಂದಿರುವ ಜಿಲ್ಲೆ" ಎಂದು ಘೋಷಿಸಲು ಕ್ರಮವಹಿಸುವಂತೆ ತಿಳಿಸಿದೆ. ಈ ವಿಷಯದ ಕುರಿತು ವಾರ್ಷಿಕ ಕಾರ್ಯನಿರ್ವಹಣಾ ವರದಿಯಲ್ಲಿ ಪರಿಶೀಲಿಸಲಾಗುವುದು.**

ತಮ್ಮ ವಿಶ್ವಾಸಿ,

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು:
1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಲ್ಲೇಶ್ವರಂ ಬೆಂಗಳೂರು.
3. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
4. ಮುಖ್ಯ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
5. ಜಂಟಿ ನಿರ್ದೇಶಕರು(ಆಡಳಿತ/ತಾಂತ್ರಿಕ/ತೋಟಗಾರಿಕೆ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
6. ಸಹಾಯಕ ನಿರ್ದೇಶಕರುಗಳು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
7. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ (ಜಿಲ್ಲಾ ಪಂಚಾಯತ್ ಮುಖಾಂತರ)
8. ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ (ಜಿಲ್ಲಾ ಪಂಚಾಯತ್ ಮುಖಾಂತರ)

ಕರ್ನಾಟಕ ಸರ್ಕಾರ

ಸಂಖ್ಯೆ: ಮಮಇ 293 ಐಸಿಡಿ 2018

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 16.11.2018

**ಸುತ್ತೋಲೆ**

ವಿಷಯ: ಅಂಗನವಾಡಿ ಕೇಂದ್ರಗಳಿಗೆ ಮೂಲಭೂತ ಸೌಕರ್ಯವನ್ನು ಒದಗಿಸುವ ಕುರಿತು.

ಉಲ್ಲೇಖ: 16.10.2018ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆ.

***

ರಾಜ್ಯದಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು 1975 ರಿಂದ ಜಾರಿಗೊಳಿಸಲಾಗುತ್ತಿದೆ. ಪ್ರಸ್ತುತ 65911 ಅಂಗನವಾಡಿ ಕೇಂದ್ರಗಳ ಮೂಲಕ ಈ ಯೋಜನೆಯನ್ನು 204 ಶಿಶುಅಭಿವೃದ್ಧಿ ಯೋಜನೆಗಳಡಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಅಂಗನವಾಡಿ ಕೇಂದ್ರಗಳಲ್ಲಿ ಪೂರಕ ಪೌಷ್ಟಿಕ ಆಹಾರ, ಚುಚ್ಚುಮದ್ದು, ಆರೋಗ್ಯ ತಪಾಸಣೆ, ಮಾಹಿತಿ ಸೇವೆ, ಶಾಲಾಪೂರ್ವ ಶಿಕ್ಷಣ, ಪೌಷ್ಟಿಕತೆ ಮತ್ತು ಆರೋಗ್ಯ ಶಿಕ್ಷಣ ಸೇವೆಗಳನ್ನು 6 ತಿಂಗಳಿನಿಂದ 6 ವರ್ಷದ ಮಕ್ಕಳಿಗೆ, ಗರ್ಭಿಣಿಯರು, ಬಾಣಂತಿಯರಿಗೆ ಒದಗಿಸಲಾಗುತ್ತಿದೆ.

ಅಂಗನವಾಡಿ ಕೇಂದ್ರಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಉತ್ತಮ ಪಡಿಸಲು ದಿನಾಂಕ:16.10.2018 ರಂದು ನಡೆದ ಸಭೆಯಲ್ಲಿ ಮುಖ್ಯಕಾರ್ಯದರ್ಶಿಗಳು ಸೂಚಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಅಂಗನವಾಡಿ ಕೇಂದ್ರಗಳಿಗೆ ಈ ಕೆಳಗಿನ ಸೌಲಭ್ಯಗಳನ್ನು ಒದಗಿಸಲು ಕ್ರಮಕೈಗೊಳ್ಳುವುದು.

1. ಅಂಗನವಾಡಿ ಕೇಂದ್ರ ನಿರ್ಮಿಸಲು ಸೂಕ್ತ ಸ್ಥಳಾವಕಾಶ ಕಲ್ಪಿಸುವುದು
2. ಶೌಚಾಲಯ ನಿರ್ಮಾಣ
3. ಅಂಗನವಾಡಿ ಕೇಂದ್ರಗಳ ದುರಸ್ಥಿ
4. ಅಂಗನವಾಡಿಗಳಿಗೆ ಸುಣ್ಣ/ಬಣ್ಣ ಬಳಿಯುವುದು.
5. ಕುಡಿಯುವ ನೀರಿನ ಸೌಲಭ್ಯ
6. ವಿದ್ಯುತ್ ಮತ್ತು ಫ್ಯಾನ್ ಸೌಲಭ್ಯ
7. ಆಟಿಕೆ ಸಾಮಾಗ್ರಿಗಳು

ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳಿಗೆ ಮೇಲೆ ತಿಳಿಸಿದ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮಕೈಗೊಳ್ಳುವುದು. ಯೋಜನೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಸಂಬಂಧ ಪಟ್ಟ ಇಲಾಖೆಗಳ ಸಮನ್ವಯದೊಂದಿಗೆ ಅಂಗನವಾಡಿ ಕೇಂದ್ರಗಳಲ್ಲಿ ಎಲ್ಲಾ ಮೂಲ ಸೌಲಭ್ಯಗಳನ್ನು ಒದಗಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.

(ಉಮಾ ಮಹದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ

(ಎಲ್. ಕೆ. ಅತೀಕ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್
ರಾಜ್ ಇಲಾಖೆ

ಪ್ರತಿಯನ್ನು :
1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಹಣಾಧಿಕಾರಿಗಳು
3. ಎಲ್ಲಾ ಉಪ ನಿರ್ದೇಶಕರು ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.
5. [illegible]

**ಗ್ರಾಮ ಪಂಚಾಯಿತಿನಿಂದ ಶಾಲೆಗಳಲ್ಲಿ/ ಅಂಗನವಾಡಿಗಳಲ್ಲಿ ಶೌಚಾಲಯ ನಿರ್ಮಿಸಲು ನರೇಗಾ ಯೋಜನೆ ಬಳಸಲು ಆದೇಶ ಹಾಗೂ ಅಂಗನವಾಡಿಗಳಲ್ಲಿ ಮೂಲಭೂತ ಸೌಲಭ್ಯ ಒದಗಿಸಲು ಆದೇಶ**

ಕರ್ನಾಟಕ ಸರ್ಕಾರ

ಸಂ: ಗ್ರಾಅಪ 10 ಸ್ತ್ರೀಮರ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:22.01.2018.

**ಸುತ್ತೋಲೆ**

ವಿಷಯ: ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಆಧರಿಸಿ ಮಾನ್ಯ ಉಚ್ಚ ನ್ಯಾಯಾಲಯವು ರಿಟ್‌ಅರ್ಜಿ (ಸಿವಿಲ್) ಸಂಖ್ಯೆ: 382/2013 ರಲ್ಲಿ ನೀಡಿರುವ ತೀರ್ಪನ್ನು ಅನುಸರಿಸಿ ಕ್ರಮ ವಹಿಸುವ ಬಗ್ಗೆ – ಪೋಕ್ಸೋ ಕಾಯ್ದೆಯ ಅಂಶಗಳನ್ನು ಜಾರಿ ಮಾಡಲು ಎಲ್ಲಾ ಬಾಲ್ಯ ವಿವಾಹ ನಿಷೇದಾಧಿಕಾರಿಗಳಿಗೆ ತಿಳಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಅಧಿಸೂಚನೆ ಸಂಖ್ಯೆ: WCD 377 SWW 2004, ದಿ:02.05.2008

2. ಸರ್ಕಾರದ ಅಧಿಸೂಚನೆ ಸಂಖ್ಯೆ: WCD 171 SWW 2011, ದಿ:16.11.2011

****

ಮಾನ್ಯ ಭಾರತ ಸರ್ವೋಚ್ಚ ನ್ಯಾಯಾಲಯವು ಅಪ್ರಾಪ್ತ ಪತ್ನಿಯ ಜೊತೆಗಿನ ಲೈಂಗಿಕ ಸಂಪರ್ಕವು ಕೂಡ ಅತ್ಯಾಚಾರವಾಗುತ್ತದೆ ಎಂದು ತೀರ್ಪು ನೀಡಿದ ಹಿನ್ನಲೆಯಲ್ಲಿ ರಿಟ್ ಅರ್ಜಿ (ಸಿವಿಲ್) ಸಂಖ್ಯೆ: 382/2013 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು "declared that the Protection of Children from Sexual Offences Act, 2012 being a sepecial law prevails over the Indian Penal Code, 1860" ಎಂದು ಆದೇಶಿಸಿದ ಹಿನ್ನಲೆಯಲ್ಲಿ ಐ.ಪಿ.ಸಿ. ಕಲಂ 325 2ನೇ ಅಪವಾದವನ್ನು (exception) ತಿದ್ದುಪಡಿ ಮಾಡಲಾಗಿರುತ್ತದೆ.

ಉಲ್ಲೇಖ (2)ರ ಸರ್ಕಾರದ ಅಧಿಸೂಚನೆಯಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ನೇಮಿಸಿರುವ ಬಾಲ್ಯವಿವಾಹದ ನಿಷೇದಾಧಿಕಾರಿಗಳು ಬಾಲ್ಯ ವಿವಾಹ ನಡೆದಾಗ ಪೋಕ್ಸೋ ಕಾಯ್ದೆಯ 2012ರ ಸೂಕ್ತ ಪರಿಚ್ಛೇದಗಳನ್ನು ಬಳಸಿ ಪ್ರಥಮ ವರ್ತಮಾನ ವರದಿ ದಾಖಲಿಸಿ ಕ್ರಮ ಕೈಗೊಳ್ಳಲು ಈ ಮೂಲಕ ಸೂಚಿಸಿದೆ. ಈ ಸಂಬಂಧ ಭಾರತ ಸರ್ಕಾರದ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯದ ಕಾರ್ಯದರ್ಶಿಯವರ ದಿನಾಂಕ 10.11.2017ರ ಪತ್ರವನ್ನೂ ಸಹ ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಿದೆ.

(ಡಾ॥ ಎನ್.ನಾಗಾಂಬಿಕಾ ದೇವಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:
1. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
2. ನಿರ್ದೇಶಕರು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
3. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು,

-2-

4. ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು – ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ

ಪ್ರತಿಯನ್ನು:
1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ
2. ಮಾನ್ಯ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
3. ಇಲಾಖೆಯ ಎಲ್ಲಾ ಹಿರಿಯ ಅಧಿಕಾರಿಗಳು
4. ಇಲಾಖೆಯ ಜಾಲತಾಣ
5. ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿ.

**ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ನೇಮಿಸಲಾದ ಬಾಲ್ಯವಿವಾಹ ನಿಷೇದಾಧಿಕಾರಿಗಳು ಕಡ್ಡಾಯವಾಗಿ ಬಾಲ್ಯ ವಿವಾಹ ಪ್ರಕರಣದಲ್ಲಿ/ದೊಂದಿಗೆ ಲೈಂಗಿಕ (POCSO) ಹಲ್ಲೆ ಪ್ರಕರಣ ಸೇರಿಸಿ FIR ಮಾಡಲು RDPR ನಿಂದ ಆದೇಶ. ಮುಖ್ಯವಾಗಿ ಪಿಡಿಒ ಗಳು (PDOs)**

**"ಮಕ್ಕಳ ಸುರಕ್ಷಿತ ಹಾಗೂ ಮಕ್ಕಳ ಸ್ನೇಹಿ ಪಂಚಾಯತಿ"ಯನ್ನಾಗಿಸುವ ಹಿನ್ನಲೆಯಲ್ಲಿ ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿಯಲ್ಲಿ ಅನುಷ್ಠಾನಗೊಳಿಸಲೇಬೇಕಾದ 30 ಅಂಶದ ಕಾರ್ಯಕ್ರಮಗಳ ಪಟ್ಟಿ.**

1. ಗ್ರಾಮ ಪಂಚಾಯತ್ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ "ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿ" ರಚನೆ. **Under RDPR act 61a**
2. ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿ ಅಡಿಯಲ್ಲಿ "ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಹಾಗೂ ಮಾರಾಟ ತಡೆ ಸಮಿತಿ"ಯ ಅನುಷ್ಠಾನ.
3. ಪಂಚಾಯತ್ ವ್ಯಾಪ್ತಿಯ ಎಲ್ಲಾ ಅಂಗನವಾಡಿಗಳಲ್ಲಿ 9 ರಿಂದ 18 ವರ್ಷದೊಳಗಿನ ಎಲ್ಲಾ ಬಾಲಕಿಯರನ್ನೊಳಗೊಂಡ ಕ್ರಿಯಾತ್ಮಕ ಬಾಲಕ/ಕಿಶೋರ ಸಂಘದ ರಚನೆ ಮತ್ತು ಅನುಷ್ಠಾನ.
4. ಎಲ್ಲಾ ಶಾಲೆಗಳಲ್ಲಿ ಮಕ್ಕಳ ಸುರಕ್ಷತಾ ನೀತಿ ಅನುಷ್ಠಾನ, "ಸುರಕ್ಷತಾ ಸಮಿತಿ" ಹಾಗೂ 'ಮಕ್ಕಳ ಹಕ್ಕುಗಳ ಕ್ಲಬ್" ರಚನೆಗೆ ಸೂಕ್ತ ಕ್ರಮ ಮತ್ತು ಸಹಕಾರ.

5. ಗ್ರಾಮ ಪಂಚಾಯತ್ ಮಟ್ಟದಲ್ಲಿನ ಎಲ್ಲಾ 5 ವರ್ಷದೊಳಗಿನ ಮಕ್ಕಳಿಗೆ 100% ಜನನ ಪ್ರಮಾಣ ಪತ್ರ ಲಭಿಸುವಂತೆ ಮಾಡುವುದು.
6. ಎಲ್ಲಾ ಮಕ್ಕಳಿಗೂ 100% ಚುಚ್ಚುಮದ್ದು /ಲಸಿಕೆ ಲಭಿಸುವಂತೆ ಮಾಡಿ, ಅನುಸರಣೆಯೊಂದಿಗೆ ಖಾತ್ರಿಪಡಿಸಿ ನಿರಂತರ ನಿಗಾವಹಿಸುವುದು.
7. 3 ರಿಂದ 6 ವಷದೊಳಗಿನ ಎಲ್ಲಾ ಮಕ್ಕಳು 100% ಶಾಲೆಗೆ ದಾಖಲಾತಿ, 100% ಹಾಜರಾತಿ, ಅನುಸರಣೆ ಮತ್ತು ನಿರಂತರ ನಿಗಾವಹಿಸುವುದು.
8. 6 ರಿಂದ 18 ವರ್ಷದೊಳಗಿನ ಮಕ್ಕಳು 100% ಶಾಲೆಗೆ ದಾಖಲಾತಿ,
9. 100% ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಮತ್ತು ಮಕ್ಕಳು ಶಾಲೆ ಬಿಡುವದನ್ನು ಸಂಪೂರ್ಣ ತಡೆಯುವುದು.
10. ಸಂಪೂರ್ಣ ಬಾಲ್ಯವಿವಾಹ ತಡೆಯೊಂದಿಗೆ ಬಾಲಕಾರ್ಮಿಕ ಮತ್ತು ಬಾಲ್ಯವಿವಾಹ ಮುಕ್ತ ಪಂಚಾಯತ್‌ಗೆ ಕ್ರಮ.
11. ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ತಡೆ.



12. ಮಕ್ಕಳ ಅಪೌಷ್ಠಿಕತೆ ನಿವಾರಣೆ.
13. ಗುಳೆ/ವಲಸೆ ತಡೆಗೆ ಕ್ರಮ.
14. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ.
15. ವಿಶೇಷ ಸಾಮರ್ಥ್ಯವುಳ್ಳ ಮಕ್ಕಳ ರಕ್ಷಣೆ.
16. 100% ಮದುವೆ ನೊಂದಾಣೆಗೆ ಕ್ರಮ.
17. ಶಾಲೆಗಳ ಮೂಲಭೂತ ಸೌಕರ್ಯಕ್ಕೆ ಕ್ರಮ.
18. ಮಾರಕ ರೋಗಗಳ ತಡೆ. (ಹೆ.ಎಚ್.ವಿ/ಏಡ್ಸ ಮುಂತಾದವುಗಳು)
19. ಭಿಕ್ಷಾಟನೆ/ಬೀದಿ–ಚಿಂದಿ ಆಯುವ ಮಕ್ಕಳ ರಕ್ಷಣೆ –ಶಿಕ್ಷಣ.
20. ಎಲ್ಲಾ ಶಾಲೆಗಳಲ್ಲಿನ ಎಸ್.ಡಿ.ಎಮ್.ಸಿಯ ಬಲವರ್ಧನೆ.
21. ವಿಕೃತ ಮೂಡನಂಬಿಕೆಗಳಿಗೆ ಹಾಗೂ ಅವಘಡಗಳಿಗೆ 18 ವರ್ಷದೊಳಗಿನ ಮಕ್ಕಳು ಬಲಿಯಾಗದಂತೆ ರಕ್ಷಣೆ ಮತ್ತು ಕ್ರಮ.

22. ಗ್ರಾಮ ಪಂಚಾಯತ್ ವ್ಯಾಪ್ತಿಯ 18 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣಕ್ಕಾಗಿ ಸಮುದಾಯದ, ಇಲಾಖೆಗಳ, ನಾಗರಿಕ ಸಂಘ ಸಂಸ್ಥೆಗಳ ಪಾಲುದಾರಿಕೆ, ಸಹಭಾಗಿತ್ವ, ಸಮನ್ವಯತೆ ಮತ್ತು ಹೊಣೆಗಾರಿಕೆಗೆ ಕ್ರಮ.
23. ಪಂಚಾಯತ್ ವ್ಯಾಪ್ತಿಯಲ್ಲಿ ನಡೆಯುವ ಸಾಮೂಹಿಕ ವಿವಾಹಗಳಲ್ಲಿ ಬಾಲ್ಯವಿವಾಹಗಳು ಜರುಗದಂತೆ ನಿಗಾವಹಿಸುವುದು.
24. ಪಂಚಾಯತ್ ವ್ಯಾಪ್ತಿಯಲ್ಲಿ ನಿಜವಾಗಿ ಅಗತ್ಯವಿರುವ ಮಕ್ಕಳಿಗೆ ಹಾಗೂ ಬಾಲ್ಯವಿವಾಹ ಮತ್ತು ಬಾಲಕಾರ್ಮಿಕತೆಯಿಂದ ಮುಕ್ತಿ ಪಡೆದ ಮಕ್ಕಳಿಗೆ ಹಾಸ್ಟೇಲ್‌ಗಳಲ್ಲಿ ಶಿಕ್ಷಣ ಮತ್ತು ವಸತಿ ಸೌಲಭ್ಯ ಕಲ್ಪಿಸುವುದು.
25. ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳ ಸರಕಾರಿ ಸೌಲಭ್ಯಗಳನ್ನು ನೀಡುವಾಗ ಬಾಲಕಾರ್ಮಿಕತೆ ಮತ್ತು ಬಾಲ್ಯವಿವಾಹದಿಂದ ಮುಕ್ತಿ ಪಡೆದ ಮಕ್ಕಳ ಕುಟುಂಬಗಳಿಗೆ ಆದ್ಯತೆಯ ಅನುಸಾರ, ಆಯ್ಕೆಮಾಡಿ ನೀಡುವುದು.
26. ಪಂಚಾಯತ್ ವ್ಯಾಪ್ತಿಯಲ್ಲಿ ಸರಕಾರಿ ಸೌಲಭ್ಯಗಳನ್ನು ನೀಡುವಾಗ ಫಲಾನುಭವಿಗಳಿಂದ ಅವರ ಕುಟುಂಬಗಳಲ್ಲಿ ಬಾಲಕಾರ್ಮಿಕತೆ ಮತ್ತು ಬಾಲ್ಯವಿವಾಹಕ್ಕೆ ಅವಕಾಶವಿಲ್ಲದಂತೆ ಕರಾರು ಪತ್ರ ಬರೆಯಿಸಿಕೊಳ್ಳುವುದು.
27. ಮಕ್ಕಳನ್ನು ದುಡಿಸುವ ಮಾಲೀಕರುಗಳಿಗೆ ಮತ್ತು ಬಾಲ್ಯವಿವಾಹವನ್ನು ನಡೆಸುವವರಿಗೆ ಹಾಗೂ ಸಹಕರಿಸುವವರಿಗೂ ಕಠಿಣ ಕ್ರಮಕ್ಕೆ ಮುಂದಾಗುವುದು.

28.ಮಕ್ಕಳ ಹಕ್ಕು, ಮಕ್ಕಳ ಸಂರಕ್ಷಣೆಯ ಅನುಷ್ಠಾನಕ್ಕಾಗಿ ಹಾಗೂ ಬಾಲಕಾರ್ಮಿಕತೆ ಮತ್ತು ಬಾಲ್ಯವಿವಾಹದ ನಿರ್ಮೂಲನೆಗಾಗಿ ಪಂಚಾಯತ್, ಸಮುದಾಯ ಮತ್ತು ಶಾಲಾ ಮಟ್ಟದಲ್ಲಿ ವಿವಿಧ ಜಾಗೃತಿ ಕಾರ್ಯಕ್ರಮಗಳಿಗೆ ಕ್ರಮವಹಿಸುವದು.

29.ಪಂಚಾಯತ್ ವ್ಯಾಪ್ತಿಯ ಎಲ್ಲಾ ಧಾರ್ಮಿಕ ಸ್ಥಳಗಳು, ಮದುವೆ, ಸಭಾಂಗಣಗಳಲ್ಲಿ ಬಾಲ್ಯವಿವಾಹ ನಿಷೇಧ ಕುರಿತು ಜಾಗೃತಿ ಫಲಕ ಹಾಕುವದು ಹಾಗೂ ಅನುಸರಣೆ.

30. ಪಂಚಾಯತ್ ಮಟ್ಟದಲ್ಲಿ ಯಾವುದೇ ರೈತರು ಕಾರ್ಮಿಕರು ಮಕ್ಕಳನ್ನು ಹೊಲ, ಗದ್ದೆ, ಜೀತ, ಸಂಬಳಕ್ಕೆ 18 ವರ್ಷದೊಳಗಿನ ಮಕ್ಕಳನ್ನು ದುಡಿಸದಂತೆ ಹಾಗೂ ದನ, ಕುರಿ, ಎಮ್ಮೆ ಮೇಯಿಸಲು ಮಕ್ಕಳನ್ನು ಬಳಸದಂತೆ ನಿರಂತರ ನಿಗಾವಹಿಸಿ 18 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ನಿರಂತರ ಶಿಕ್ಷಣ ಪಡೆಯಲು ಕ್ರಮ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ, ಮಾನ್ಯ ಪ್ರಧಾನ ಕಾರ್ಯದರ್ಶಿಗಳವರ ಸುತ್ತೋಲೆ ಸಂಖ್ಯೆ: ಗ್ರಾಪಂರಾ–254 ಜಿಪಸ–2020 ದಿನಾಂಕ: 18–09–2020 ರಂತೆ,

ಗ್ರಾಮ ಪಂಚಾಯತ್ ಮಟ್ಟದ ಗ್ರಾಮೀಣ ಅಂಗವಿಕಲರ ಪುನರ್ವಸತಿ ಕಾರ್ಯಕ್ರಮ ಅನುಷ್ಠಾನದ ಪರಿಶೀಲನಾ ಸಮಿತಿ

| | | |
|---|---|---|
| 1 | ಗ್ರಾಮ ಪಂಚಾಯತಿ ಅಧ್ಯಕ್ಷರು (ಚುನಾಯಿತ ಪ್ರತಿ ನಿಧಿ ಅವಧಿ ಮುಗಿದಿರುವಲ್ಲಿ ಸರ್ಕಾರಿ ಆದೇಶದಂತೆ ಜವಾಬ್ದಾರಿ ನಿರ್ವಹಿಸುವವರು) | ಅಧ್ಯಕ್ಷರು |
| 2 | ಗ್ರಾಮ ಪಂಚಾಯತಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷರು | ಸದಸ್ಯರು |
| 3 | ಗ್ರಾಮ ಲೆಕ್ಕಾಧಿಕಾರಿ/ಗಳು, | ಸದಸ್ಯರು |
| 4 | ಶಾಲಾ ಮುಖ್ಯೋಪಾಧ್ಯಯರುಗಳು | ಸದಸ್ಯರು |
| 5 | ಪ್ರತಿ ಶಾಲೆಯಿಂದ ಸಮನ್ವಯ ಶಿಕ್ಷಣ/BIERT ಯವರಿಂದ ವಿಶೇಷಚೇತನರ ಸಮನ್ವಯ ಶಿಕ್ಷಣದ ಬಗ್ಗೆ ತರಬೇತಿ ಹೊಂದಿರುವ ಒಬ್ಬ ಶಿಕ್ಷಕರು | ಸದಸ್ಯರು |
| 6 | ಆರೋಗ್ಯ ಕಾರ್ಯಕರ್ತೆಯರು (ಏಎನ್‌ಎಮ್) | ಸದಸ್ಯರು |
| 7 | ಆಶಾ ಕಾರ್ಯಕರ್ತೆಯರು | ಸದಸ್ಯರು |
| 8 | ಅಂಗನವಾಡಿ ಕಾರ್ಯಕರ್ತೆಯರು | ಸದಸ್ಯರು |
| 9 | ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು (ವಿಶೇಷಚೇತನರ ಅಭಿವೃದ್ಧಿ ಕಾರ್ಯಗಳಲ್ಲಿ ಕಾರ್ಯನಿರ್ವಹಿಸುವ) | ಸದಸ್ಯರು |
| 10 | ಸ್ವ ಸಹಾಯ ಸಂಘದ ಮತ್ತು ಡಿಪಿಎಲ್‌ಎಫ್ ಪ್ರತಿನಿಧಿ | ಸದಸ್ಯರು |
| 11 | ಒಬ್ಬರು ಹಿರಿಯ ನಾಗರಿಕರು (ಗ್ರಾಮ ಪಂಚಾಯತಿಯಿಂದ ನಾಮನಿರ್ದೇಶನ ಮಾಡುವುದು) | ಸದಸ್ಯರು |
| 12 | ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು | ಸದಸ್ಯರು |
| 13 | ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು | ಸದಸ್ಯ ಕಾರ್ಯದರ್ಶಿ |

ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 1061 ಗ್ರಾಪಂಅ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:10-09-2020.

ಸುತ್ತೋಲೆ

ವಿಷಯ: ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮ ಪಂಚಾಯತಿ ಶಿಕ್ಷಣ ಪಡೆ ರಚನೆ ಬಗ್ಗೆ.

ಉಲ್ಲೇಖ: 1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಸುತ್ತೋಲೆ ಸಂಖ್ಯೆ: ಸಶಿಕಾ/ವಿದ್ಯಾಗಮ.ಆ/13497/2020-21, ದಿನಾಂಕ:04-08-2020.
2. ಶಿಕ್ಷಣ ಇಲಾಖೆಯ ಅಧಿಸೂಚನೆ ಸಂಖ್ಯೆ:ಇಡಿ 27 ಮಾಹಿತಿ 2012, ದಿನಾಂಕ:16-09-2013

**********

ಭಾರತ ಸಂವಿಧಾನದ ಕಲಂ 21(ಎ) ಪ್ರಕಾರ 6 ರಿಂದ 14 ವರ್ಷದ ಪ್ರತಿ ಮಗು 8 ವರ್ಷಗಳ ಶಾಲಾ ಶಿಕ್ಷಣವನ್ನು ಪಡೆಯುವುದು ಮೂಲಭೂತ ಹಕ್ಕಾಗಿರುತ್ತದೆ. **ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 58 ರಲ್ಲಿ ಗ್ರಾಮ ಪಂಚಾಯಿತಿಯ ಪ್ರಕಾರ್ಯಗಳ ಬಗ್ಗೆ ವಿವರಿಸಲಾಗಿದ್ದು, ಅದರಲ್ಲಿ ಗ್ರಾಮ ಪಂಚಾಯಿತಿಯು ಪ್ರಾಥಮಿಕ ಶಾಲೆಗೆ ಮಕ್ಕಳ ಸಾರ್ವತ್ರಿಕ ದಾಖಲಾತಿಯನ್ನು ಖಚಿತಪಡಿಸಿಕೊಳ್ಳುವುದು ಪ್ರಮುಖವಾದ ಕಡ್ಡಾಯ ಕಾರ್ಯವಾಗಿರುತ್ತದೆ.**

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ತರಲು The Karnataka Right of Children to Free and Compulsory Education Rules, 2012 ರನ್ವಯ ಗ್ರಾಮ ಪಂಚಾಯಿತಿಗಳು ಗ್ರಾಮ ಶಿಕ್ಷಣ ರಿಜಿಸ್ಟರ್‌ನ್ನು ನಿರ್ವಹಿಸಬೇಕಾಗಿರುತ್ತದೆ. The Karnataka Right of Children to Free and Compulsory Education (Amendment) Rules, 2014 ರನ್ವಯ ಮಕ್ಕಳ ಹಾಜರಾತಿಗೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಗಳು ನಿರ್ವಹಿಸಬೇಕಾದ ಜವಾಬ್ದಾರಿಗಳ ಬಗ್ಗೆ ತಿಳಿಸಲಾಗಿದೆ.

ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 15768/2013 ರ ಆದೇಶದಂತೆ ಗ್ರಾಮ ಪಂಚಾಯಿತಿಯು ಶಾಲೆಯಿಂದ ಹೊರಗುಳಿದ ಮಕ್ಕಳ ಸಮೀಕ್ಷೆಯನ್ನು ನಡೆಸಬೇಕಾಗಿರುತ್ತದೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶಾಲೆಯಿಂದ ಹೊರಗುಳಿದ ಮಕ್ಕಳ ಸಮೀಕ್ಷೆ ಹಾಗೂ ಕೈಗೊಂಡಿರುವ ಕ್ರಮಗಳ ಬಗ್ಗೆ ಪರಿಶೀಲನೆ ಮಾಡಲು ಗ್ರಾಮ ಪಂಚಾಯತಿ ಮಟ್ಟದಲ್ಲಿ ಈ ಕೆಳಕಂಡಂತೆ ಗ್ರಾಮ ಶಿಕ್ಷಣ ಪಡೆ ರಚನೆ ಮಾಡಿ ಆದೇಶಿಸಿದೆ.

| | |
|---|---|
| 1) ಅಧ್ಯಕ್ಷರು/ ಆಡಳಿತಾಧಿಕಾರಿ, ಗ್ರಾಮ ಪಂಚಾಯತಿ | ಅಧ್ಯಕ್ಷರು |
| 2) ಗ್ರಾಮ ಪಂಚಾಯತಿ ವ್ಯಾಪ್ತಿಯ ಸರ್ಕಾರಿ ಕಿರಿಯ, ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಅಧ್ಯಕ್ಷರು. | ಸದಸ್ಯರು |
| 3) ಗ್ರಾಮ ಪಂಚಾಯತಿ ವ್ಯಾಪ್ತಿಯ ಸರ್ಕಾರಿ ಕಿರಿಯ, ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳ ಮುಖ್ಯೋಪಾಧ್ಯಾಯರು | ಸದಸ್ಯರು |
| 4) ಗ್ರಾಮ ಪಂಚಾಯತಿ ವ್ಯಾಪ್ತಿಯ ಶಿಕ್ಷಣ ಸಂಯೋಜಕರು (ಇಸಿ)/ ಸಮೂಹ ಸಂಪನ್ಮೂಲ ಕೇಂದ್ರದ ಸಂಪನ್ಮೂಲ ವ್ಯಕ್ತಿಗಳು. | ಸದಸ್ಯರು |
| 5) ಅಂಗನವಾಡಿ ಕೇಂದ್ರದ ಮಹಿಳಾ ಮೇಲ್ವಿಚಾರಕರು | ಸದಸ್ಯರು |
| 6) ಗ್ರಾಮ ಪಂಚಾಯತಿ ವ್ಯಾಪ್ತಿಯ ಅಂಗನವಾಡಿ ಕಾರ್ಯಕರ್ತೆಯರು | ಸದಸ್ಯರು |
| 7) ಗ್ರಾಮ ಪಂಚಾಯತಿ ವ್ಯಾಪ್ತಿಯ ಆಶಾ ಕಾರ್ಯಕರ್ತೆಯರು | ಸದಸ್ಯರು |
| 8) ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಂಥಾಲಯ ಮೇಲ್ವಿಚಾರಕರು | ಸದಸ್ಯರು |
| 9) ಗ್ರಾಮ ಪಂಚಾಯತಿ ಮಟ್ಟದ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು (ವಿ.ಆರ್.ಡಬ್ಲ್ಯೂ) | ಸದಸ್ಯರು |
| 10) ನಿವೃತ್ತ ಪ್ರಾಥಮಿಕ / ಪ್ರೌಢ ಶಾಲಾ ಶಿಕ್ಷಕರುಗಳು – ಇಬ್ಬರು | ಸದಸ್ಯರು |
| 11) ಪ್ರೌಢ ಶಾಲೆಯ ಇಬ್ಬರು ವಿದ್ಯಾರ್ಥಿಗಳು – ಒಂದಕ್ಕಿಂತ ಹೆಚ್ಚು ಪ್ರೌಢ ಶಾಲೆಗಳು ಇದ್ದಾಗ ವಾರ್ಷಿಕವಾಗಿ ರೋಟೇಷನ್ ಆಧಾರದ ಮೇಲೆ ಆಯ್ಕೆ ಮಾಡಬೇಕು. (ಅದರಲ್ಲಿ ಒಬ್ಬರು ವಿದ್ಯಾರ್ಥಿ ಮತ್ತು ಇನ್ನೊಬ್ಬರು ವಿದ್ಯಾರ್ಥಿನಿ ಇರಬೇಕು.) | ಸದಸ್ಯರು |
| 12) ಪಂಚಾಯತಿ ಅಭಿವೃದ್ಧಿ ಅಧಿಕಾರಿ | ಸದಸ್ಯ ಕಾರ್ಯದರ್ಶಿ |

ಉಲ್ಲೇಖ (1) ರ ಸುತ್ತೋಲೆಯಲ್ಲಿ 2020-21ನೇ ಸಾಲಿನಲ್ಲಿ ಶಾಲೆಗಳು ಸಕಾಲದಲ್ಲಿ ತೆರೆಯದೆ ಇರುವುದರಿಂದ, ಪರ್ಯಾಯ ಮಾರ್ಗಗಳ ಮೂಲಕ ಮಕ್ಕಳನ್ನು ನಿರಂತರವಾಗಿ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸುವುದು ಶಿಕ್ಷಣ ಇಲಾಖೆಯ ಜವಾಬ್ದಾರಿಯಾಗಿರುವುದರಿಂದ ವಿದ್ಯಾಗಮ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದ್ದು, ಮಕ್ಕಳು ನಿರಂತರವಾಗಿ ಕಲಿಕೆಯಲ್ಲಿ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ಶಿಕ್ಷಕರು ಹಾಗೂ ಅಧಿಕಾರಿಗಳು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸದರಿ ಕಾರ್ಯಕ್ರಮದಡಿ ವಿವರಿಸಲಾಗಿದೆ. ಅದರಂತೆ ವಿದ್ಯಾಗಮ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ತಿಳಿಸಿದೆ.

ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಸೇರಿಸಲು ಕಟ್ಟುನಿಟ್ಟಿನ ಕ್ರಮಕೈಗೊಳ್ಳುವುದು ಆವಶ್ಯವಾಗಿದೆ. ಈ ಕಾರ್ಯದಲ್ಲಿ ಮಾನ್ಯ ನ್ಯಾಯಾಲಯವು ಆದೇಶಿಸಿರುವಂತೆ ಸ್ಥಳೀಯ ಗ್ರಾಮ ಪಂಚಾಯಿತಿಗಳು ಪ್ರಮುಖ ಪಾತ್ರ ವಹಿಸಬೇಕಾಗಿರುತ್ತದೆ. ಈ ದಿಶೆಯಲ್ಲಿ ಗ್ರಾಮ ಪಂಚಾಯತಿ ಶಿಕ್ಷಣ ಪಡೆಯು ಕೈಗೊಳ್ಳಬೇಕಾದ ಕಾರ್ಯ ಯೋಜನೆಯನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

# ಗ್ರಾಮ ಶಿಕ್ಷಣ ಪಡೆ.

# 10-09-2020

**As per new Karnataka Grama Swaraj and Panchayath Raj Act 1993, as amended in 2015, Makkala Grama Sabha yearly Once is Mandatory.**

**3 H (2) (i)**

**3-ಹೆಚ್. ಗ್ರಾಮಸಭಾದ ವಿಶೇಷ ಸಭೆ :–**(1) 3ಜಿ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಗ್ರಾಮಸಭಾದ ವ್ಯಾಪ್ತಿಯೊಳಗೆ ಇರುವ ಮಹಿಳೆಯರ, ಅನುಸೂಚಿತ ಜಾತಿಯ ಮತ್ತು ಅನುಸೂಚಿತ ಪಂಗಡಗಳ, ರೈತಾಪಿ ಜನರ ಮತ್ತು ಕರಕುಶಲ ಕೆಲಸಗಾರರ, ಯುವಜನರ ಮತ್ತು ಹಿರಿಯ ನಾಗರೀಕರ ಗುಂಪುಗಳು ತಮಗೆ ಅನುಕೂಲವಾದಾಗಲೆಲ್ಲ ಸಭೆಗಳನ್ನು ನಡೆಸಲು ಮುಂದಾಗುವುದಕ್ಕೆ ಹಾಗೂ ಅಭಿವೃದ್ಧಿಗಾಗಿ ತಮ್ಮ ತಮ್ಮ ಪರಿಹಾರಕ್ಕಾಗಿ ಸಲಹೆಗಳ ಸಹಿತ ಗುಂಪಿನ ಅಗತ್ಯತೆಗಳ ರೂಪುರೇಷೆಯನ್ನು ಗ್ರಾಮಸಭೆಯ ನಿಯತ ಸಭೆಗಳಲ್ಲಿ ಸಭೆಯ ಮುಂದಿಡುವುದನ್ನು ತಡೆಯುತ್ತದೆಂದು ಅರ್ಥೈಸತಕ್ಕದ್ದಲ್ಲ:

ಪರಂತು, ಜನವಸತಿ ಸಭಾ ಮತ್ತು ವಾರ್ಡ್ ಸಭಾದ ಸಭೆಗಳಲ್ಲಿ ವಿತರಿಸಲಾದ ಅಗತ್ಯತೆಗಳನ್ನು ಗ್ರಾಮಸಭಾದ ಸಭೆಯಲ್ಲಿ ಕೈಗೆತ್ತಿಕೊಳ್ಳತಕ್ಕದ್ದು ಮತ್ತು ತನ್ನ ಸ್ವಂತದ್ದೆಂದು ದಾಖಲಿಸಿ ಗ್ರಾಮಪಂಚಾಯತಿಯ ಮುಂದೆ ಇಡುವುದು.

ಮತ್ತು ಪರಂತು, ಅಂತಹ ಪ್ರತಿಯೊಂದು ಪ್ರಾತಿನಿಧಿಕ ಗುಂಪು ತನ್ನ ಸಭೆಯಲ್ಲಿ ಸಿದ್ಧಪಡಿಸಿದ ಅಗತ್ಯತೆಗಳ ರೂಪುರೇಷೆಗಳನ್ನು ಗ್ರಾಮಸಭೆಯು ಪರಿಶೀಲಿಸತಕ್ಕದ್ದು ಮತ್ತು ಅದು ತನ್ನದೇ ವಿಷಯ ಎಂಬಂತೆ ಭಾವಿಸಿ ಗ್ರಾಮಪಂಚಾಯತಿಯ ಮುಂದೆ ಮಂಡಿಸಿ ಅನುಸರಣಾ ಕ್ರಮ ಕೈಗೊಳ್ಳತಕ್ಕದ್ದು.

(2) ಈ ಪ್ರಕರಣದ ಇತರ ಉಪಬಂಧಗಳಲ್ಲಿ ಒಳಗೊಂಡಿರುವ ಯಾವುದಕ್ಕೂ ಬಾಧಕವಾಗದಂತೆ ಅಧ್ಯಕ್ಷನು,–

(i) ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ, ಮಹಿಳೆಯರ ಮತ್ತು ಮಕ್ಕಳ ಸಬಲೀಕರಣಕ್ಕಾಗಿ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದಕ್ಕಾಗಿ ಪ್ರತ್ಯೇಕವಾಗಿ ಗ್ರಾಮಸಭಾದ ಸಭೆಗಳನ್ನು ಗ್ರಾಮಪಂಚಾಯತ್ ಸಭೆಗಳು ನಡೆಯುವುದಕ್ಕೂ ಮೊದಲು ಕಡೆಯಪಕ್ಷ ವರ್ಷಕ್ಕೆ ಒಂದು ಬಾರಿಯಾದರೂ ಅವರವರುಗಳಿಗೆ ಪ್ರತ್ಯೇಕವಾಗಿ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚೆ ನಡೆಸಲು ಕರೆಯತಕ್ಕದ್ದು;

(ii) ಗ್ರಾಮಸಭಾದ ಸದಸ್ಯರ ಶೇಕಡಾ ಹತ್ತಕ್ಕಿಂತ ಕಡಿಮೆಯಿಲ್ಲದ ಸದಸ್ಯರು, ಚರ್ಚೆಗಾಗಿ ವಿಷಯವನ್ನು ನಿರ್ದಿಷ್ಟಪಡಿಸಿ ಮನವಿ ಮಾಡಿಕೊಂಡಾಗ ಗ್ರಾಮಸಭಾದ ವಿಶೇಷ ಸಭೆಗಳನ್ನು ಕರೆಯತಕ್ಕದ್ದು, ಆದಾಗ್ಯೂ, ಅಂಥ ಯಾವುದೇ ಎರಡು ವಿಶೇಷ ಸಭೆಗಳ ನಡುವೆ ಕಡೆಯಪಕ್ಷ ಮೂರು ತಿಂಗಳುಗಳ ಅಂತರ ಇರತಕ್ಕದ್ದು.

(iii) ಗ್ರಾಮಪಂಚಾಯತ್‌ನ ಯೋಜನೆಗಳನ್ನು ಮತ್ತು ಹಣಕಾಸು ವಿಷಯಗಳನ್ನು ಪರಿಶೀಲಿಸಲು ವರ್ಷದಲ್ಲಿ ಎರಡು ಬಾರಿ ಎಂದರೆ ಏಪ್ರಿಲ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಎಲ್ಲಾ ಗ್ರಾಮಸಭಾಗಳ ವಿಶೇಷ ಆಯವ್ಯಯ ಸಭೆಗಳನ್ನು ಕರೆಯತಕ್ಕದ್ದು.

(3) ಆಯಾ ಗ್ರಾಮಪಂಚಾಯತ್‌ನಲ್ಲಿ ಇರುವ ಅನುಸೂಚಿತ ಜಾತಿ/ಅನುಸೂಚಿತ ಪಂಗಡಗಳ ಜನಸಂಖ್ಯೆಯ ಪ್ರಮಾಣಾನುಸಾರವಾಗಿ ಆಯವ್ಯಯವನ್ನು ಹಂಚಿಕೆ ಮಾಡತಕ್ಕದ್ದು ಮತ್ತು ಗ್ರಾಮಸಭಾದ ವಿಶೇಷ ಸಭೆಯಲ್ಲಿ ಅದನ್ನು ನಿರ್ಧರಿಸತಕ್ಕದ್ದು:

ಪರಂತು, ಆ ಗ್ರಾಮಸಭೆಯು ಈ ನಿಧಿಯನ್ನು ಬಳಕೆ ಮಾಡಿರದಿದ್ದರೆ, ಈ ನಿಧಿಯನ್ನು ಕರ್ನಾಟಕ ಅನುಸೂಚಿತ ಜಾತಿಗಳ ಉಪ-ಯೋಜನೆ ಮತ್ತು ಅನುಸೂಚಿತ ಪಂಗಡಗಳ ಉಪ-ಯೋಜನೆ (ಯೋಜನೆ, ಹಂಚಿಕೆ ಮತ್ತು ಹಣಕಾಸು ಸಂಪನ್ಮೂಲಗಳ ಬಳಕೆ) ಅಧಿನಿಯಮ, 2013ರಲ್ಲಿ (2013ರ ಕರ್ನಾಟಕ ಅಧಿನಿಯಮ ಸಂಖ್ಯೆ 65) ಹೇಳಿರುವುದಕ್ಕೆ ಅನುಸಾರವಾಗಿ ಬಳಕೆ ಮಾಡಿಕೊಳ್ಳತಕ್ಕದ್ದು.]1

*1. 2015ರ ಅಧಿನಿಯಮ ಸಂಖ್ಯೆ 44ರ ಮೂಲಕ ದಿನಾಂಕ: 15.01.2016ರಿಂದ ಪ್ರತಿಯೋಜಿಸಲಾಗಿದೆ.*

# ತಾಲ್ಲೂಕು ಮಟ್ಟದ 'ಮಕ್ಕಳ ರಕ್ಷಣಾ ಸಮಿತಿ' ಮತ್ತು

## ಸಮನ್ವಯ ಹಾಗೂ ಪರಿಶೀಲನಾ ಸಮಿತಿ.: ಆದೇಶ: 22/01/2014 ಮತ್ತು 28/07/2014

1. ತಹಶೀಲ್ದಾರರು – ಅಧ್ಯಕ್ಷರು
2. ತಾಲ್ಲೂಕು ಪಂಚಾಯತ ಕಾರ್ಯನಿರ್ವಹಣಾಧಿಕಾರಿಗಳು – ಉಪಾಧ್ಯಕ್ಷರು
3. ತಾಲ್ಲೂಕು ಪಂಚಾಯತ್ ಒಬ್ಬರು ಸದಸ್ಯರು. (ಮಹಿಳೆ)– ಸದಸ್ಯರು.
4. ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು – ಸದಸ್ಯರು.
5. ತಾಲ್ಲೂಕಿನ ವೈದ್ಯಾಧಿಕಾರಿಗಳು – ಸದಸ್ಯರು.
6. ಕಾರ್ಮಿಕ ಅಧಿಕಾರಿಗಳು/ ನಿರೀಕ್ಷಕರು– ಸದಸ್ಯರು.
7. ವೃತ್ತ ಪೊಲೀಸ್ ಆರಕ್ಷಕ ನಿರೀಕ್ಷಕರು – ಸದಸ್ಯರು.
8. ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು – ಸದಸ್ಯರು.
9. ಪುರಸಭೆ/ಪಟ್ಟಣ ಪಂಚಾಯತ ಮುಖ್ಯಾಧಿಕಾರಿಗಳು – ಸದಸ್ಯರು.
10. ಪುರಸಭೆ/ಪಟ್ಟಣ ಪಂಚಾಯತಿಯ ಒಬ್ಬರು ಮಹಿಳಾ ಸದಸ್ಯರು. – ಸದಸ್ಯರು.
11. ಉಪ ನೊಂದಣಾಧಿಕಾರಿಗಳು – ಸದಸ್ಯರು.
12. ತಾಲ್ಲೂಕು ಮಟ್ಟದಲ್ಲಿ ನಾಮ ನಿರ್ದೇಶನಗೊಂಡ ಒಬ್ಬರು ಸ್ವಯಂ ಸೇವಾ ಸಂಸ್ಥೆಯ ಪ್ರತಿನಿದಿ.
13. ಜಿಲ್ಲಾ "ಮಕ್ಕಳ ರಕ್ಷಣಾ ಘಟಕ" ದ ಒಬ್ಬರು ಸದಸ್ಯರು.– ಸದಸ್ಯರು.
14. ಮಹಿಳಾ ಮತ್ತು ಮಕ್ಕಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಯ ಒಬ್ಬರು ಪ್ರತಿನಿದಿ.
15. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು – ಸದಸ್ಯ ಕಾರ್ಯದರ್ಶಿಗಳು.

ವರ್ಷಕ್ಕೆ 4 ಸಮಾಲೋಚನಾ/ ಉಸ್ತುವಾರಿ/ಪ್ರಗತಿ ಪರಿಶೀಲನೆ/ಮೇಲ್ವಿಚಾರಣೆ/ಮೌಲ್ಯಮಾಪನ /ಅನುಸರಣಾ ಸಭೆ – ವರದಿ – ಜಿಲ್ಲಾ ಮಟ್ಟಕ್ಕೆ.

| ಕ್ರ.ಸಂ | ಹುದ್ದೆ | ಪದನಾಮ |
|---|---|---|
| 1. | ತಹಶೀಲ್ದಾರ ಮತ್ತು ತಾಲ್ಲೂಕು ದಂಡಾಧಿಕಾರಿಗಳು | ಅಧ್ಯಕ್ಷರು |
| 2. | ಕಾರ್ಯನಿರ್ವಾಹಣಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ | ಉಪಾಧ್ಯಕ್ಷರು |
| 3. | ವೃತ್ತ ಪೊಲೀಸ್ ನಿರೀಕ್ಷಕರು, ಪೊಲೀಸ್ ಇಲಾಖೆ | ಸದಸ್ಯರು |
| 4. | ತಾಲ್ಲೂಕು ಶಿಕ್ಷಣಾಧಿಕಾರಿ, ಶಿಕ್ಷಣ ಇಲಾಖೆ | ಸದಸ್ಯರು |
| 5. | ತಾಲ್ಲೂಕು ವೈದ್ಯಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಸದಸ್ಯರು |
| 6. | ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ, ಸಮಾಜ ಕಲ್ಯಾಣ ಇಲಾಖೆ | ಸದಸ್ಯರು |
| 7. | ತಾಲ್ಲೂಕು ಕಾರ್ಮಿಕ ಅಧಿಕಾರಿ, ಕಾರ್ಮಿಕ ಇಲಾಖೆ | ಸದಸ್ಯರು |
| 8. | ತಾಲ್ಲೂಕು ಪ್ರತಿನಿಧಿ | ಸದಸ್ಯರು |
| 9. | ತಾಲ್ಲೂಕು ಪಂಚಾಯಿತಿಯ ಒಬ್ಬ ಮಹಿಳಾ ಸದಸ್ಯರು | ಸದಸ್ಯರು |
| 10. | ಮುನ್ಸಿಪಾಲಿಟಿ / ಪಟ್ಟಣ ಪಂಚಾಯಿತಿಯ ಒಬ್ಬ ಮಹಿಳಾ ಸದಸ್ಯರು | ಸದಸ್ಯರು |
| 11. | ತಾಲ್ಲೂಕು ಮಟ್ಟದ ಮಕ್ಕಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ (ಜಿಲ್ಲಾಧಿಕಾರಿಗಳು ನಾಮನಿರ್ದೇಶನ ಮಾಡುವುದು) | ಸದಸ್ಯರು ........ |
| 12. | ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಒಬ್ಬ ಸದಸ್ಯರು | ಸದಸ್ಯರು |
| 13. | ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಸದಸ್ಯ ಕಾರ್ಯದರ್ಶಿ |

ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಮಟ್ಟದ ಮಕ್ಕಳ ರಕ್ಷಣಾ ಸಮಿತಿಗಳು ಕೇಂದ್ರ ಸರ್ಕಾರದ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಮಾರ್ಗಸೂಚಿಗಳನ್ವಯ ಕಾರ್ಯನಿರ್ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

T. Krishnaiah
(ಟಿ.ಕೃಷ್ಣಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ–I(ಪ್ರ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ದೂರವಾಣಿ ಸಂಖ್ಯೆ:22032152

**ಆದೇಶ ಸಂಖ್ಯೆ ಮ.ಮ ಇ 274 ಮಭಾಬ 2013 ಬೆಂಗಳೂರು ದಿನಾಂಕ 28–07–2014**

## ಆದೇಶ ಸಂಖ್ಯೆ ಮ.ಮ ಇ 105 ಮಭಾಅ 2013 ಬೆಂಗಳೂರು ದಿನಾಂಕ 22–01–2014

ಅನುಬಂಧ–3

**ಬಾಲ್ಯ ವಿವಾಹಗಳನ್ನು ತಡೆಯುವ ತಾಲ್ಲೂಕು ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿ**

ತಹಶೀಲ್ದಾರರು – ಅಧ್ಯಕ್ಷರು

ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್ – ಸದಸ್ಯರು

ಕ್ಷೇತ್ರ ಶಿಕ್ಷಣಾಧಿಕಾರಿಗಳು – ಸದಸ್ಯರು

ತಾಲ್ಲೂಕು ವೈದ್ಯಾಧಿಕಾರಿಗಳು – ಸದಸ್ಯರು

ಸರ್ಕಲ್ ಪೊಲೀಸ್ ಇನ್ಸ್‌ಪೆಕ್ಟರ್ – ಸದಸ್ಯರು

ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ – ಸದಸ್ಯರು

ಪುರಸಭೆ/ಪಟ್ಟಣ ಪಂಚಾಯಿತಿಯ ಮುಖ್ಯ ಅಧಿಕಾರಿಗಳು – ಸದಸ್ಯರು.

ಉಪ ನೋಂದಣಾಧಿಕಾರಿಗಳು -- ಸದಸ್ಯರು

ಮಕ್ಕಳ/ಮಹಿಳಾ ಕಲ್ಯಾಣ ಕ್ಷೇತ್ರದಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿರುವ 1 ಸ್ವಯಂ ಸೇವಾ ಸಂಸ್ಥೆ (ಸಮಿತಿಯ ಅಧ್ಯಕ್ಷರಿಂದ ನಾಮ ನಿರ್ದೇಶನ) – ಸದಸ್ಯರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು – ಸದಸ್ಯ ಕಾರ್ಯದರ್ಶಿ

## Takulk Officers Role on Child Protection Planning, Implementation, Review, Monitoring, Flow Up and Action- Result

- ಗ್ರಾಮ, ಗ್ರಾಮ ಪಂಚಾಯತ್, ತಾಲೂಕು ಮತ್ತು ನಗರ ವ್ಯಾಪ್ತಿಯಲ್ಲಿ ಮಕ್ಕಳ ಸಂರಕ್ಷಣೆಗೆ ಸಂಭಂದಿಸಿದ ವಿವಿಧ ವ್ಯವಸ್ಥೆಗಳ ಕ್ರೀಯಾಶೀಲ ಅನುಷ್ಠಾನಕ್ಕೆ ಯೋಜನೆ ತಯಾರಿಸಿ ಅನುಷ್ಠಾನಗೊಳಿಸುವುದು.
- ಮಕ್ಕಳಿಗೆ ಸಂಬಂಧಿಸಿದ ಕಾನೂನು, ಸೂತ್ರೋಲೆಗಳ ಅನುಷ್ಠಾನಕ್ಕೆ ಕ್ರಮ.
- ಕಾಲ ಕಾಲಕ್ಕೆ ಸೂಕ್ತ ಸಭೆಗಳನ್ನು ನಡೆಸಿ ಮತ್ತು ತರಬೇತಿಗಳನ್ನು ನಡೆಸಿ, ವಿವಿಧ ಹಂತದ ಅಧಿಕಾರಿಗಳನ್ನು ಬಲಪಡಿಸುವುದು.
- ಸೂಕ್ತ ಕಾಲಕ್ಕೆ ಪ್ರಗತಿ ಪರಿಶೀಲನಾ ಸಭೆ.
- ಕ್ಷೇತ್ರ ಮಟ್ಟದಲ್ಲಿ ಅನುಷ್ಠಾನದ ಮೇಲ್ವಿಚಾರಣೆ, ಉಸ್ತುವಾರಿಯನ್ನು ನಡೆಸುವುದು.
- ಕಾಲ ಕಾಲಕ್ಕೆ ಅನುಸರಣಾ ಕ್ರಮ ಹಾಗೂ ಅಧಿಕಾರಿಗಳ ಜವಾಬ್ದಾರಿ ಹಾಗೂ ಹೊಣೆಗಾರಿಕೆಯ ಕಾರ್ಯಗಳ ಬಗ್ಗೆ ನಿಗಾವಹಿಸಿ ಅದರಂತೆ ಕ್ರಮ ಕೈಗೊಳ್ಳುವುದು.

# ಮಕ್ಕಳ ಸಂರಕ್ಷಣೆಯಲ್ಲಿ ತಾಲೂಕು ಮಟ್ಟದ ಅಧಿಕಾರಿಗಳ ಪ್ರಮುಖ ಜವಾಬ್ದಾರಿಗಳು

- ಎಲ್ಲಾ ಮಕ್ಕಳಿಗೆ 100% ಜನನ ಪ್ರಮಾಣ ಪತ್ರ ಲಭಿಸುವಂತೆ ನೋಡುವದು ಮತ್ತು ಖಾತ್ರಿಪಡಿಸುವುದು.
- ಎಲ್ಲಾ ಮಕ್ಕಳಿಗೆ 100% ಎಲ್ಲಾ ರೀತಿಯ ಮತ್ತು ಹಂತದ ಚುಚುಮದ್ದು ಲಭಿಸುವಂತೆ ಮಾಡುವದು ಮತ್ತು ಖಾತ್ರಿಪಡಿಸುವುದು.
- ಕ್ಷೇತ್ರ ವ್ಯಾಪ್ತಿಯ ಎಲ್ಲಾ ಅಂಗನವಾಡಿಗಳಲ್ಲಿ 100% 3 ರಿಂದ 6 ವರ್ಷದೊಳಗಿನ ಮಕ್ಕಳ ದಾಖಲಾತಿ ಮತ್ತು ನಿರಂತರ ಹಾಜರಾತಿಯನ್ನು ಕಾಪಾಡುವುದು.
- 6 ರಿಂದ 18 ವರ್ಷದೊಳಗಿನ ಮಕ್ಕಳು 100% ಶಾಲಾ ದಾಖಲಾತಿ ಮತ್ತು ಹಾಜರಾತಿ ಇರುವಂತೆ ಕ್ರಮ, ಅನುಸರಣೆ, ಉಸ್ತುವಾರಿ ಮತ್ತು ಪ್ರಗತಿ ಪರಿಶೀಲನೆ ನಡೆಸುವುದು.
- 100% ಬಾಲ ಕಾರ್ಮಿಕ (18 ವರ್ಷದವರೆಗೆ) ಪದ್ಧತಿ ನಿರ್ಮೂಲನೆಗೆ ಕ್ರಮ ಅನುಸರಣೆ, ಉಸ್ತುವಾರಿ ಮತ್ತು ಪ್ರಗತಿ ಪರಿಶೀಲನೆ ನಡೆಸುವುದು.
- 100% ಬಾಲ್ಯ ವಿವಾಹ ನಿರ್ಮೂಲನೆಗೆ ಕ್ರಮ ಅನುಸರಣೆ, ಉಸ್ತುವಾರಿ ಮತ್ತು ಪ್ರಗತಿ ಪರಿಶೀಲನೆ ನಡೆಸುವುದು.

---

- ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಮತ್ತು ಮಾರಾಟವನ್ನು ತಡೆಯುವದು ಮತ್ತು ಅನೈತಿಕ ಮಾನವ ಸಾಗಾಣಿಕೆಯನ್ನು ಸಂಪೂರ್ಣವಾಗಿ ನಿಲ್ಲಿಸುವದು ಹಾಗೂ ಅನುಸರಣೆ, ಉಸ್ತುವಾರಿ ಹಾಗೂ ಪ್ರಗತಿ ಪರಿಶೀಲನೆ ನಡೆಸುವುದು.
- ಗ್ರಾಮ ಮತ್ತು ಪಟ್ಟಣ ವ್ಯಾಪ್ತಿಯಲ್ಲಿ ಮಕ್ಕಳ ಸಂರಕ್ಷಣೆಗೆ ಸಂಬಂಧಿಸಿದ ಮೂಲಭೂತ ಸೌಲಭ್ಯಗಳು ಕನಿಷ್ಠ ಪ್ರಮಾಣದಲ್ಲಿ ಆಯಾ ಕ್ಷೇತ್ರ ವ್ಯಾಪ್ತಿಯಲ್ಲಿ ಲಭ್ಯವಿರುವಂತೆ ಕ್ರಮವಹಿಸಿ ನಿಗಾವಹಿಸುವುದು.
- ಕಾಲ ಕಾಲಕ್ಕೆ ಆಯಾ ಹಂತದಲ್ಲಿ ಮಕ್ಕಳ ಸಂರಕ್ಷಣೆಗೆ ಸಂಬಂಧಿಸಿದ ವಿಚಾರಗಳ ಕುರಿತು ತಾಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಸೂಕ್ತ ಕಠಿಣ ಹಾಗೂ ಹೊಣೆಗಾರಿಕೆ ಆಧಾರಿತ ಮೇಲುವಸ್ತುವಾರಿ, ಅವಲೋಕನಾ ಹಾಗೂ ಮುಂದಿನ ಅನುಷ್ಠಾನ ಕ್ರಮಗಳನ್ನು ನಿರ್ವಹಿಸಿ ಅನುಷ್ಠಾನಗೊಳಿಸುವುದು.
- ಮಕ್ಕಳ ಸಂರಕ್ಷಣೆಯಲ್ಲಿ ನಿರ್ಲಕ್ಷ, ದುರುಪಯೋಗ, ತಾರತಮ್ಯ ಮತ್ತು ಕರ್ತವ್ಯ ಲೋಪ ಎಸಗಿದ ಎಲ್ಲಾ ಹಂತದ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಸೂಕ್ತ ಕ್ರಮ ಜರುಗಿಸುವುದು.
- ಮಕ್ಕಳ ಸಂರಕ್ಷಣೆಯಲ್ಲಿ ಉತ್ತಮ ಸೇವೆ ಸಲ್ಲಿಸಿದ ಅಧಿಕಾರಿಗಳಿಗೆ ಸೂಕ್ತ ಪ್ರಶಂಸೆ ಮತ್ತು ಅಭಿನಂದನೆಯನ್ನು ನೀಡುವುದು.
- ಮಕ್ಕಳ ಸಂರಕ್ಷಣೆಯ ಮುಖಾಂತರ ಮಕ್ಕಳ ಅಭಿವೃದ್ಧಿ ತನ್ಮೂಲಕ ದೇಶ ಮತ್ತು ಮಾನವ ಅಭಿವೃದ್ಧಿ.

## ತಾಲ್ಲೂಕು ಮಟ್ಟದ ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಹಾಗೂ ಮಾರಾಟ ತಡೆ ಸಮಿತಿ.

**ಆದೇಶ ಸಂಖ್ಯೆ ಮ.ಮ ಇ 128 ಮಭಾಬ 2012 ಬೆಂಗಳೂರು ದಿನಾಂಕ 04-06-2013.**

| ಕ್ರ.ಸಂ | ಹುದ್ದೆ | ಪದನಾಮ |
|---|---|---|
| 1 | ತಹಶೀಲ್ದಾರ್‌ರು | ಅಧ್ಯಕ್ಷರು |
| 2 | ತಾಲ್ಲೂಕು ಪಂಚಾಯತ್ ಸದಸ್ಯೆ (ಮಹಿಳೆ) (ತಹಶೀಲ್ದಾರ್‌ರವರಿಂದ ನಾಮನಿರ್ದೇಶನಗೊಂಡವರು) | ಉಪಾಧ್ಯಕ್ಷರು |
| 3 | ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು | ಸದಸ್ಯರು |
| 4 | ತಾಲ್ಲೂಕು ಆರೋಗ್ಯಾಧಿಕಾರಿಗಳು | ಸದಸ್ಯರು |
| 5 | ಕ್ಷೇತ್ರ ಶಿಕ್ಷಣಾಧಿಕಾರಿಗಳು | ಸದಸ್ಯರು |
| 6 | ಕಾರ್ಮಿಕ ನಿರೀಕ್ಷಕರು | ಸದಸ್ಯರು |
| 7 | ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು | ಸದಸ್ಯರು |
| 8 | ಆರಕ್ಷಕ ನಿರೀಕ್ಷಕರು | ಸದಸ್ಯರು |
| 9 | ಸಮಿತಿಯ ಅಧ್ಯಕ್ಷರಿಂದ ನಾಮ ನಿರ್ದೇಶನಗೊಂಡ ಮತ್ತು ಎರಡು ಸ್ವಯಂ ಸೇವಾ ಸಂಸ್ಥೆಗಳು | ಸದಸ್ಯರು |
| 10 | ತಾಲ್ಲೂಕು ಸ್ತ್ರೀ ಶಕ್ತಿ ಒಕ್ಕೂಟದ ಅಧ್ಯಕ್ಷರು | ಸದಸ್ಯರು |
| 11 | ಸಿವ್ಹಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ | ಗೌರವ ಸದಸ್ಯರು |
| 12 | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು | ಸದಸ್ಯ ಕಾರ್ಯದರ್ಶಿಗಳು |

## ತಾಲ್ಲೂಕು ಮಟ್ಟದ ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಹಾಗೂ ಮಾರಾಟ ತಡೆ ಸಮಿತಿ.

**(ಆ) ತಾಲ್ಲೂಕು ಮಟ್ಟದ ಸಮಿತಿಗಳು:**

1. ತಹಶೀಲ್ದಾರ್
2. ತಾಲ್ಲೂಕು ಪಂಚಾಯತ್ ಸದಸ್ಯೆ(ಮಹಿಳೆ) – ಅಧ್ಯಕ್ಷರು
   (ತಹಶೀಲ್ದಾರ್‌ರವರಿಂದ ನಾಮನಿರ್ದೇಶನಗೊಂಡವರು) – ಉಪಾಧ್ಯಕ್ಷರು
3. ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ
4. ತಾಲ್ಲೂಕು ಆರೋಗ್ಯಾಧಿಕಾರಿ – ಸದಸ್ಯರು
5. ತಾಲ್ಲೂಕು ಶಿಕ್ಷಣಾಧಿಕಾರಿ – ಸದಸ್ಯರು
6. ಕಾರ್ಮಿಕ ನಿರೀಕ್ಷಕರು – ಸದಸ್ಯರು
7. ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು – ಸದಸ್ಯರು
8. ಆರಕ್ಷಕ ನಿರೀಕ್ಷಕರು – ಸದಸ್ಯರು
9. ಸಮಿತಿಯ ಅಧ್ಯಕ್ಷರಿಂದ ನಾಮ ನಿರ್ದೇಶನಗೊಂಡ – ಸದಸ್ಯರು
   ಮತ್ತು ಎರಡು ಸ್ವಯಂ ಸೇವಾ ಸಂಸ್ಥೆಗಳು – ಸದಸ್ಯರು
10. ತಾಲ್ಲೂಕು ಸ್ತ್ರೀಶಕ್ತಿ ಒಕ್ಕೂಟದ ಅಧ್ಯಕ್ಷರು
11. ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು – ಸದಸ್ಯರು
    ಜೆ.ಎಂ.ಎಫ್.ಸಿ.
12. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು – ಸದಸ್ಯರು
    -- ಸದಸ್ಯ ಕಾರ್ಯದರ್ಶಿ.

ಕರ್ತವ್ಯಗಳು:

## ತಾಲ್ಲೂಕು ಮಟ್ಟದ ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಹಾಗೂ ಮಾರಾಟ ತಡೆ ಸಮಿತಿ.

1. ಗ್ರಾಮ ಹೋಬಳಿ ಮಟ್ಟದಲ್ಲಿ ಮಕ್ಕಳ ಮಾಹಿತಿಯನ್ನು ಇಟ್ಟುಕೊಳ್ಳುವುದು.
2. ಗ್ರಾಮ ಮಟ್ಟದ ಸಮಿತಿ ಸದಸ್ಯರನ್ನು ತಾಲ್ಲೂಕು ಮಟ್ಟದಲ್ಲಿ ಮಹಿಳೆಯರ ಮತ್ತು ಮಕ್ಕಳ ಮಾರಾಟದ ವಿರುದ್ಧ ನಡೆಸುವ ಪ್ರಚಾರಾಂದೋಲನ ಕಾರ್ಯಕ್ರಮಗಳಲ್ಲಿ ತೊಡಗಿಸುವುದು, ಸ್ವ-ಸಹಾಯ ಸಂಘಗಳಿಗೆ ಸಾರ್ವಜನಿಕವಾಗಿ ಸಾಗಣೆ ವಿರೋಧಿಸಲು ಕ್ರಮ ಜರುಗಿಸುವುದು.
3. ತಾಲ್ಲೂಕು ಮಟ್ಟದಲ್ಲಿ ಮಹಿಳೆಯರ ಮತ್ತು ಮಕ್ಕಳ ಸಾಗಾಣೆಯ ವಿರುದ್ಧ ಪ್ರಕರಣಗಳು ಪೊಲೀಸ್ ಇಲಾಖೆಯಲ್ಲಿ ದಾಖಲಾಗಿವೆಯೇ, ಈ ದಾಖಲೆಗೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮದ ಬಗ್ಗೆ ಪರಿಶೀಲನೆ ನಡೆಸುವುದು.
4. ತಾಲ್ಲೂಕು ಮಟ್ಟದಲ್ಲಿ ಸಂಪರ್ಕ ಕೇಂದ್ರಗಳನ್ನು ಬಸ್ ನಿಲ್ದಾಣ, ರೈಲ್ವೆ ನಿಲ್ದಾಣದಲ್ಲಿ ಪ್ರಾರಂಭಿಸಿ ಸಾಗಣೆ ಬಗ್ಗೆ ಗಮನಹರಿಸುವುದು.

## ತಾಲ್ಲೂಕು ಮಟ್ಟದ ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಹಾಗೂ ಮಾರಾಟ ತಡೆ ಸಮಿತಿ.

5. ಸಾಗಾಣೆಗೊಳಪಟ್ಟ ಮಕ್ಕಳ ನೆರವಿಗೆ ಪೊಲೀಸ್ ನೆರವಿನೊಂದಿಗೆ ತಾಲ್ಲೂಕು ವ್ಯಾಪ್ತಿಯಲ್ಲಿ ಸಹಾಯವಾಣಿ ಪ್ರಾರಂಭಿಸುವುದಲ್ಲದೆ ಶೋಷಣೆಗೊಳಗಾದ ಮಕ್ಕಳಿಗೆ ಸಹಾಯ ಕಲ್ಪಿಸುವುದು.
6. ತಾಲ್ಲೂಕು ಮಟ್ಟದಲ್ಲಿ ಮಹಿಳೆಯರ ಮತ್ತು ಮಕ್ಕಳ ಸಾಗಣೆ ವಿರುದ್ಧ ಕಾವಲುಪಡೆ ರಚಿಸಬೇಕು. ತಾಲ್ಲೂಕು ವ್ಯಾಪ್ತಿಯಲ್ಲಿ ಮಕ್ಕಳ ಸಾಗಣೆ ಬಗ್ಗೆ ಸುಳಿವು ಪಡೆದ ಕೂಡಲೇ ಮಗುವನ್ನು ಸಾಗಣೆಯಿಂದ ತಪ್ಪಿಸಲು ಪೊಲೀಸ್ ಇಲಾಖೆ ನೆರವು ಪಡೆದು ಕ್ರಮ ಕೈಗೊಳ್ಳಬೇಕು.
7. ಪಂಚಾಯತ್ ಹಂತಗಳಲ್ಲಿ ಸಾಗಣೆ ವಿರುದ್ಧ ಕ್ರಮಕ್ಕಾಗಿ ಕ್ರೀಯಾ ಯೋಜನೆ ರೂಪಿಸುವುದು.
8. ಸ್ಥಳೀಯ ಸ್ವಯಂ ಸೇವಾ ಸಂಘಗಳ ಸಹಾಯದಿಂದ ಸಾಗಣೆಗೊಳಪಟ್ಟಿರುವ/ಕಾಣೆಯಾದ ಮಕ್ಕಳ ಬಗ್ಗೆ ಕ್ರಮಬದ್ಧವಾದ ಮಾಹಿತಿ ಇರಿಸುವುದು.

**ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಹಾಗೂ ಮಾರಾಟ ತಡೆಯಲು ಮಾಡಬಹುದಾದ ಕೆಲವು ಪ್ರಮುಖ ಕ್ರಮಗಳು.**

- ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಯ ಪರಿಚಯ/ ದೂರವಾಣಿ ಸಂಖ್ಯೆ
- ಜಿಲ್ಲೆಯ ಮಹಿಳೆಯರ ಮತ್ತು ಮಕ್ಕಳ ವಸತಿ ಕೇ0ದ್ರಗಳ ಪರಿಚಯ/ ದೂರವಾಣಿ ಸಂಖ್ಯೆ
- ಜಿಲ್ಲಾ ಬಾಲಕಾರ್ಮಿಕ ಕ್ರಿಯಾ ಯೋಜನೆಯ ಅಡಿಯಲ್ಲಿ ನಡೆಯುವ ಪುರ್ನವಸತಿ ಕೇಂದ್ರಗಳ ಪರಿಚಯ/ ದೂರವಾಣಿ ಸಂಖ್ಯೆ

## ತಾಲ್ಲೂಕು ಮಟ್ಟದ ಮಕ್ಕಳ ರಕ್ಷಣಾ ಸಮಿತಿಯ ಸಭೆಯ ಅಜೆಂಡಾ

- ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಗ್ರಾಮ ಪಂಚಾಯತ್ ಮಟ್ಟದಲ್ಲಿ **"ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಸಮಿತಿ"ಗಳು** ರಚನೆ,ಕ್ರೀಯಾಶೀಲ ಅನುಷ್ಠಾನ.
- ಎಲ್ಲಾ ಮಕ್ಕಳಿಗೂ **ಜನನ ಪ್ರಮಾಣ ಪತ್ರ** ವಿತರಿಸಿದ ಬಗ್ಗೆ ಖಾತ್ರಿ.
- **ಅಪೌಷ್ಠಿಕ ಮಕ್ಕಳ ಸಂಖ್ಯೆ** ಮತ್ತು ಕೈಗೊಂಡ ಕ್ರಮಗಳು.
- **ಶಾಲೆಯಿಂದ ಹೊರಗುಳಿದ ಮಕ್ಕಳು, ಮರಳಿ ಶಾಲೆಗೆ** ದಾಖಲಿಸುವುದು. 100% ದಾಖಲಾತಿ ಮತ್ತು ಹಾಜರಾತಿ
- ತಾಲೂಕು ವ್ಯಾಪ್ತಿಯಲ್ಲಿ **ಬಾಲ್ಯವಿವಾಹ ನಿಷೇಧ ಕಾಯ್ದೆ–2006ರಡಿಯಲ್ಲಿ** ದಾಖಲಾದ ಪ್ರಕರಣಗಳು, ಸಧ್ಯದ ಸ್ಥಿತಿ ಮತ್ತು ತಡೆಹಿಡಿದೆ ಬಾಲ್ಯವಿವಾಹಗಳ ಮಾಹಿತಿಯ ಕುರಿತು ಚರ್ಚೆ ಮತ್ತು ವರದಿ.
- ತಾಲ್ಲೂಕು ವ್ಯಾಪ್ತಿಯಲ್ಲಿ **ಮಕ್ಕಳು ಮತ್ತು ಹದಿ ವಯಸ್ಸಿನ ಮಕ್ಕಳ ದುಡಿಮೆ** ನಿಷೇಧ ಮತು ನಿಯಂತ್ರಣ ಕಾಯ್ದೆ–1986ರಡಿಯಲ್ಲಿ ದಾಖಲಾದ ಪ್ರಕರಣಗೆಳು, ಸಧ್ಯದ ಸ್ಥಿತಿ ಮತ್ತು ರಕ್ಷಿಸಿದ ಮಕ್ಕಳ ಸ್ಥಿತಿಗೆತಿಗಳ ಕುರಿತು ಚರ್ಚೆ.
- ಮಕ್ಕಳ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ)ಕಾಯ್ದೆ–2015ರಡಿಯಲ್ಲಿ ದಾಖಲಾದ ಪ್ರಕರಣಗಳು, ಸಧ್ಯದ ಸ್ಥಿತಿಗಳ ಕುರಿತು ಹಾಗೂ ಗ್ರಾಮ ಪಂಚಾಯತ್ ಮಟ್ಟದ ಸಮಿತಿಗಳಿಂದ ರಕ್ಷಿಸಿ ಪೋಷಣೆ ಮತ್ತು ರಕ್ಷಣೆಗಾಗಿ ಹಾಜರಪಡಿಸಿದ್ದಲ್ಲಿ ವರದಿ ಮಂಡನೆ.
- **ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ–2012**ರಡಿಯಲ್ಲಿ ದಾಖಲಾದ ಪ್ರಕರಣಗಳು, ಸಧ್ಯದ ಸ್ಥಿತಿಗತಿಗಳ ಕುರಿತು ಚರ್ಚೆ.
- **ಮಾನವ ಅನೈತಿಕ ಸಾಗಾಣಿಕೆ ನಿಷೇಧ ಕಾಯ್ದೆ**(ಐಟಿಪಿಎ)ಯಡಿಯಲ್ಲಿ ದಾಖಲಾದ ಪ್ರಕರಣಗಳು, ಸಧ್ಯದ ಸ್ಥಿತಿಗತಿಗಳ ಕುರಿತು ಚರ್ಚೆ.

- **ಬಾಲಕಾರ್ಮಿಕ** ಮಕ್ಕಳ ಪತ್ತೆಗಾಗಿ, **ಭಿಕ್ಷಾಟನೆ** ತೊಡಗಿರುವ ಮಕ್ಕಳ ರಕ್ಷಣೆಗಾಗಿ ಅನಿರೀಕ್ಷಿತ ದಾಳಿಗಳನ್ನು ಆಯೋಜಿಸುವ ಬಗ್ಗೆ.
- ಶಾಲೆಗಳಲ್ಲಿ **"ಮಕ್ಕಳ ಸುರಕ್ಷತಾ ನೀತಿ" ಯನ್ನು** ಪ್ರತಿ ಶಾಲೆಯಲ್ಲಿ ಅನುಷ್ಠಾನ, **ಮಕ್ಕಳ ಹಕ್ಕುಗಳ ಕ್ಲಬ್, ಮಕ್ಕಳ ಸಂಸತ್ತು** ಅನುಷ್ಠಾನದ ಬಗ್ಗೆ ಮತ್ತು **ಹಾಸ್ಟೆಲ್‌ಗಳಲ್ಲಿ ಮಕ್ಕಳ ಸುರಕ್ಷತಾ ನೀತಿಯ** ಮತ್ತು ಮಕ್ಕಳ ಸುರಕ್ಷತಾ ಘಟಕಗಳ ಅನುಷ್ಠಾನದ ಬಗ್ಗೆ ಚರ್ಚೆ.
- ತಾಲ್ಲೂಕು ವ್ಯಾಪ್ತಿಯಲ್ಲಿರುವ **ಮಕ್ಕಳ ಪಾಲನಾ ಸಂಸ್ಥೆಗಳಿಗೆ ಭೇಟಿ ಮತ್ತು ಕಾಯ್ದೆ** ಹಾಗೂ ನಿಯಮಾನುಸಾರ ಕೇಂದ್ರ ನಡೆಸಿಕೊಂಡು ಹೋಗುವ ಕುರಿತು ಚರ್ಚೆ.
- **ಅಂಗನವಾಡಿ, ಬಾಲಿಕಾ ಸಂಘ, ಬಾಲ ವಿಕಾಸ ಸಮಿತಿಯ** ಬಲವರ್ಧನೆ ಮತ್ತು ಸಕ್ರೀಯವಾಗಿ ಅನುಷ್ಠಾನಗೊಳಿಸುವ ಬಗ್ಗೆ.
- 0–6 ವರ್ಷದೊಳಗಿನ ಮಕ್ಕಳಿಗೆ **ಎಲ್ಲಾ ಚುಚ್ಚುಮದ್ದುಗಳು** 100% ಮಕ್ಕಳಿಗೆ ನೀಡಿರುವ ಬಗ್ಗೆ ಚರ್ಚೆ.

- ದೇವಸ್ಥಾನ, ಚರ್ಚ, ಕಲ್ಯಾಣ ಮಂಟಪಗಳಲ್ಲಿ **ಬಾಲ್ಯವಿವಾಹ, ಬಾಲಕಾರ್ಮಿಕ ಪದ್ಧತಿ ನಿಷೇಧ** ಕುರಿತು ಜಾಗೃತಿಗಾಗಿ ಫಲಕ ಮತ್ತು ಗೋಡೆಬರಹಗಳನ್ನು ಬರೆಯಿಸುವ ಬಗ್ಗೆ.
- **ಮಕ್ಕಳ ಸುರಕ್ಷತೆಗಾಗಿ ಉಪಯೋಗವಿಲ್ಲದ ಬೋರ್‌ವೆಲ್, ಗುಂಡಿಗಳನ್ನು** ಮುಚ್ಚುವುದು.
- **ಸರಕು –ಸಾಗಣಿಕೆ ವಾಹನದಲ್ಲಿ ಮಾನವ ಸಾಗಣೆ ನಿಷೇಧದ ಬಗ್ಗೆ ಚರ್ಚೆ ಮತ್ತು ಅನುಷ್ಠಾನ.**
- ಗುಳೆ ಮತ್ತು ವಲಸೆಗೆ ತಡೆ ಕ್ರಮ. ಈ ಕುಟುಂಬಗಳಿಗೆ ಸಾಮಾಜಿಕ ಭದ್ರತಾ ಯೋಜನೆಗಳಡಿ/ಎನ್.ಆರ್.ಇ.ಜಿ.ಪಿಯಡಿಯಲ್ಲಿ ಕೆಲಸ ನೀಡುವುದು.
- ಬಾಲಕಾರ್ಮಿಕ, ಬಾಲ್ಯವಿವಾಹಕ್ಕೆ ಒಳಗಾದ, ಒಳಗಾಗಬಹುದಾದ ಸಾಧ್ಯತೆಯಿರುಯವ ಕುಟುಂಬಗಳಿಗೆ **ಸಾಮಾಜಿಕ ಭದ್ರತಾ ಯೋಜನೆಗಳಡಿ/ಎನ್.ಆರ್.ಇ.ಜಿ.ಪಿಯಡಿಯಲ್ಲಿ** ಕೆಲಸ ನೀಡುವುದು.
- ಶಾಲೆಗಳಿಗೆ **ಮೂಲಭೂತ ಸೌಲಭ್ಯ ಕಲ್ಪಿಸುವ** ಬಗ್ಗೆ ಚರ್ಚೆ.
- ಮಾರಕ ರೋಗಗಳ ತಡೆ/ (ಏಚ್.ಐ.ವಿ/ಏಡ್ಸ್ ಚಿಕನಗುನ್ಯಾ, ಡೆಂಗ್ಯೋ ಇತ್ಯಾದಿ)
- ಎಸ್.ಡಿ.ಎಮ್.ಸಿಗಳ ಬಲವರ್ಧನೆ.
- ವಿಕೃತ ಮೂಡನಂಬಿಕೆಗಳಿಗೆ ಮಕ್ಕಳ ಬಲಿಯಾಗದಂತೆ ನಿಗಾ.
- ಮುಂದಿನ ತ್ರೈಮಾಸಿಕದಲ್ಲಿ ಮಹಿಳೆಯರ ಹಕ್ಕುಗಳು, ಮಕ್ಕಳ ಹಕ್ಕುಗಳು ಮತ್ತು ಸಂರಕ್ಷಣೆ ಹಾಗೂ ಸಾಮಾಜಿಕ ಸಮಸ್ಯೆಗಳು, ಮಾರಕ ರೋಗಗಳ ಕುರಿತು ಜಾಗೃತಿಗಾಗಿ **"ಜಾಗೃತಿ ಕಾರ್ಯಕ್ರಮಗಳ ಆಯೋಜನೆ"ಯ ಕ್ರಿಯಾ ಯೋಜನೆ** ಕುರಿತು ಚರ್ಚೆ.

| ತಹಶೀಲ್ದಾರರು | ಜನನ ಪ್ರಮಾಣ ಪತ್ರ, ಭಿಕ್ಷಾಟನೆ ನಿರ್ಮೂಲನೆ, ಬೀದಿ ಮಕ್ಕಳು, ಬಾಲ್ಯ ವಿವಾಹ ತಡೆ (ಸಾಮೂಹಿಕ ವಿವಾಹಗಳಿಗೆ ಅನುಮತಿ ನೀಡುವಾಗ ಪರಿಶೀಲನೆ) ಯೋಜನೆಗಳನ್ನು ನೀಡುವಾಗ ಬದ್ಧತಾ ಪ್ರಮಾಣ ಪತ್ರ ಪಡೆಯುವುದು, ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ (ಆರ್.ಐ), ಪೋಷಣೆ ಮತ್ತು ರಕ್ಷಣೆ, ಸಂಪೂರ್ಣ ಸಾಕ್ಷರತೆ ಸಾಧಿಸುವುದು, ಸ್ವಚ್ಛ ಕುಡಿಯುವ ನೀರು ಪೂರೈಕೆ. |
|---|---|
| ಕಾರ್ಯನಿರ್ವಾಹಕ ಅಧಿಕಾರಿಗಳು | ಜನನ ಪ್ರಮಾಣ ಪತ್ರ, ಬಾಲ್ಯ ವಿವಾಹ ತಡೆ, ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ (ಪಿ.ಡಿ.ಓ), ಯೋಜನೆಗಳನ್ನು ನೀಡುವಾಗ ಬದ್ಧತಾ ಪ್ರಮಾಣ ಪತ್ರ ಪಡೆಯುವುದು, ಗ್ರಾಮ ಪಂಚಾಯತ್ ಮಟ್ಟದ "ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆ ಮತ್ತು ರಕ್ಷಣಾ ಸಮಿತಿಗಳ" ಕಾರ್ಯನಿರ್ವಹಣೆ, ಪೋಷಣೆ ಮತ್ತು ರಕ್ಷಣೆ, ಸಂಪೂರ್ಣ ಸ್ವಚ್ಛ ಭಾರತ ಆಂದೋಲನಾ, ಸಂಪೂರ್ಣ ಸಾಕ್ಷರತೆ ಸಾಧಿಸುವುದು, ಸ್ವಚ್ಛ ಕುಡಿಯುವ ನೀರು ಪೂರೈಕೆ. |
| ತಾಲ್ಲೂಕು ಆರೋಗ್ಯಾಧಿಕಾರಿಗಳು | ಜನನ ಪ್ರಮಾಣ ಪತ್ರ, ಬಾಲ್ಯ ವಿವಾಹ ತಡೆ, ಚುಚ್ಚುಮದ್ದು ಕಾರ್ಯಕ್ರಮ, ಸ್ಕ್ಯಾನಿಂಗ್ ಸೆಂಟರಗಳ ಮೇಲ್ವಿಚಾರಣೆ, ಅಪೌಷ್ಠಿಕತೆ ಕಡಿಮೆಗೊಳಿಸುವುದು ಮತ್ತು ಮಕ್ಕಳ ಆರೈಕೆ, ಗರ್ಭಿಣಿ ತಾಯಂದಿರುಗಳ ಆರೈಕೆ, ಸಾಂಸ್ಥೀಕ ಹೆರಿಗೆ, ಪ್ರಧಾನ ಮಂತ್ರಿ ಮಾತೃ ಪೂರ್ಣ ಯೋಜನೆ, ಆರೋಗ್ಯವಂತ ಮಗು, ಪೋಷಣೆ ಮತ್ತು ರಕ್ಷಣೆ, ಕಬ್ಬಿಣಾಂಶಗಳ ಕೊರತೆಯಿರುವ ಮಕ್ಕಳ ಆರೈಕೆ, ಶಿಶು ಮರಣ ಮತ್ತು ತಾಯಂದಿರ ಮರಣ ತಡೆಗಟ್ಟುವುದು. |
| ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು | ಶೈಕ್ಷಣಿಕ ಸಂಸ್ಥೆಗಳಲ್ಲಿ ಮಕ್ಕಳ ಸುರಕ್ಷತಾ ನೀತಿ ಅನುಷ್ಠಾನ, ಮಕ್ಕಳ ಹಕ್ಕುಗಳ ಕ್ಲಬ್ ರಚನೆ, ಅನುಷ್ಠಾನ, ಭಿಕ್ಷಾಟನೆ ನಿರ್ಮೂಲನೆ. |

| ಕ್ಷೇತ್ರ ಶಿಕ್ಷಣಾಧಿಕಾರಿಗಳು | 100% ಶಾಲಾ ದಾಖಲಾತಿ, 100% ಶಾಲಾ ಹಾಜರಾತಿ, ಶೈಕ್ಷಣಿಕ ಸಂಸ್ಥೆಗಳಲ್ಲಿ ಮಕ್ಕಳ ಸುರಕ್ಷತಾ ನೀತಿ ಅನುಷ್ಠಾನ, ಮಕ್ಕಳ ಹಕ್ಕುಗಳ ಕ್ಲಬ್ ರಚನೆ, ಅನುಷ್ಠಾನ, ಶಾಲೆಯಿಂದ ಹೊರಗುಳಿಯುವುದನ್ನು ತಡೆಗಟ್ಟುವುದು. ಬಾಲ್ಯ ವಿವಾಹ ತಡೆ, ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ, |
|---|---|
| ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು | ಆರೋಗ್ಯವಂತ ಮಗು, ಅಪೌಷ್ಠಿಕತೆ ಕಡಿಮೆಗೊಳಿಸುವುದು ಮತ್ತು ಮಕ್ಕಳ ಆರೈಕೆ, ಗರ್ಭಿಣಿ ತಾಯಂದಿರುಗಳ ಆರೈಕೆ, ಕಬ್ಬಿಣಾಂಶಗಳ ಕೊರತೆಯಿರುವ ಮಕ್ಕಳ ಆರೈಕೆ, ಅಂಗನವಾಡಿಗಳ ನಿರ್ವಹಣೆ, (ಬೆಳಗ್ಗೆ 9 :30 ರಿಂದ 4:30), ತಾಯಿ ಹಾಲು (0–6 ತಿಂಗಳು), ಬಾಲ್ಯ ವಿವಾಹ ತಡೆ, ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ, |
| ನಗರ ಸಭೆ/ಪಟ್ಟಣ ಪಂಚಾಯತ್‌ಗಳು | ಜನನ ಪ್ರಮಾಣ ಪತ್ರ, ಬಾಲ್ಯ ವಿವಾಹ ತಡೆ, ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಯೋಜನೆಗಳನ್ನು ನೀಡುವಾಗ ಬದ್ಧತಾ ಪ್ರಮಾಣ ಪತ್ರ ಪಡೆಯುವುದು, ಗ್ರಾಮ ಪಂಚಾಯತ್ ಮಟ್ಟದ "ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆ ಮತ್ತು ರಕ್ಷಣಾ ಸಮಿತಿಗಳ" ಕಾರ್ಯನಿರ್ವಹಣೆ, ಪೋಷಣೆ ಮತ್ತು ರಕ್ಷಣೆ, ಸಂಪೂರ್ಣ ಸ್ವಚ್ಛ ಭಾರತ ಆಂದೋಲನಾ, ಸಂಪೂರ್ಣ ಸಾಕ್ಷರತೆ ಸಾಧಿಸುವುದು, ಸ್ವಚ್ಛ ಕುಡಿಯುವ ನೀರು ಪೂರೈಕೆ. |
| ಅರಕ್ಷಕ ವೃತ್ತ–ನಿರೀಕ್ಷಕರು | ಬಾಲಕಾರ್ಮಿಕ ಪದ್ಧತಿ ತಡೆ, ಬಾಲ್ಯವಿವಾಹ ತಡೆ, ಪೋಷಣೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳ ಕುರಿತು. |
| ಉಪ ನೋಂದಣಾಧಿಕಾರಿಗಳು | ಕಡ್ಡಾಯವಾಗಿ ಎಲ್ಲಾ ಮದುವೆಗಳ ನೊಂದಣಿ, |
| ಸ್ವಯಂ ಸೇವಾ ಸಂಸ್ಥೆಗಳು | ಮಕ್ಕಳ ಹಕ್ಕುಗಳ ಸಂರಕ್ಷಣೆಯಲ್ಲಿ ಅನುಷ್ಠಾನಾಧಿಕಾರಿಗಳಿಗೆ ಸಹಕಾರ ಮತ್ತು ಸಮುದಾಯದಲ್ಲಿ ಜಾಗೃತಿ. |

| ಜಿಲ್ಲಾ ಮಟ್ಟದ ಮಕ್ಕಳ ರಕ್ಷಣಾ ಘಟಕ ಆದೇಶ ಸಂಖ್ಯೆ: ಮಮಇ 79 ಮಭಾಬ 2011, ದಿನಾಂಕ: 23.09.2011 ಮತ್ತು ಸೇರ್ಪಡೆ ಆದೇಶ ಸಂ: ಮಮಇ 152 ಮಭಾಬ 2013, ದಿನಾಂಕ:24.09.2013 | | |
|---|---|---|
| ಕ್ರ.ಸಂ | ಹುದ್ದೆ | ಪದನಾಮ |
| 1 | ಜಿಲ್ಲಾಧಿಕಾರಿಗಳು. | ಅಧ್ಯಕ್ಷರು |
| 2 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್. | ಉಪಾಧ್ಯಕ್ಷರು |
| 3 | ಜಿಲ್ಲಾ ಪೊಲೀಸ್ ಅಧಿಕಾರಿಗಳು, | ಸದಸ್ಯರು |
| 4 | ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, | ಸದಸ್ಯರು |
| 5 | ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, | ಸದಸ್ಯರು |
| 6 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. | ಸದಸ್ಯರು |
| 7 | ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ. | ಸದಸ್ಯರು |
| 8 | ಒಬ್ಬರು ಮಕ್ಕಳ ಕ್ಷೇತ್ರದಲ್ಲಿ ಅನುಭವವಿರುವ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ, (ಪ್ರತಿ ಎರಡು ವರ್ಷಕ್ಕೊಮ್ಮೆ ಹೊಸ ಸದಸ್ಯರನ್ನು ನಾಮನಿರ್ದೇಶನ ಮಾಡುವುದು) | ಸದಸ್ಯರು |
| 9 | ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, | ಸದಸ್ಯ ಕಾರ್ಯದರ್ಶಿ |
| 10 | ಸದಸ್ಯ ಕಾರ್ಯದರ್ಶಿ/ಪ್ರತಿನಿಧಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ. | ಸದಸ್ಯರು |
| 11 | ಕಾರ್ಮಿಕ ಅಧಿಕಾರಿ, ಕಾರ್ಮಿಕ ಇಲಾಖೆ, | ಸದಸ್ಯರು |
| 12 | ಸದಸ್ಯರು, ಜಿಲ್ಲಾ ಪಂಚಾಯತ್, (ಜಿಲ್ಲಾ ಪಂಚಾಯತ್, ಮಹಿಳಾ ಸದಸ್ಯರು) | ಸದಸ್ಯರು |
| 13 | ಸದಸ್ಯರು, ಮಹಾನಗರ ಪಾಲಿಕೆ/ನಗರಸಭೆ (ಮಹಾನಗರ ಪಾಲಿಕೆ/ನಗರ ಸಭೆಯ ಒಬ್ಬ ಮಹಿಳಾ ಸದಸ್ಯರು. | ಸದಸ್ಯರು |

## ಜಿಲ್ಲಾ ಮಟ್ಟದ ಬಾಲ್ಯವಿವಾಹ ತಡೆಯುವ ಸಮನ್ವಯ ಮತ್ತು ಪರಿಶೀಲನಾ ಸಮಿತಿ;

**ಆದೇಶ ಸಂಖ್ಯೆ ಮಮಇ 105 ಮಮಅ 2013, ದಿನಾಂಕ 22-01-2014.**

1. ಜಿಲ್ಲಾಧಿಕಾರಿಗಳು – ಅಧ್ಯಕ್ಷರು
2. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು – ಸಹ ಅಧ್ಯಕ್ಷರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್– ಸದಸ್ಯರು.
4. ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು – ಸದಸ್ಯರು.
5. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು – ಸದಸ್ಯರು.
6. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು – ಸದಸ್ಯರು.
7. ಮಹಾನಗರ ಪಾಲಿಕೆ/ನಗರ ಸಭೆಯ ಆಯುಕ್ತರು – ಸದಸ್ಯರು.
8. ಮಹಿಳಾ ಮತ್ತು ಮಕ್ಕಳ ಕ್ಷೇತ್ರದಲ್ಲಿ ಸಕ್ರೀಯವಾಗಿ ಕಾರ್ಯನಿರ್ವಹಿಸುತ್ತಿರುವ 2 ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ – ಸದಸ್ಯರು.
9. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು – ಸದಸ್ಯ ಕಾರ್ಯದರ್ಶಿ.

**ವರ್ಷಕ್ಕೆ 4 ಸಮಾಲೋಚನಾ/ಪ್ರಗತಿ ಪರಿಶೀಲನಾ/ಅನುಸರಣಾ ಸಭೆ – ವರದಿ – ರಾಜ್ಯ ಮಟ್ಟಕ್ಕೆ.**

## ಜಿಲ್ಲಾ ಮಟ್ಟದ ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ತಡೆ ಸಮಿತಿ.

| ಕ್ರಸಂ | ಪದನಾಮ | ಹುದ್ದೆ |
|---|---|---|
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಜಿಲ್ಲಾ ಪಂಚಾಯತ್‌ನ ಮಹಿಳಾ ಸದಸ್ಯರು<br>(ಜಿಲ್ಲಾಧಿಕಾರಿಯವರಿಂದ ನಾಮ ನಿರ್ದೇಶಿತರಾದವರು) | ಉಪಾಧ್ಯಕ್ಷರು |
| 3 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ | ಸದಸ್ಯರು |
| 4 | ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು | ಸದಸ್ಯರು |
| 5 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು | ಸದಸ್ಯರು |
| 6 | ಕಾರ್ಮಿಕ ಅಧಿಕಾರಿಗಳು, ಕಾರ್ಮಿಕ ಇಲಾಖೆ | ಸದಸ್ಯರು |
| 7 | ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, | ಸದಸ್ಯರು |
| 8 | ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 9 | ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |
| 10 | ಸಿವ್ಹಿಲ್ ನ್ಯಾಯಾಧೀಶರು(ಹಿರಿಯ ವಿಭಾಗ) ಮತ್ತು ಮುಖ್ಯ ಜುಡಿಶಿಯಲ್ ಮ್ಯಾಜಿಸ್ಟ್ರೇಟ್ | ಸದಸ್ಯರು |
| 11 | ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು | ಸದಸ್ಯರು |
| 12 | 3 ಸ್ವಯಂ ಸೇವಾ ಸಂಸ್ಥೆಗಳು ( ಜಿಲ್ಲಾಧಿಕಾರಿಗಳಿಂದ ನಾಮನಿರ್ದೇಶಿತರಾದವರು) | ಸದಸ್ಯರು |
| ಆದೇಶ ಸಂಖ್ಯೆ : ಮಮಇ 167 ಮಭಾಬ2014, ಬೆಂಗಳೂರು, ದಿನಾಂಕ: 01.04.2016 | | |
| 13 | ಉಪನಿರ್ದೇಶಕರು, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ | ಸದಸ್ಯರು |
| 14 | ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ. | ಸದಸ್ಯರು |
| ಸೇರ್ಪಡೆ ಆದೇಶ ಸಂಖ್ಯೆ: ಮಮಇ 71 ಮಭಾಬ 2016, ದಿನಾಂಕ: 24.05.2016 | | |
| 15 | ದೇವದಾಸಿ ಪುನರ್ವಸತಿ ಅಧಿಕಾರಿ | ಸದಸ್ಯರು |
| 16 | ಎ.ಎಚ್.ಟಿ.ಯು ಘಟಕಗಳ ಅಧಿಕಾರಿಗಳು<br>(ಎ.ಎಚ್.ಟಿ.ಯು ಇಲ್ಲದ ಜಿಲ್ಲೆಗಳಲ್ಲಿ ಎಸ್.ಜೆ.ಪಿ.ಯು ಅಧಿಕಾರಿಗಳು, ಸಮಿತಿ ಸದಸ್ಯರಾಗಿರುತ್ತಾರೆ) | ಸದಸ್ಯರು |

## ಮಕ್ಕಳು ಸಂಕಷ್ಟಕ್ಕಿಡಾದಾಗ, ಪೋಷಣೆ ಮತ್ತು ರಕ್ಷಣೆಯ ಅಗತ್ಯವಿದ್ದಾಗ ತೊಂದರೆಗೊಳಗಾದಾಗ, ಕಾಣೆಯಾದಾಗ, ಪೋಷಕರ ಅಗತ್ಯವಿದ್ದಾಗ (ಅನಾಥರಾದಾಗ) ಸಂಪರ್ಕಿಸಬೇಕಾದವರ ವಿವರ:–

- ಮಕ್ಕಳ ಸಹಾಯವಾಣಿ–1098.
- ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ,
- ಜಿಲ್ಲಾ ಮಕ್ಕಳ ರಕ್ಷಣಾ ಘಟಕ.
- ಜಿಲ್ಲಾ ದತ್ತು ಸಲಹಾ ಕೇಂದ್ರ.
- ತಾಲ್ಲೂಕು ಮಕ್ಕಳ ರಕ್ಷಣಾಧಿಕಾರಿಗಳು.
- ರಾಜ್ಯ ಮಕ್ಕಳ ಆಪ್ತ ಸಮಾಲೋಚನಾ ಕೇಂದ್ರ–14499.
- ರಾಜ್ಯ ಮಕ್ಕಳ ರಕ್ಷಣಾ ನಿರ್ದೇಶನಾಲಯ–080–22867381.
- ರಾಜ್ಯ ಮಕ್ಕಳ ರಕ್ಷಣಾ ಆಯೋಗ –080–47181177.




## Makkala Grama Sabha



- Preparatory meeting
- Agenda setting
- Planning
- 60% time for CP issues, 40% for facilities
- Joint circular to all the GP level all stakeholders- President/PDO
- 1Week before letter should reach all Officials, people, children's and schools
- Circular should cover Agenda Also

## Main AGENDA FOR MGS

-100% Birth Certificate Registration/ Distribution
-100% Immunization (0-6 year)
-100% attendance in Anganawadi(3-6 YEAR)
-100% Attendance in 1std to 10$^{th}$ +2(PUC)
-100% GIRL CHILD EDUCATION.
- Zero OUT OF SCHOOL CHILDRENS.
- Zero CHILD MARRIAGE/CHILD LABOUR.
-Zero Trafficking and Child Abuse Case.















# ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 ಹಕ್ಕು ಆಧಾರಿತ ಮಕ್ಕಳ ರಕ್ಷಣೆ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಡಿ ಶಿಕ್ಷಣಸಂಸ್ಥೆಗಳಿಗಾಗಿರೂಪಿಸಲಾಗಿರುವ ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳು.

## 1.3.2 ಸುರಕ್ಷಾ ವಿಧಾನಗಳ ಸ್ಥಾಪನೆ:

ಸುರಕ್ಷತೆಯನ್ನು ಖಾತರಿಪಡಿಸುವ ವಿಧಾನಗಳನ್ನು ಕೆಳಕಂಡಂತೆ ವಿವರಿಸಲಾಗಿದೆ.

a. ಶೈಕ್ಷಣಿಕ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯನ್ನು ರೂಪಿಸಿ ಅಧಿಸೂಚನೆ ಹೊರಡಿಸುವುದು (EICPP).

b. ಹೊಂದಿಕೆಯಾಗಿರುವ ಮಾದರಿ ಸುರಕ್ಷಾ ಗಮನಿಕೆ ಪಟ್ಟಿಯನ್ನು ಹೊಂದಿರುವುದು.

c. ವಿಪತ್ತಿನ ಅಪಾಯವನ್ನು ತಗ್ಗಿಸುವ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವಿಕೆ.

d. ಮಕ್ಕಳ ಹಕ್ಕುಗಳ ಕ್ಲಬ್ಬುಗಳ ರಚನೆ.

e. ಸಿಬ್ಬಂದಿಗಳ ಮೌಲ್ಯಮಾಪನದಲ್ಲಿ ಮಗುವಿನ ಸುರಕ್ಷತೆಯ ಸೇರ್ಪಡೆ.

f. ಅರಿವು, ಮಾರ್ಗದರ್ಶನ ಮತ್ತು ಆಪ್ತಸಮಾಲೋಚನೆ ಕಾರ್ಯಕ್ರಮಗಳ ಆಯೋಜನೆ.

g. ವರದಿ ಮಾಡುವ ವಿಧಾನಗಳನ್ನು ಸೃಜಿಸುವುದು.

## 2.2 ಮಕ್ಕಳ ರಕ್ಷಣಾ ನೀತಿ ಅನ್ವಯಿಸುವಿಕೆ:

- ಈ ಮಾರ್ಗಸೂಚಿಗಳು ಎಲ್ಲಾ ಶೈಕ್ಷಣಿಕ ಸಂಸ್ಥೆಗಳಿಗೆ ಅನ್ವಯವಾಗಲಿದ್ದು, ಕೆಳಗಿನ ಸನ್ನಿವೇಶ ಮತ್ತು ಸಂದರ್ಭಗಳನ್ವಯ ವ್ಯಾಖ್ಯಾನಿಸಲಾಗಿದೆ.

ಅ. ಶೈಕ್ಷಣಿಕ ಸಂಸ್ಥೆಯ ಆವರಣದೊಳಗೆ, ಮಕ್ಕಳು ಒಳಗೊಳ್ಳುವ ಎಲ್ಲಾ ಅವಧಿಗಳಲ್ಲಿ, ಶೈಕ್ಷಣಿಕ ಸಂಸ್ಥೆಗೆ ಸಂಬಂಧಿಸಿದ ಯಾವುದೇ ಪ್ರತ್ಯಕ್ಷ ಅಥವಾ ಪರೋಕ್ಷವಾದ ಚಟುವಟಿಕೆಗಳಿಗೆ ಸಂಬಂಧಿಸಿದ, ಶಾಲಾ ಪೂರ್ವ ಮತ್ತು ನಂತರದ ಅವಧಿಗಳು ಮತ್ತು ರಜಾದಿನಗಳು ಸೇರಿರುತ್ತವೆ.

ಆ. ಶೈಕ್ಷಣಿಕ ಸಂಸ್ಥೆಯ ವಿಸ್ತರಗೊಂಡ ಪರಿಸರದಲ್ಲಿ ಒಂದು ವೇಳೆ ಶೈಕ್ಷಣಿಕ ಸಂಸ್ಥೆಯೊಂದಿಗೆ ಯಾವುದೇ ಸಂಬಂಧವಿರುವ, ಉದಾ: ನಿಲುಗಡೆ ಪ್ರದೇಶಗಳು, ಶೈಕ್ಷಣಿಕ ಸಂಸ್ಥೆಯಲ್ಲಿ ಕಾರ್ಯಕ್ರಮಗಳ ಸ್ಥಳಗಳು ಅಥವಾ ಪ್ರವಾಸಗಳು, ಸಂಸ್ಥೆಗೆ ಸಂಬಂಧಿಸಿದ ಪ್ರಯಾಣ ಮತ್ತು ಸಾರಿಗೆ ವ್ಯವಸ್ಥೆಗಳನ್ನು ಶೈಕ್ಷಣಿಕ ಸಂಸ್ಥೆಯು ಮಕ್ಕಳಿಗೆ ಏರ್ಪಡಿಸಿದಲ್ಲಿ.

## 4.2.1 ಮಕ್ಕಳ ರಕ್ಷಣಾ ಸಮಿತಿ (CPC)

- ಪ್ರತಿಯೊಂದು ಶಿಕ್ಷಣ ಸಂಸ್ಥೆಯೂ ಕೆಳಕಂಡವರನ್ನೊಳಗೊಂಡ ಮಕ್ಕಳ ರಕ್ಷಣಾ ಸಮಿತಿಯನ್ನು ರಚಿಸುವುದು.
- ಸಂಸ್ಥೆಯ ಮುಖ್ಯಸ್ಥರು ಸಮಿತಿಯ ಅಧ್ಯಕ್ಷರಾಗಿರುವರು
- ಒಬ್ಬರು ಅಥವಾ ಇಬ್ಬರು ಶಿಕ್ಷಕರಲ್ಲಿ, ಒಬ್ಬರನ್ನು ಮಕ್ಕಳ ರಕ್ಷಣಾ ಅಧಿಕಾರಿಯನ್ನಾಗಿ ನಿಯೋಜಿಸುವುದು.
- ಶಿಕ್ಷಣ ಸಂಸ್ಥೆಯ ಸಾಮರ್ಥ್ಯದನ್ವಯ ಇಬ್ಬರು/ಮೂವರು ಪೋಷಕರಲ್ಲಿ ಒಬ್ಬ ಮಹಿಳೆ ಸಮಿತಿಯಲ್ಲಿರುವರು. ಶಾಲಾಆಡಳಿತ ಮಂಡಳಿ/ ಪೋಷಕ–ಶಿಕ್ಷಕರ ಸಂಘವಿದ್ದಲ್ಲಿ (SDMC/PTA) ಸದರಿ ಸಮಿತಿಯ ಒಬ್ಬ ಪೋಷಕರನ್ನು ಒಬ್ಬ ಸದಸ್ಯರನ್ನಾಗಿ ಸೇರಿಸಿಕೊಳ್ಳುವುದು.

- 8ನೇ ತರಗತಿ ಅಥವಾ ಅದಕ್ಕಿಂತ ಉನ್ನತ ತರಗತಿಗಳ ಎರಡು ಅಥವಾ ಹೆಚ್ಚಿನ ವಿದ್ಯಾರ್ಥಿಗಳನ್ನು ಸಮಾನ ಲಿಂಗಾನುಪಾತದನ್ವಯ ಪ್ರತಿನಿಧಿಸುವಿಕೆಯನ್ನು ಹೊಂದಿರುವುದು.
- ಭದ್ರತಾ ಅಧಿಕಾರಿ (ಶಿಕ್ಷಣ ಸಂಸ್ಥೆಯು ಭದ್ರತಾ ಸಿಬ್ಬಂದಿಯನ್ನು ಹೊಂದಿದ್ದಲ್ಲಿ)

## ಶಿಕ್ಷಣ ಸಂಸ್ಥೆಗಳ ನೌಕರರು ನೀಡಬೇಕಾಗಿರುವ ಘೋಷಣೆ


- ನಾನು ಇದನ್ನು ಓದಿ, ಅರ್ಥಮಾಡಿಕೊಂಡು ಮತ್ತು *ನೀತಿ ಸಂಹಿತೆಯಲ್ಲಿ ತಿಳಿಸಿರುವಂತೆ ಅನುಸರಿಸಲು ಒಪ್ಪಿರುತ್ತೇನೆ.* ಮಕ್ಕಳ ರಕ್ಷಣೆ, ಸುರಕ್ಷತೆ ಮತ್ತು ಯೋಗಕ್ಷೇಮದ ಬಗ್ಗೆ ನನ್ನ ಬದ್ಧತೆಗಳು ಮತ್ತು ಜವಾಬ್ದಾರಿಗಳ ಬಗ್ಗೆ ನನಗೆ ಅರಿವಿರುತ್ತದೆ ಮತ್ತು ಶಿಕ್ಷಣ ಸಂಸ್ಥೆಯ ಒಳಗೆ ಮತ್ತು ಹೊರಗೆ ವೃತ್ತಿಪರ ನೈತಿಕತೆಗೆ ಬದ್ಧನಾಗಿರುತ್ತೇನೆ.
- ನೌಕರನ ಹೆಸರು : ––––––––––––––––––––––––––––––
- ನೌಕರನ ಪದನಾಮ :––––––––––––––––––––––––––––––
- ನೌಕರನ ಸಹಿ :––––––––––––––––––––––––––––––––––
- ದಿನಾಂಕ :––––––––––––––––––––––––––––––––––
- ಸ್ಥಳ :––––––––––––––––––––––––––––––––––


## 4.2.3 ಸಲಹಾ ಪೆಟ್ಟಿಗೆ

- ಶಿಕ್ಷಣ ಸಂಸ್ಥೆಯು ಮಕ್ಕಳಿಗಾಗಿ ಸಲಹಾ ಪೆಟ್ಟಿಗೆಯನ್ನು ಹೊಂದಿರುವುದು. ಮಕ್ಕಳು ಸಂಭವಿಸಿದ ಘಟನೆಯನ್ನು ವಯಸ್ಕರಿಗೆ ವರದಿಮಾಡುವ ಬದಲು, ತಮ್ಮ ಕಾಳಜಿಗಳು/ದೂರುಗಳು/ಸಲಹೆಗಳನ್ನು ಸಲಹಾ ಪೆಟ್ಟಿಗೆಯಲ್ಲಿ ಹಾಕಲು ಇಚ್ಛಿಸಬಹುದು. ಈ ವ್ಯವಸ್ಥೆಯನ್ನು ಪರಿಣಾಮಕಾರಿ ಪ್ರತಿಕ್ರಿಯೆಯ ವ್ಯವಸ್ಥೆಯನ್ನಾಗಿ ಬಳಸಲು ಮತ್ತು ಸದೃಢಗೊಳಿಸಲು
- ಶಿಫಾರಸ್ಸು ಮಾಡಿರುವ ಅಂಶಗಳು ಕೆಳಕಂಡಂತಿವೆ:
- ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಾಲೆಯಲ್ಲಿ ಒಂದಕ್ಕಿಂತ ಹೆಚ್ಚು ಸಲಹಾ ಪೆಟ್ಟಿಗೆಗಳನ್ನು ಮಕ್ಕಳು ಗೌಪ್ಯತೆಯಿಂದ ಬಳಸಲು ಅನುಗುಣವಾಗಿ ವಿವಿಧ ಸ್ಥಳಗಳಲ್ಲಿ ಲಭ್ಯವಿರುವಂತೆ ಇಡುವುದು.

## ಅ. ಸಲಹಾ ಪೆಟ್ಟಿಗೆಯಲ್ಲಿನ ಶಿಫಾರಸುಗಳು/ದೂರುಗಳಿಗೆ ಪ್ರತಿಕ್ರಿಯೆ ನೀಡುವಿಕೆ :


- ಮಕ್ಕಳ ರಕ್ಷಣಾಧಿಕಾರಿಯು, ಶಿಫಾರಸುಗಳು/ದೂರುಗಳನ್ನು ಮಕ್ಕಳ ಪ್ರತಿನಿಧಿಯ ಸಮ್ಮುಖದಲ್ಲಿ ಓದುವುದು ಮತ್ತು ಅವುಗಳನ್ನು ಸೂಕ್ತ ಕ್ರಮಕ್ಕಾಗಿ ಸುರಕ್ಷತಾ ಉಲ್ಲಂಘನೆಗಳು ಮತ್ತು ಅಸುರಕ್ಷಿತ ಉಲ್ಲಂಘನೆಳೆಂಬುದಾಗಿ ವಿಂಗಡಿಸುವುದು.
- ಮಕ್ಕಳ ರಕ್ಷಣಾಧಿಕಾರಿಯು ಮಗುವಿನ ದುರುಪಯೋಗವು ಸೇರಿದಂತೆ ಮಕ್ಕಳ ಸುರಕ್ಷತೆಯ ಉಲ್ಲಂಘನೆಯ ಪ್ರಕರಣಗಳಿದ್ದಲ್ಲಿ, ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯಲ್ಲಿ ಹೇಳಿರುವ ಪ್ರಕ್ರಿಯೆಯನ್ನು ಅನುಸರಿಸುವುದು.
- ಮಕ್ಕಳ ರಕ್ಷಣಾಧಿಕಾರಿಯು ಸಲಹೆಗಳ ಪುಸ್ತಕವನ್ನು ನಿರ್ವಹಿಸುವುದು ಮತ್ತು ದೂರುಗಳೊಂದಿಗೆ ಸಲಹೆಗಳು ಮತ್ತು ತೆಗೆದುಕೊಂಡಿರುವ ಕ್ರಮದ ವರದಿಯನ್ನು ಮಕ್ಕಳೊಂದಿಗೆ ವಿನಿಮಯ ಮಾಡಿಕೊಳ್ಳುವುದು ಹಾಗೂ ಇದನ್ನು ಮಕ್ಕಳ ರಕ್ಷಣಾ ಸಮಿತಿಯು ಪ್ರತಿ ಮೂರು ತಿಂಗಳಿಗೊಮ್ಮೆ ಪರಿಶೀಲಿಸುವುದು.


DCPU
CWC
JJB
SJPU
SCLP
CHILD LINE 1098
DLSA
NGOsCBOs
All CCIs, Fit persons
Taluk Magistrate
Convergence Of the Direct Implementation Agency


ಬಾಲಕಾರ್ಮಿಕ ಪುನರವಸತಿ ಕೇಂದ್ರಗಳು
ಮಕ್ಕಳ ಪಾಲನಾ ಸಂಸ್ಥೆಗಳು
ಶಾಲೆಗಳು
ಅಂಗನವಾಡಿಗಳು
ಕಸ್ತೂರಿ ಬಾ ವಸತಿ ಶಾಲೆಗಳು
ತಹಶೀಲ್ದಾರರು/ ತಾಲುಕು ಪಂಚಾಯತ್ ಕಾರ್ಯನಿರ್ವಣಾಧಿಕರಿಗಳು
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ / ತಾಲ್ಲೂಕು ಮಕ್ಕಳ ರಕ್ಷಣಾಧಿಕರಿಗಳ
ನೇರ ಸಂಬಂಧ, ಸಹಭಾಗಿತ್ವ
ಪ್ರಾಥಮಿಕ ಆರೋಗ್ಯ ಕೇಂದ್ರ
ಎಲ್ಲಾ ಸಮುದಾಯದ ವಸತಿ ನಿಲಯಗಳು
ನಗರ/ಸಮುದಾಯ ಆರೋಗ್ಯ ಕೇಂದ್ರಗಳು
ಎಲ್ಲಾ ವಸತಿ ಸಹಿತ ಶಿಕ್ಷಣ ಸಂಸ್ಥೆಗಳು
ಸಂಘ/ ಸಂಸ್ಥೆಗಳು
ರೈತ ಸಂಪರ್ಕ ಕೇಂದ್ರಗಳು
ಹಿರಿಯ ನಾಗರಿಕರ ವಸತಿ ಕೇಂದ್ರಗಳು
ಸ್ವಯಂ ಸೇವಾ ಸಂಸ್ಥೆಗಳು
ಅರ್ಹ ಸಂಸ್ಥೆಗಳು
ಬ್ಯಾಂಕ್ (ವಿಶೇಷ ಪಾಲನಾ ಯೋಜನೆ)




## TCPU-Taluk Child Protection Unit- Key Stake Holders







*ನವಗ್ರಹಗಳು: ನಮಃ ಸೂರ್ಯಾಯ ಚಂದ್ರಾಯ ಮಂಗಳಾಯ ಬುಧಾಯಚ*
*ಗುರುಶುಕ್ರ ಶನಿಭ್ಯಶ್ಚ ರಾಹವೇ ಕೇತುವೇ ನಮಃ*


## *ಮಕ್ಕಳ ದೃಷ್ಟಿಕೋನದಲ್ಲಿ ಈ ಗ್ರಹಗಳು ಯಾವುವು?*




**‘ನಮಃ ಗ್ರಾಮಪಂಚಾಯತಾಯ , ಶಾಲೆಯಾ, ಅಂಗನವಾಡಿಯಾಯ, ಆರೋಗ್ಯಯಾಯ, ಎಸ್‌ಡಿಎಂಸಿ, WCPC, ಪೋಲೀಸಶ್ಚ ಎನ್‌ಜಿಒ. ನಮಃ’**



ವೈದ್ಯರು
ಪೊಲೀಸ್
ಬಾಲವಿಕಾಸ ಸಮಿತಿ
ಎನ್.ಜಿ.ಓ
ಗ್ರಾಮ ಪಂಚಾಯತಿ
ಅಂಗನವಾಡಿ
ಶಾಲಾ ಶಿಕ್ಷಕರು
ಪಡಿತರ ಅಂಗಡಿ
ಶಾಲಾಭಿವೃದ್ಧಿ ಸಮಿತಿ
ಮಕ್ಕಳ ಹಕ್ಕು
ರಕ್ಷಣಾ ಗ್ರಹಗಳು


ಶಾಲಾ ಶಿಕ್ಷಕರು (ಶಾಲಾ ದಾಖಲಾತಿ)
ಪಿ. ಡಿ.ಎಸ್. ಆಹಾರ ವಿತರಣೆ
ಅಂಗನವಾಡಿ ಕಾರ್ಯಕರ್ತರು. (ಜನನ ನೊಂದಣಿ ಅಂಗನವಾಡಿ ದಾಖಲು)
ಎಸ್.ಡಿ.ಎಮ್.ಸಿ ಸದಸ್ಯರು (ಶಾಲಾ ಸಮಸ್ಯೆ ನೀಗಿಸಲು)
ಆಶಾ ಕಾರ್ಯಕರ್ತರು ಆರೋಗ್ಯ ಸಮಸ್ಯೆ, ಚುಚ್ಚುಮದ್ದು)
ಮಗು
ಗ್ರಾಮ ಲೆಕ್ಕಿಗರು/PDO (ಜನನ ಪ್ರಮಾಣ ಪತ್ರ)
ಸಾಕ್ಷರತಾ ಪ್ರೇರಕರು (ಕುಟುಂಬದಲ್ಲಿ ಜ್ಞಾನ ಅಕ್ಷರ ಕಲಿಕೆ)
ಪಂಚಾಯತ್ ಅಭಿವೃದ್ಧಿ ಅಧಿಕಾರಿ / ಕಾರ್ಯದರ್ಶಿ. (ಸರಕಾರಿ ಇಲಾಖೆ, ಸೌಲಭ್ಯ,ಹಾಗೂ ಕೊರತೆ ನೀಗಿಸಲು)
ಗ್ರಾಮ ಬೀಟ್ ಪೊಲೀಸ್ (ಹಿಂಸೆ, ದೌರ್ಜನ್ಯ, ಶೋಷಣೆಯಿಂದ ರಕ್ಷಣೆ)
JUST STOP!



ಪೌಷ್ಟಿಕ ಆಹಾರ.(ಮಹಿಳಾ ಮತ್ತು ಮಕ್ಕಳ
ಅಭಿವೃದ್ಧಿ
ಅಲ್ಪ ಸಂಖ್ಯಾತ
ಮಕ್ಕಳ ರಕ್ಷಣೆ (ಹಿಂದುಳಿದ & ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ)
ಎಲ್ಲಾ ರೀತಿಯ ಹಿಂಸೆ ದೌರ್ಜನ್ಯ ನಿರ್ಲಕ್ಷತೆಯಿಂದ ರಕ್ಷಣೆ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಪೊಲೀಸ್ ಇಲಾಖೇ )
ಅವಶ್ಯ ಮಕ್ಕಳಿಗೆ ವಸತಿ ಶಾಲೆ.(ಜಿಲ್ಲಾ ಪಂಚಾಯತ್ , ಸಮಾಜ ಕಲ್ಯಾಣ ಇಲಾಖೆ)
6–14 ವರ್ಷದ ಮೂಲಭೂತ ಶಾಲಾ ಶಿಕ್ಷಣ
(ಶಿಕ್ಷಣ ಇಲಾಖೆ)
ಮಗು
ಗರ್ಭಧಾರಣೆಯ ರಕ್ಷಣೆ, ಭ್ರಾಣಂತನ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ)
ಪೂರ್ವ ಪ್ರಾಥಮಿಕ ಶಿಕ್ಷಣ ಅಂಗನವಾಡಿ 3–6 ವರ್ಷ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)
ಸೂಕ್ತ ಚುಚ್ಚುಮದ್ದು
(ಆರೋಗ್ಯ ಇಲಾಖೆ)
ಜನನ ಪ್ರಮಾಣ ಪತ.
(ಕಂದಾಯ ಇಲಾಖೆ)





Make sure it's connected
before you start talking.







## ಮಕ್ಕಳು ಸಂಕಷ್ಟಕ್ಕೀಡಾದಾಗ, ತುರ್ತು ಸಂದರ್ಭದಲ್ಲಿ ಸಂಪರ್ಕಿಸಬೇಕಾದವರ ವಿವರ:–

- ಮಕ್ಕಳ ಸಹಾಯವಾಣಿ–1098.
- ಮಹಿಳಾ ಸಹಾಯವಾಣಿ–1091/181
- ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ–08539–220773.
- ಜಿಲ್ಲಾ ಮಕ್ಕಳ ರಕ್ಷಣಾ ಘಟಕ– 08539–225030.
- ತಾಲ್ಲೂಕು ಮಕ್ಕಳ ರಕ್ಷಣಾಧಿಕಾರಿಗಳು– 08539–221205.
- ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ– 08539–220233
- ಹಿರಿಯ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಗಳು ಕೊಪ್ಪಳ– 08539–230111.
- ಸಖಿ ಘಟಕ ಸಹಾಯವಾಣಿ ಕೊಪ್ಪಳ: 181 ಅಥವಾ 08539–225941.

## ರಾಜ್ಯ ಮಟ್ಟದ ಸಂಪರ್ಕಕಗಳು

- ರಾಜ್ಯ ಮಕ್ಕಳ ಆಪ್ತ ಸಮಾಲೋಚನಾ ಕೇಂದ್ರ– 14499.
- ರಾಜ್ಯ ಮಕ್ಕಳ ರಕ್ಷಣಾ ನಿರ್ದೇಶನಾಲಯ–080–22867381.
- ರಾಜ್ಯ ಮಕ್ಕಳ ರಕ್ಷಣಾ ಆಯೋಗ – 080–22115291/47181177.
- ರಾಜ್ಯ ಬಾಲ್ಯ ವಿವಾಹ ನಿಷೇಧ ಕೋಶ– 080–22351098.
- ರಾಜ್ಯ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನಾ ಕೋಶ– 080–22453549
- ರಾಷ್ಟ್ರೀಯ ಸೈಬರ್ ಅಪರಾಧ ತಡೆ – 1800–425–6235
- ಮನಸಿಕ ಆರೋಗ್ಯ ಸಲಹೆ –18005990019
- ಪೊಲೀಸ್ ಸಹಾಯವಾಣಿ: 112 (ERSS- Emergency Response System Support)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

**"ಸರಕಾರ ಈ ದೇಶದ ಪ್ರತಿಯೊಂದು ಮಗುವಿನ/ಮಕ್ಕಳ ಕಾನೂನಾತ್ಮಕ ಪೋಷಕ"**

**ಮಕ್ಕಳ ಶಿಕ್ಷಣ ಮತ್ತು ಸಂರಕ್ಷಣೆ ನಮ್ಮೆಲ್ಲರ ಹೊಣೆ**



ಧನ್ಯವಾದಗಳು

ಕೊಣಿಲ ರಾಘವೇಂದ್ರ ಭಟ್,
ಪ್ರಾದೇಶಿಕ ಸಂಯೋಜಕರು,
ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆ
ಕೊಪ್ಪಳ–583231. ದೂರವಾಣಿ: 9845699735.
ಮಿಂಚಂಚೆ : krbunicef@gmail.com

unicef for every child